ಲೇಖಕ:
ದಾ. ರಾ. ಬೇಂದ್ರೆ, ಎಂ.ಎ.,

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

ಮೈಸೂರು ವಿಶ್ವವಿದ್ಯಾನಿಲಯ ವಿಶೇಷೋಪನ್ಯಾಸಮಾಲೆ—೪

ಮಹಾರಾಷ್ಟ್ರ ಸಾಹಿತ್ಯ

ಪ್ರಧಾನ ಸಂಪಾದಕ:

ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ಲೇಖಕ:

ದಾ. ರಾ. ಬೇಂದ್ರೆ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

ಮೊದಲನೆಯ ಮುದ್ರಣ ೧೯೫೯

೧೦೦೦ ಪ್ರತಿಗಳು

ಸಾಮಾನ್ಯ ಪ್ರತಿ ರೂ. ೧-೧೫.   ಉತ್ತಮ ಪ್ರತಿ ರೂ. ೨-೧೫.

ಮುದ್ರಕರು : ಡಿ. ರಾಜರತ್ನಂ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಸಯ್ಯಾಜಿರಾವ್ ರೋಡ್, ಮೈಸೂರು.

ಮುನ್ನುಡಿ

ವಿಶ್ವವಿದ್ಯಾನಿಲಯದ ಪ್ರಗತಿ ಸಾಧನೆ ಮತ್ತು ಸಿದ್ಧಿಗಳನ್ನು, ಅದರ ಅಂಗ ಸಂಸ್ಥೆಗಳ ಸಂಖ್ಯೆಯಿಂದಾಗಲಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯಾಬಾಹುಳ್ಯದಿಂದಾಗಲಿ, ಪದವೀಧರರ ಆಧಿಕ್ಯದಿಂದಾಗಲಿ ನಿರ್ಧರಿಸುವುದು ಸರಿಯಲ್ಲ. ಸಂಶೋಧನೆ, ಜ್ಞಾನಾರ್ಜನೆ ಮತ್ತು ಜ್ಞಾನಪ್ರಸಾರ—ಇವು ಎಷ್ಟೆಷ್ಟು ಗಹನವಾಗಿ ಗಾಢವಾಗಿ ಸರ್ವವ್ಯಾಪಿಯಾಗಿ ನಡೆದರೆ ಅಷ್ಟಷ್ಟರ ಮಟ್ಟಿಗೆ ವಿಶ್ವವಿದ್ಯಾನಿಲಯದ ಖ್ಯಾತಿ, ಗೌರವ ಮಹತ್ವಗಳು ಅಧಿಕಗೊಂಡು ಅದಕ್ಕೆ ಸಾರ್ಥಕತೆ ಒದಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಈ ಧ್ಯೇಯತ್ರಯಗಳನ್ನು ತನ್ನ ಅಧ್ಯಾಪಕವರ್ಗದ ಮತ್ತು ವಿದ್ಯಾರ್ಥಿವೃಂದದ ಮೂಲಕ ಸಾಧಿಸುತ್ತಿದೆ. ಜ್ಞಾನಪ್ರಸಾರಕ್ಕಂತು ಪ್ರತ್ಯೇಕ ಶಾಖೆಯನ್ನೆ ತೆರೆದು, ಪುಸ್ತಿಕೆ ಪುಸ್ತಕ ಮಾಲೆಗಳ ಮೂಲಕ ತನ್ನ ಧ್ಯೇಯೋದ್ದೇಶಗಳನ್ನು ಕಾರ್ಯಗತ ಮಾಡುತ್ತಿದೆ.

ಈ ಉಪನ್ಯಾಸಗಳಲ್ಲಿ ಮುಖ್ಯವಾದುವು ಎರಡು: ಪ್ರಚಾರೋಪನ್ಯಾಸಮಾಲೆ ಮತ್ತು ವಿಶೇಷೋಪನ್ಯಾಸಮಾಲೆ. ಕೆಲವು ದಾನಿಗಳು ವಿಶ್ವವಿದ್ಯಾನಿಲಯಕ್ಕೆ ಬಿಟ್ಟಿರುವ ದತ್ತಿಯ ನೆರವಿನಿಂದಲೂ ಆಗಾಗ್ಗೆ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಇವುಗಳನ್ನೂ ವಿಶೇಷೋಪನ್ಯಾಸಮಾಲೆಗಳಲ್ಲಿಯೇ ಸೇರಿಸಬಹುದು.

ವಿಶ್ವವಿದ್ಯಾನಿಲಯದ ಸೋಪಾನವನ್ನೇರಲವಕಾಶವಿಲ್ಲದವರ ಮತ್ತು ಗ್ರಾಮಾಂತರದ ಸಾಮಾನ್ಯ ಜನರ ಅನುಕೂಲಕ್ಕಾಗಿ ಮತ್ತು ಅವರ ಜ್ಞಾನತೃಷೆಯನ್ನು ಕೆರಳಿಸುವುದಕ್ಕಾಗಿ ಪ್ರತಿವರ್ಷವೂ ಸುಮಾರು ೪೦-೫೦ ಬೇರೆ ಬೇರೆ ಊರುಗಳಲ್ಲಿ ಪ್ರಚಾರೋಪನ್ಯಾಸಗಳ ಕಾರ್ಯಕ್ರಮ ನಡೆಯುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರು ಕನ್ನಡದ ಮೂಲಕ ವಿಜ್ಞಾನ, ಯಂತ್ರವಿದ್ಯೆ, ಕೈಗಾರಿಕೆ, ಕಲೆ, ಸಮಾಜ ಶಾಸ್ತ್ರ, ಇತಿಹಾಸ ಮೊದಲಾದ ನಾನಾ ವಿಷಯಗಳನ್ನು ಕುರಿತು ಭಾಷಣಮಾಡುತ್ತಾರೆ. ಈ ಭಾಷಣಗಳಲ್ಲಿ ಕೆಲವನ್ನು ಆರಿಸಿಕೊಂಡು, ಮುದ್ರಿಸಿ, ಅತ್ಯಂತ ಕನಿಷ್ಠ ಬೆಲೆಗೂ ಮಾರುವುದುಂಟು.

ವಿಶೇಷೋಪನ್ಯಾಸಗಳು ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಪ್ರಯೋಜನಕ್ಕಾಗಿ ನಡೆಯುತ್ತವೆ. ದೇಶವಿದೇಶಗಳ ತಜ್ಞರನ್ನೂ ಪ್ರಾಧ್ಯಾಪಕರನ್ನೂ ಆಗಾಗ್ಗೆ ಆಹ್ವಾನಿಸಿ, ಅವರ ಭಾಷಣವನ್ನು ಏರ್ಪಡಿಸಿ, ಆ ಮೂಲಕ ಪರಸ್ಪರ ಸಂಪರ್ಕಕ್ಕೂ ವಿಚಾರವಿನಿಮಯಕ್ಕೂ ಅವಕಾಶ ಕಲ್ಪಿಸುವುದೇ ಈ ಮಾಲೆಯ ಉದ್ದೇಶ. ಈ ವ್ಯವಸ್ಥೆಯಿಂದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಯಾವ ಸಿಟ್ಟಿನಲ್ಲಿ ಕೆಲಸಮಾಡುತ್ತಿವೆ? ಮುಂದೆ ಆಗಬೇಕಾಗಿರುವ

ಕೆಲಸವೇನು ? ಅದನ್ನು ಹೇಗೆ ಕಾರ್ಯಗತ ಮಾಡಬಹುದು ? —ಇಂತೆಲ್ಲ ವಿಷಯಗಳ ತುಲನೆ ಮತ್ತು ಪರ್ಯಾಲೋಚನೆ ಸುಲಭಸಾಧ್ಯವಾಗುತ್ತದೆ. ಈ ಮಾಲೆಯ ಭಾಷಣಗಳು ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯಲ್ಲಿಯೂ ನಡೆಯುತ್ತವೆ. ಲಿಖಿತ ಭಾಷಣಗಳನ್ನು ಅಚ್ಚು ಹಾಕಿಸಲೂ ಅವಕಾಶವಿದೆ. ಇಂಗ್ಲಿಷ್ ಭಾಷಣಗಳು ಈಗಾಗಲೆ ಕೆಲವು ಅಚ್ಚಾಗಿವೆ. ಇದೆತಾನೆ ಕನ್ನಡದ ಭಾಷಣವನ್ನು ಮುದ್ರಿಸಲು ನಿರ್ಧರಿಸಿದೆ. ಪ್ರೊ. ದಾ. ರಾ. ಬೇಂದ್ರೆಯವರ ಮಹಾರಾಷ್ಟ್ರ ಸಾಹಿತ್ಯ ಈ ಮಾಲೆಯಲ್ಲಿ ನಾಲ್ಕನೆಯದು.

ಭರತಖಂಡದ ಪ್ರಮುಖ ಭಾಷಾಸಾಹಿತ್ಯಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಬೇಕೆಂಬ ಒಂದು ಉದ್ದೇಶವೂ ಈ ಗ್ರಂಥದಿಂದ ಆರಂಭವಾದಂತಾಗಿದೆ. ಪ್ರೊ. ದಾ. ರಾ. ಬೇಂದ್ರೆಯವರು ಕನ್ನಡದಲ್ಲಿ ಸುಪ್ರಸಿದ್ಧ ಸಾಹಿತಿಗಳು, ಉತ್ತಮ ಕವಿಗಳು ಆಗಿರುವಂತೆಯೇ ಮಹಾರಾಷ್ಟ್ರಸಾಹಿತ್ಯದಲ್ಲಿಯೂ ಆಳವಾದ ಪರಿಶ್ರಮವನ್ನು ಪಡೆದವರಾಗಿದ್ದಾರೆ. ಅವರ ಪ್ರತಿಭೆ, ಕಲ್ಪನಾಶಕ್ತಿ, ಮತ್ತು ಪಾಂಡಿತ್ಯಗಳನ್ನು ಒಳಗೊಂಡ ಈ 'ಮಹಾರಾಷ್ಟ್ರ ಸಾಹಿತ್ಯ'ವು ಸಾಹಿತ್ಯಾಭಿಲಾಷಿಗಳಿಗೂ ವಿಷಯ ವಿವೇಚನಾಪರರಿಗೂ ತುಂಬಾ ಪ್ರಯೋಜನಕಾರಿಯಾಗುತ್ತದೆಯೆಂದು ನಂಬಿರುತ್ತೇನೆ.

ಕೆ. ವಿ. ಪುಟ್ಟಪ್ಪ,
ವೈಸ್-ಛಾನ್ಸಲರ್.

ಮಹಾರಾಷ್ಟ್ರ ಸಾಹಿತ್ಯ

ಸಭಾಧ್ಯಕ್ಷರೆ, ಸಾಹಿತ್ಯರಸಿಕರೆ, ಸಂಸ್ಕೃತಿಸ್ನೇಹಿಗಳೆ—

ಮೈಸೂರು ವಿಶ್ವವಿದ್ಯಾನಿಲಯದವರು ತಮ್ಮ ಆಶ್ರಯದಲ್ಲಿ, 'ಮಹಾರಾಷ್ಟ್ರ ಸಾಹಿತ್ಯ'ವನ್ನು ಕುರಿತು ಮೂರು ಉಪನ್ಯಾಸಗಳನ್ನು ಮಾಡಲು ನನ್ನನ್ನು ನಿಯೋಜಿಸಿರುವುದಕ್ಕಾಗಿ ನಾನು ಆ ಮಹಾಸಂಸ್ಥೆಗೆ ಕೃತಜ್ಞನಾಗಿದ್ದೇನೆ. ನನ್ನ ಕೃತಜ್ಞತೆ ಇರಲಿ, ವಿಷಯದ ಔಚಿತ್ಯಕ್ಕಾಗಿ ಅವರ ಸ್ವಾಗತವನ್ನು ಮೆಚ್ಚಿದ್ದೇನೆ. ಕನ್ನಡ ನಾಡಿನ ಚತುಃಸೀಮೆಗಳಲ್ಲಿ ಪಶ್ಚಿಮವಂತೂ ಸಮುದ್ರದಿಂದ ವ್ಯಾಪ್ತವಾಗಿದೆ; ದಕ್ಷಿಣದಲ್ಲಿ ಕೇರಳವಿದೆ; ದಕ್ಷಿಣ-ಪೂರ್ವದಲ್ಲಿ ತಮಿಳುನಾಡಿದೆ; ಪೂರ್ವೋತ್ತರವ್ಯಾಪಿಯಾಗಿ ಆಂಧ್ರದೇಶವಿದ್ದು, ಉತ್ತರ-ಪಶ್ಚಿಮಗಳಲ್ಲಿ ಮಹಾರಾಷ್ಟ್ರ-ಕೊಂಕಣ ಪ್ರದೇಶವು ಹಬ್ಬಿಕೊಂಡಿದೆ. ಅಂತೂ ಉತ್ತರದ ಮೇರೆಯಲ್ಲಿ ಕನ್ನಡವು ಮಹಾರಾಷ್ಟ್ರವನ್ನು ಮೈಗೆಮೈಯಾಗಿ ಅಂಟಿಕೊಂಡಿದೆ. ಇಂದಿಗೂ ನಮ್ಮ ಉತ್ತರಕರ್ನಾಟಕದ ಕೆಲ ಭಾಗವು ದಕ್ಷಿಣಮಹಾರಾಷ್ಟ್ರದಲ್ಲಿ ಕೂಡಿದೆ. ಇಂಥ ಹತ್ತಿರದ ಬಾಂಧವ್ಯದ ಜನರ ಸಾಹಿತ್ಯಸಂಸ್ಕೃತಿಗಳ ವಿಷಯವಾಗಿ ಕನ್ನಡಿಗರು ಹೆಚ್ಚು ಹೆಚ್ಚು ಅರಿವುಳ್ಳವರಾಗುವದು ಹಿತಸಂಬಂಧಕ್ಕೆ ಬಹಳ ಅನುಕೂಲವಾಗುವದು. ಶಹಾಜಿ-ಶಿವಾಜಿಗಳ ಕಾಲದಲ್ಲಿ ಬೆಂಗಳೂರು ಸೀಮೆಯ ಸುತ್ತುಮುತ್ತ ಮರಾಟರು ವಾಸವಾಗಿದ್ದರಿಂದ, ಬೆಂಗಳೂರ ಜಿಲ್ಲೆಯಲ್ಲಿಯೇ ಮರಾಠಿ ಮಾತನಾಡುವವರ ಸಂಖ್ಯೆ ಸಾಮಾನ್ಯ ತಿಳಿವಳಿಕೆಗಿಂತಲೂ ಹೆಚ್ಚಾಗಿದೆ. ಮೈಸೂರಿನ ದಕ್ಷಿಣದಲ್ಲಿರುವ ತಂಜಾವೂರು ಸೀಮೆಯನ್ನು ಭೋಸಲೆ ವಂಶದ ರಾಜರು ಗತ ಶತಮಾನದ ಪ್ರಾರಂಭದವರೆಗೂ ಆಳಿದರು. ಟೀಪುವಿನ ಕಾಲದ ರಾಜಕೀಯ ಅಧಿಕಾರಿಗಳೊಬ್ಬರು ವೈರಾಗ್ಯದಿಂದ ಸರ್ವತ್ಯಾಗಮಾಡಿ ಸೊಲ್ಲಾಪುರದಲ್ಲಿ ನೆಲೆನಿಂತು 'ಶುಭರಾಯ'ರೆಂದು ಹೆಸರಾಗಿ ಮಹಾರಾಷ್ಟ್ರ ಭಾಷೆಯಲ್ಲಿ ಭಕ್ತಿಗೀತಗಳನ್ನು ರಚಿಸಿದ್ದಾರೆ. ಶ್ರೀರಂಗಪಟ್ಟಣದ ಹಿಂದವೀ ದಪ್ತರಿನವರು ಮಹಾರಾಷ್ಟ್ರ ಭಾಷೆಯಲ್ಲಿ ಅಷ್ಟು ಬಲ್ಲಿದರಾಗಿದ್ದರು. ಮಹಾರಾಷ್ಟ್ರದ ಸಂಬಂಧವು ಕರ್ನಾಟಕಕ್ಕೆ ಅತಿ ನಿಕಟವಾಗಿದೆ. ನಳ, ಗಂಗ, ಕದಂಬ, ರಟ್ಟ, ರಾಷ್ಟ್ರಕೂಟ, ಚಾಲುಕ್ಯ, ಯಾದವ ವಂಶದ ಕ್ಷತ್ರಿಯರೂ, ಆಯುಧೋಪಜೀವಿಗಳೂ ವಿಜಯನಗರೋತ್ತರಕಾಲದಲ್ಲಿ ಮಾತ್ರ ಮಹಾರಾಷ್ಟ್ರದ ಮರಾಠರ ೯೬ ಕುಲಗಳಲ್ಲಿ ಕಲಬೆರಿಕೆಯಾಗಿ ತನ್ಮಯರಾಗಿ ಕನ್ನಡಕ್ಕೆ ಹೊರತಾಗಿದ್ದಾರೆ. ಅವರಲ್ಲಿ ಕೆಲವರ ಕುಲದೇವತೆಗಳು ಈಗಲೂ ನಮ್ಮ ನಾಡಿನಲ್ಲಿಯೇ ಇವೆ. ಮೈಲಾರಖಂಡೋಬಾ, ಪಂಢರಪುರದ ವಿಠೋಬಾ, ತಿರುಪತಿಯ ವೆಂಕೋಬಾ, ಗಾಣಗಾಪುರದ ದತ್ತ ಈ ದೈವತಗಳೂ, ಗುರ್ಲಹೊಸೂರಿನ ಚಿದಂಬರಸ್ವಾಮಿಗಳು, ಅಕ್ಕಲಕೋಟೆಯ ಅವಧೂತರು, ಹುಬ್ಬಳ್ಳಿಯ ಆರೂಢರು, ಸೊಲ್ಲಾಪುರದ ಸಿದ್ಧರಾಮದೇವರು, ಗೋಂದಾವಲೀಕರ ಬ್ರಹ್ಮಚೈತನ್ಯರು, ಇವರೇ ಮೊದಲಾದ ಸಾಧು ಸಂತರೂ

ಕರ್ನಾಟಕಮಹಾರಾಷ್ಟ್ರಗಳನ್ನು ಸೂಕ್ಷ್ಮವಾದ ಭಾವಬಂಧನದಿಂದ ಬಿಗಿತಾಗಿ ಕಟ್ಟಿದ್ದಾರೆ. ಈ ಎರಡೂ ದೇಶಗಳು, ಜನಗಳು, ಭಾಷೆಗಳು ಭಾರತಮಾತೆಯ ವಾತ್ಸಲ್ಯ ಸಾಮ್ರಾಜ್ಯದಲ್ಲಿ ಸಹೋದರಜೀವಗಳು. ಇವು ಪರಸ್ಪರರ ಅಜ್ಞಾನದಲ್ಲಿ ಬಾಳುವದು ಹಿತಕಾರಕವಲ್ಲ. ಗತ ಶತಮಾನಗಳ ರಾಜಕೀಯ ಬಡೆದಾಟ, ಏರಾಟ, ಲೂಟಿಗಳಲ್ಲಿ ಒಬ್ಬರನ್ನೊಬ್ಬರು ದಬ್ಬಿದ್ದುಂಟು. ಈ ನೂಕುನುಗ್ಗಲು ಈಗ ಶಾಂತವಾಗುವ ಸಂದರ್ಭಗಳು ದೃಗ್ಗೋಚರವಾಗುತ್ತಿರುವ ಮಂಗಲಸಮಯದಲ್ಲಿ ಹಿಂದೆ ಒಂದಾನೊಂದು ಕಾಲದಲ್ಲಿ ಮಹರಾಜವಾಡಿಯನ್ನು ನೆರೆಹೊರೆ ಮಾಡಿಕೊಂಡ ಮಹಿಷಮಂಡಲದ ಈ ಮಹಾವಿದ್ಯಾಲಯವು ಮೈ ತುಂಬ ಎಚ್ಚರಗೊಂಡು ಸದ್ಯದ ಕಾಲದಲ್ಲಿ ಸಂಸ್ಕೃತಿ ಬಾಂಧವ್ಯದ ಕೈ ಚಾಚುತ್ತಿರುವದು ತುಂಬಾ ಶುಭಸೂಚಕವಾಗಿದೆ. ಈ ಉಪನ್ಯಾಸಗಳು ಅಂಥ ಸೌಮಾಂಗಲ್ಯದ ನಾಂದಿಯಾಗುವವೆಂದು ನಂಬಿದ್ದೇನೆ.

ಮಹಾರಾಷ್ಟ್ರಭಾಷೆ, ಆ ಭಾಷೆ ವ್ಯಾಪಿಸಿದ ದೇಶ, ಆ ದೇಶದಲ್ಲಿ ನೆಲೆಗೊಂಡ ಜನ ಇವುಗಳನ್ನು ಕುರಿತು ಪ್ರಾಸ್ತಾವಿಕವಾದ ನಾಲ್ಕು ಮಾತುಗಳನ್ನಾಡುವದು ಸಾಹಿತ್ಯ ಸಂಸ್ಕೃತಿಸಮಯಕ್ಕೆ ಉಚಿತವೆ ಎಂದೆನಿಸದಿರಲಾರದು. ಮಹಾರಾಷ್ಟ್ರವನ್ನು ವ್ಯಾಪಿಸಿ ನೆಲೆಗೊಂಡ ವೀರರೂ, ಸಾಧುಗಳೂ, ದುಡಿಯುವ ಬಡವರೂ ಮಹಾರಾಷ್ಟ್ರದಲ್ಲಿ ತುಂಬಿದ್ದಾರೆ. 'ಮಹಾರ'ರೆನಿಸುವ ನಾಗಹರಿಜನ ಬುದ್ಧರೂ, ಧನಗರ, ಕುರುಬರು, ಠಾಕೂರ ವಾರಲಿ ಮೊದಲಾದ ವನ್ಯರೂ, ಕೋಳಿ ಬೋಯಿ ಅಂಬಿಗರೂ ನೆಲಹಿಡಿದುಕೊಂಡು ನಿಂತಿದ್ದಾರೆ. ಮಹಾರಾಷ್ಟ್ರದಲ್ಲಿ ದೇಶ್ಯವಾದ ವಣಿಕ್ ವರ್ಗವಿಲ್ಲ. ಮರಾಠಿ ಕವಿಗೆ ತನ್ನ ದೇಶದ ಬಡತನ ಎದ್ದು ಕಾಣುವದು.

"ತುಝ್ಯಾ ಭುಕೇಲಾ ವರೀ ನಾಗಲೀ ಆಣಿಕಣೀಕೋಂಡಾ।
ವಹಾಣಪಾಯೀ ಅಂಗಿಕಾಂಬಳಿ ಉಶಾ ಖಾಲಿ ಧೋಂಡಾ॥
ವಿಳಾ ಕೋಯತಾ ಧರೀದಿಗಂಬರ ದಖ್ಖನಚಾ ಹಾತ।
ಇಕಡೇ ಕರ್ನಾಟಕ ಹಾಸತಸೆ ತಿಕಡೇ ಗುಜರಾತ"

—ಗೋವಿಂದಾಗ್ರಜ.

ಹಸಿವಿಗೇನು? ಬರಿ ಬರಗ ನವಣಿ ಕಡಿಕಾಳು ಕಾಡು ನೆಲ್ಲು।
ಕಾಲಲ್ಲಿ ಮೆಟ್ಟು, ಕಂಬಳಿಯ ತೊಟ್ಟು ತಲೆಗಿಂಬಿಗಿಟ್ಟು ಕಲ್ಲು॥
ದಖ್ಖನಿನ ಕೈಯ ಕುಡುಗೋಲು ಕೊಯ್ತ ಬರಿಗೈಯೊಳೆತ್ತಿಬಹುದು।
ಅತ್ತ ಕರ್ನಾಟ ಇತ್ತ ಗುಜರಾಥ ನಕ್ಕುನಲಿಯುತಿಹುದು॥

ಎಂದು ಅವನ ವರ್ಣನೆ. ಇದಕ್ಕೆ ಮರಾಠರ ಸಾಮ್ರಾಜ್ಯಲಾಲಸೆಯೂ, ಜ್ಞಾನಿಗಳ ವಿರಕ್ತಿಯೂ ಕಾರಣವೆಂದು ಹೇಳಬಹುದಾದರೂ, ಸಮಾಧಾನ ಸಿಕ್ಕುವಂತಿಲ್ಲ. ನಮ್ಮ ದೇಶದ ಆರ್ಥಿಕ ಸಾಮಾಜಿಕ ಇತಿಹಾಸದ ಸಿಂಹಾವಲೋಕನ ಕೂಡ ಇನ್ನೂ ಸರಿಯಾಗಿ

ಆಗಿಲ್ಲ. ಜನ ಏಕರಾಶಿಯವರಲ್ಲ; ಹೊಲಿ ಹದಿನೆಂಟು ಜಾತಿಯಲ್ಲಿಯೂ ಭಿನ್ನರಾಶಿಯ ಕಾಳುಕಡಿಗಳಿವೆ. ಮಹಾರಾಷ್ಟ್ರದ ಮೇರೆಯೂ ಕಾಲಕಾಲಕ್ಕೆ ತುಂಬಾ ವ್ಯತ್ಯಸ್ತವಾಗಿದೆ; ಅದರ ಸಾಮ್ರಾಜ್ಯ ಹೋಗಿ ಒಂದುವರೆ ಶತಮಾನವಾಗುತ್ತಬಂತು. ಹಿಂದುಸ್ಥಾನದ ದಕ್ಷಿಣೋತ್ತರಗಳಲ್ಲಿ ಚದುರಿ ಬಿದ್ದ ಸಂಸ್ಥಾನಗಳೂ ಭಾರತೀಯ ಸ್ವಾತಂತ್ರ್ಯದಿಂದ ಅಲ್ಲಲ್ಲಿಯೇ ವಿಲೀನವಾಗಿರುವದರಿಂದ, ಬೃಹನ್‌ಮಹಾರಾಷ್ಟ್ರದ ಮಹತ್ವಾಕಾಂಕ್ಷೆಯೂ ಜೀರ್ಣವಾದಂತೆಯೇ ಇದೆ. ಉಳಿದ ಮಹಾರಾಷ್ಟ್ರವೇನು ಚಿಕ್ಕದಿಲ್ಲ; ಜನಸಂಖ್ಯೆಯಲ್ಲಿ ಕರ್ನಾಟಕಕ್ಕಿಂತಲೂ ಮಿಗಿಲಾಗಿಯೇ ಇದೆ. ಅನೇಕ ಕಾರಣಗಳಿಂದ ಮಹಾರಾಷ್ಟ್ರದ ಚತುಃಸೀಮೆಗೂ ಈಗ ರೂಪ ಬರುತ್ತಲಿದೆ. ಆ ಪ್ರದೇಶದ ಬಹುರಾಶಿಕ ಜನಸಮುದಾಯಕ್ಕೆ ಈಗ ತನ್ನ ಸಾಹಿತ್ಯ ಸಂಸ್ಕೃತಿಗಳ ಅರಿವಿನಿಂದ ಸುಸಂಘಟಿತವಾಗುವ ಸಮಯವು ಭಾರತೀಯ ವಿವಿಧ ಭಾಷಾ ಪ್ರದೇಶಗಳ ಜನಗಳಂತೆ ಪ್ರಾಪ್ತವಾಗಿದೆ. ಜನಗಳ ಮತ್ತು ಪ್ರದೇಶದ ಏಕೀಕರಣವು ತಕ್ಕಮಟ್ಟಿಗೆ ಆಗಿದೆ. ಏಕಾತ್ಮತೆಯ ಐಕ್ಯಭಾವವು ತನ್ನ ಸ್ವರೂಪ ಪ್ರಾಪ್ತಿಯನ್ನು ಇನ್ನೂ ಮಾಡಿಕೊಳ್ಳಬೇಕಾಗಿದೆ. ಈ ಸ್ವರೂಪಪ್ರಾಪ್ತಿಯು ಸೈನಿಕರ ಕವಾಯತಿನಂತೆ Quick march ಎಂದೊಡನೆ ಆಗತಕ್ಕ ಮಾತಲ್ಲ. ಅದು ಒಳಅರಿವಿನಿಂದ ಪಿಂಡಗೊಂಡು, ಎಂಥ ಸಂಚಾರಿಭಾವಗಳಲ್ಲಿಯೂ ತನ್ನ ಸ್ಥಾಯಿಯನ್ನು ಕಳೆದುಕೊಳ್ಳದೆ ಬೆಳೆದು, ಬಲಿತು, ಮೂರ್ತರೂಪಗೊಳಬೇಕಾದರೆ ಶತಮಾನಗಳೂ ಬೇಕು. ಆ ತಪಸ್ಯೆಯನ್ನು ಮಹಾರಾಷ್ಟ್ರವು ಪ್ರಸಿದ್ಧವಾಗಿ ನೆರವೇರಿಸಿದೆ. ಅದು ಈಗ ತನ್ನ ಬಹಿರಂಗದೊಡನೆ ಚದುರಂಗವಾಡುತ್ತಿದೆ. ಆ ಬುದ್ಧಿಬಲದಲ್ಲಿ ಅದು ಉತ್ತೀರ್ಣವಾಗುತ್ತಲೆ ತನ್ನ ಸ್ವರೂಪಗುರುತ್ವದಿಂದ ಭಾರತೀಯ ರಾಷ್ಟ್ರಕಗಣದಲ್ಲಿ ಗಣ್ಯತೆಯಿಂದ ಮೆರೆಯುವದರಲ್ಲಿ ಸಂದೇಹವಿಲ್ಲ. ಕುರುಕ್ಷೇತ್ರದೊಳಗಿನ ಈ ಕರ್ಮಯೋಗವನ್ನು ಮಹಾರಾಷ್ಟ್ರವು ಪ್ರತಿ ಶತಮಾನದಲ್ಲಿಯೂ ಎಸಗುತ್ತ ಬಂದಿದೆ ಅದರಂಗವೇ ಸಾಹಿತ್ಯ, ಅದರಂತರಂಗವೆ ಸಂಸ್ಕೃತಿ; ಇತಿಹಾಸವು ಅದರ ರಂಗಭೂಮಿ. ಕರ್ನಾಟಕದಂತೆಯೇ ಮಹಾರಾಷ್ಟ್ರವೂ ತನ್ನ ಸಾಧು ಸತ್ಪುರುಷರಿಂದ, ಚತುರ ರಾಜಕಾರಣಿಗಳಿಂದ, ಜನ್ಮಾಂತರ ಸ್ನೇಹದಿಂದ ನಿಗಡಿತವಾದ ನರನಾರೀಗಣದಿಂದ, ಜೀವದ ಹಂಗುದೊರೆದು ದುಡಿಯುವ ವಿಪುಲವಾದ ಜನಸಮುದಾಯದಿಂದ ಸಮೃದ್ಧವಾಗಿ ಬೆಳೆದು ಬಂದಿದೆ. ಆದರೆ ಪ್ರಪಂಚವನ್ನೇ ಆವರಿಸಿದ ಸಂಕ್ರಾಂತಿಯು ಅದನ್ನು ಬಿಟ್ಟಿಲ್ಲ. ತನ್ನ ಸತ್ತ್ವಪರೀಕ್ಷೆಯಲ್ಲಿ ದ್ವಿಗುಣಿತ ಸತ್ತ್ವಸಂಪನ್ನವಾಗಿ ಉಳಿಯುವದು, ಬೆಳೆಯುವದು ಅದರ ಮಹತ್ಕಾರ್ಯವೇ ಆಗಿದೆ. ಅದರ ಈ ಷಡ್‌ದರ್ಶನವನ್ನು, ಸಾಕ್ಷಾತ್ಕಾರವನ್ನು ಮೂರು ಉಪನ್ಯಾಸಗಳಲ್ಲಿ ಮಾಡಿಕೊಡುವ ಶುದ್ಧ ಬುದ್ಧಿಯಿಂದ ಕಾರ್ಯಪ್ರಾರಂಭಮಾಡುತ್ತೇನೆ. ಇದು ತ್ರಿವಿಕ್ರಮಸಾಹಸ, ನಾನು ಬಲ್ಲೆ. ಆದರೆ ರಸಿಕರ ಉದಾರಹೃದಯದಲ್ಲಿ ಸಾಗರವನ್ನೆ ಆಪೋಶನಮಾಡಬಲ್ಲ ಅಗಸ್ತ್ಯಶಕ್ತಿಯಿದೆ. ತಮ್ಮ ಬುದ್ಧಿಯ ಅಂಗೈಯಲ್ಲಿ ಲಿಂಗದಂತೆ 'ಚುಳುಕಾ'ಗಿ ಒದಗುವದೆ ನನ್ನ ಹಾದಿ. ಮಹಾರಾಷ್ಟ್ರವಾಙ್ಮಯದ ಪರಿಸೂಚಿಯನ್ನು ರಚಿಸಲು ಶ್ರೀ.

ದಾತೆಯವರಿಗೆ ಬೃಹದಾಕಾರದ ಸಾವಿರ ಪುಟಗಳು ಸಾಕಾಗಿಲ್ಲ. 'ಮಹಾರಾಷ್ಟ್ರ ಸಾರಸ್ವತ' ದ ಸಾರರೂಪವಾದ ಸ್ವಾರಸ್ಯವನ್ನು ತಿಳಿಸಲು ವಿ. ಲ. ಭಾವೆಯವರು ಎಂಟು ನೂರು ಪುಟ ವೆಚ್ಚಮಾಡಿಯೂ, ಅದಕ್ಕೆ ಎರಡುನೂರು ಪುಟದ ಪುರವಣಿಯನ್ನು ಜೋಡಿಸಬೇಕಾಗಿದೆ ಡಾ. ಶಂ. ಗೊ. ತುಳಪುಳೆಯವರು. ಇದಾಯಿತು ಹಳೆಯ ಸಾಹಿತ್ಯದ ಕತೆ. 'ಆಧುನಿಕ ಮರಾಠೀವಾಙ್ಮಯದ ಇತಿಹಾಸ' ವನ್ನು ಪ್ರೊ. ಅ. ನಾ. ದೇಶಪಾಂಡೆಯವರು ಆರುನೂರು ಪುಟಗಳಲ್ಲಿ ವರ್ಣಿಸಿಯೂ ೧೯೨೦ಕ್ಕೆ ತಂದು ನಿಲ್ಲಿಸಿದ್ದಾರೆ. ನಾಟಕ, ಕತೆ, ಕಾದಂಬರಿ, ಕಾವ್ಯ, ವಿನೋದ, ಲಘುನಿಬಂಧ, ಪ್ರಬಂಧ, ಚರಿತ್ರೆ, ಸಂಶೋಧನ, ಸಂಘ ಸಂಸ್ಥೆಗಳು, ಸಾಮಾಜಿಕ ಚಟುವಟಿಕೆಗಳು–ಇವುಗಳ ಸಾಹಿತ್ಯಚರಿತ್ರೆಗಾಗಿ ಪ್ರತ್ಯೇಕವಾಗಿ ಬೃಹತ್ ಸಂಪುಟಗಳನ್ನೇ ಪಂಡಿತರು ಬರೆದಿದ್ದಾರೆ, ಬರೆಯಬೇಕಾದೀತು. ಹೀಗೆ ಆಧುನಿಕ ಮರಾಠೀ ಸಾಹಿತ್ಯವಿರುವಾಗ, ಆ ಸಾಹಿತ್ಯದ ಹೃದಯ ವೇನು? ಬುದ್ಧಿಮಹಿಮೆ ಯಾವ ಬಗೆಯದು? ಅದರ ತಂತ್ರವೈಚಿತ್ರ್ಯದ ಪ್ರಕಾರ ವಿಕಾರಗಳಾವುವು? ಇದನ್ನು ವಿಹಂಗಮದೃಷ್ಟಿಯಿಂದ ನೋಡುವದೇ ಸದ್ಯದ ಪ್ರಸಂಗಕ್ಕೆ ಸಮುಚಿತವಾಗಿದೆ ಎಂದು ನಾನು ಬಗೆಯುತ್ತೇನೆ. ಇನ್ನು ಜನದ ಬಗ್ಗೆ ದೇಶದ ಬಗ್ಗೆ ಪ್ರಸ್ತಾಪದ ಮಾತು. ಮಹಾರಾಷ್ಟ್ರದ ನರನಾರಿಯರನ್ನು ಕುರಿತು ಚಾಲುಕ್ಯ ಸೋಮೇಶ್ವರನು ತನ್ನ 'ಅಭಿಲಷಿತಾರ್ಥಚಿಂತಾಮಣಿ'ಯಲ್ಲಿ ಬಣ್ಣನೆ ಮಾಡಿದ್ದಾನೆ. ಮರಾಠಿ ಜಾನಪದಗೀತೆಗಳ ತುಣುಕುಗಳು ಉದಾಹರಣೆಗಾಗಿ ಅಲ್ಲಿ ಬಂದಿವೆ. ಮಹಾರಾಷ್ಟ್ರದ ಹೆಸರನ್ನು ಕನ್ನಡ ಆದಿಕವಿ ಪಂಪನು ಹೇಳುವನು. ಅಲ್ಲದೆ, ಕರ್ನಾಟ, ಆಂಧ್ರ, ಲಾಟ್ ವರಾಟದ ಸೈನಿಕರೊಡನೆ 'ಮಹಾನಾಟಕ'ರೆಂದು ಮರಾಠ ಸೈನಿಕರ ವರ್ಣನೆಯು ಭರತಚಕ್ರವರ್ತಿಯ ಸೈನ್ಯ ವರ್ಣನಾವಸರದಲ್ಲಿ ಬಂದಿದೆ. ಅದು ಹೀಗಿದೆ. ಸರ್ವಾಂಗೀಣ, ಸಾಂದ್ರ, ಹರಿದ್ರ, ವಿಲೇಪನ, ವಿಲಿಪ್ತ, ಹರಿತಾಳ, ಪಿಂಗಳ, ವಿಲಂಘಿತ, ಶಿಲಾಸ್ತಂಭ, ವಿಭ್ರಮ, ನಿತಂಬ, ಶಿಖರಿ, ತರಂಗಿತ, ಚತುರಂಗುಳಾಗ್ರ ಪಲ್ಲವನಿವಸನಂ ಅತಿ ಮಸೃಣವರ್ಣ ವ್ಯತಿಕರೋದೀರ್ಣ, ಶೋಭಾಪುಂಜ ರಂಜಾಪುರ ಪಟ್ಟಿಕಾನಂದ, ಕನಕಪತ್ರಾಂಕಿತ ಯೋಗಖಡ್ಗ ಪುತ್ರಿಕೋದ್ಭಾಸಮಾನ ಸುವರ್ಣಕೋಶಂ, ಅನತಿ ಜರಠಕರ್ಣಿಕಾ ಮುಕುಳಸ್ಥೂಳತ್ರಿಚತುರ ಸುವರ್ಣ ಕಂದೋದರ ಕಂಧರಂ, ಉತ್ಕಟ ಹಾಟಕ ಪದಕ ಮಣಿ ತ್ರಿಖಂಡ ಕರ್ಣಾಭರಣಂ, ಉದ್ಬದ್ಧ ಜೂಟಂ, ಅತ್ಯಂತ ಶೌರ್ಯ ಸೌಂದರ್ಯ ಪ್ರಕಾಶನ ಪರಿತ್ಯಕ್ತತನುಚ್ಛದಂ, ಉತ್ತಪ್ತ ರಜತಾವದಾತ ಲೋಹಪುತ್ರಿಕಾ ನಂದಲಾಕ್ಷಾಹಿಂಗುಲಿ ಕಪಾಟಫಲಕಂ, ಅರ್ಧ ಕರವಾಳ ಚಾಳನಪ್ರಕಟಿತ ಭಟಬಿಭೀಷಿಕಾಡಂಬರಂ ಅತಿಸ್ಫುಟವೀರ ಶೃಂಗಾರ ನಾಟಕಾಭಿನಯನಟವೃಂದಂ ಇದು ಮಹಾನಾಟಕಬಲಂ.

ಅದೇ ಬಗೆಯ ವರ್ಣನೆಯು ಪಂಪನ ಅನಂತರದಲ್ಲಿ ಬಂದ ಸೋಮದೇವನ ಯಶಸ್ತಿಲಕ ಚಂಪುವಿನಲ್ಲಿಯೂ ಬಂದಿದೆ. ಅವನು ಗೌರ್ಜರ, ತರಭುಕ್ತ, ಉತ್ತರ

ಸಥ, ದ್ರಾವಿಳದೊಡನೆ ದಾಕ್ಷಿಣಾತ್ಯ ಬಲವನ್ನು ವರ್ಣಿಸುತ್ತಾನೆ. ಅಂದರೆ ದಾಕ್ಷಿಣಾತ್ಯದಲ್ಲಿ ಕರ್ನಾಟ-ಮಹಾರಾಷ್ಟ್ರ ಕೂಡಿಬಂದಿವೆ. (Chap III)

ಮ. ದೇಶವ್ಯಾಪ್ತಿಯನ್ನು ಕುರಿತು ಮಹಾನುಭಾವ ಗ್ರಂಥಕಾರರೇ ಹೀಗೆ ಹೇಳಿದ್ದಾರೆ. ಫಲಟಣ ಸಂಸ್ಥಾನದ ಸುತ್ತಲಿನ ಸೀಮೆ, ಮೇಲೆ ಬಾಲಘಾಟದವರೆಗೆ, ವೈನಗಂಗಾ ಮತ್ತು ಗೋದಾವರಿ ಮಧ್ಯಪ್ರದೇಶ, ಮುಂದೆ ಮೇಘಕರ ಘಾಟದವರೆಗೆ, ವರಾಡ ಸಂಪೂರ್ಣ, ಎಲ್ಲ ಕೂಡಿ ಮಹಾರಾಷ್ಟ್ರ. ಪುಲಿಕೇಶಿಯ ಶಿಲಾಶಾಸನದ ಕವಿ ರವಿಕೀರ್ತಿಯು ಹೇಳುವ ೯೯ ಸಾವಿರದ ಮೂರು ಮಹಾರಾಷ್ಟ್ರಕವ್ಯಾಪ್ತಿ ಬೇರೆ ಆಗಿದೆ.

‘ಚಾವುಂಡರಾಯೇ ಕರವಿಯಲೇ’ ಚಾವುಂಡರಾಯಂ ಮಾಡಿಸಿದಂ ಇದೇ ಮರಾಠಿಭಾಷೆಯ ಮೊದಲನೆಯ ಪೂರ್ಣವಾಕ್ಯ. ಅಲ್ಲಿಂದೀಚೆ ಸಿಕ್ಕುವ ಮರಾಠಿ ಶಿಲಾಶಾಸನ ಸಂಪತ್ತು ದಶಮಾನಗಳಿಂದಲೆ ಎಂದು ಹೇಳಬಹುದು. ಆದು ಕನ್ನಡದಂತೆ ಸಾಹಿತ್ಯಸಂಪನ್ನವಲ್ಲ. ಕಲ್ಯಾಣದಲ್ಲಾದ ವೀರಶೈವಕ್ರಾಂತಿಯ ಅನಂತರದಲ್ಲಿ ದೇವಗಿರಿಯ ಸೇವುಣಯಾದವರು ಮರಾಠಿಗೆ ಆಶ್ರಯದಾತರಾದರು. ಪಂಡಿತರು ಜನಭಾಷೆಯಾದ ಮರಾಠಿಯನ್ನು ಎತ್ತಿಹಿಡಿದರು. ಆಗ ರಾಜರೂ ಮನ್ನಣೆ ಕೊಟ್ಟರು. ನೃಪತುಂಗನ ‘ಕವಿರಾಜಮಾರ್ಗ’ವು ಕನ್ನಡದಲ್ಲಿ ದೊರೆಯುವ ಪ್ರಥಮ ಸಂಪೂರ್ಣ ಗ್ರಂಥವಿರುವಂತೆ, ಮುಕುಂದರಾಜನ ‘ವಿವೇಕಸಿಂಧು’ವು ಮಹಾರಾಷ್ಟ್ರ ಸಾಹಿತ್ಯದ ಆದಿಗ್ರಂಥ ಎನ್ನಬಹುದು. ‘ಶಕೆ. ೧೧೦೦ ಸಾಧಾರಣ ಸಂವತ್ಸರದಲ್ಲಿ, ಶಾರಂಗಧರನು ರಾಜ್ಯವಾಳುವ ಸರ್ವೋತ್ತಮ ಸಮಯದಲ್ಲಿ ದ್ವಿಜೋತ್ತಮನಾದ ಮುಕುಂದನು ಮನೋರಮವಾದ ವಿವೇಕಸಿಂಧುವನ್ನು ನಿರ್ಮಿಸಿದನು. ನೃಸಿಂಹನ ಬಲ್ಲಾಳನು, ಅವನ ಕುಮಾರ ಜಯಂತಪಾಳನು, ಅವನೇ ಬರೆಸಿದನು, ಈ ಗ್ರಂಥವನ್ನು’ ಎನ್ನುತ್ತಾನೆ ಕವಿ. ಈ ನೃಸಿಂಹಬಲ್ಲಾಳ ಜಯಂತಪಾಳ ಹೊಯ್ಸಳರಿರಲಾರರು ಎಂಬ ಸಂದೇಹವಿದೆ. ಈ ತ್ರಯಿಯಲ್ಲಿ ಬಲ್ಲಾಳನನ್ನು ಸೇವುಣರ ಭಿಲ್ಲಮನೆಂದು, ಜಯಂತಪಾಳನು ಅವನ ಮಗ ಜೈತುಗಿ ಎಂದು ತಿಳಿದರೂ, ನೃಸಿಂಹನಿಗೆ ಮಾತ್ರ ಗತಿಯಿಲ್ಲ. ಮುಕುಂದರಾಜನ ಆಖ್ಯಾಯಿಕೆಗಳಿಂದ ಜಯಂತಪಾಳನು ವೈದಿಕ ಸಂಪ್ರದಾಯಕ್ಕೂ ಸಾಧು ವೇಷಧಾರಿಗಳಿಗೂ ಪ್ರತಿಕೂಲನಿದ್ದನೆಂದು ತಿಳಿದು ಬರುವದು. ಇವನ ಸ್ಥಳ ನಿಜಾಮಶಾಹಿಯೊಳಗಿನ ಮೋಮಿನಾಬಾದು, ಅದರ ಹಳೆಯ ಹೆಸರು ‘ಅಂಬೇಜೋಗಾಯಿ’ ಅಂದರೆ ಅಂಬಾಯೋಗಿನಿ. ಹೊಸ ಉತ್ಖನನದಿಂದ ಅದು ಜೈನರ ಗಂಡು-ಮೆಟ್ಟಾಗಿತ್ತೆಂದು ಕಂಡುಬರುವದು. ಈಗಲೂ ಅಲ್ಲಿ ಪ್ರಬಲ ಜೈನಬಸ್ತಿಯಿದೆ. ಜಂಗಮರ ಮಠಗಳು ಇವೆ ಎಂದು ಕೇಳಿದೆ-ಆದರೆ ಅಲ್ಲಿ ನಾನು ಹೋದಾಗ್ಗೆ ಅವುಗಳನ್ನು ಕಾಣಲಾಗಲಿಲ್ಲ. ವೈನಗಂಗೆಯ ಕೊಳ್ಳದಲ್ಲಿ ಮುಕುಂದರಾಜರ ಗುಡಿಯಿದೆ. ಅಂಬಾಯೋಗಿನಿಯು ಜೈನತೀರ್ಥಂಕರರ ಯಕ್ಷಿಣಿಯೂ ಇರಬಹುದು. ೬೪ ಯೋಗಿನಿಯರ ಪೀಠವೂ ಇಲ್ಲಿದೆ. ಮಹಾರಾಷ್ಟ್ರಭಾಷೆಯಲ್ಲಿ ತೀರ ಸ್ವಲ್ಪ ಜೈನವಾಙ್ಮಯವಿದೆ.

ಪ್ರಭಾವವಂತೂ ಇಲ್ಲವೆ ಇಲ್ಲ. ಜೈನ ಮಹಾರಾಷ್ಟ್ರಿಯು ಮರಾಠಿಗೆ ಪೂರ್ವಭಾವಿಯಾಗಿದ್ದರೆ, ಜೈನರೇ ಬರೆದಿರಬಹುದಾದ ಮರಾಠಿಗ್ರಂಥಸಂಪತ್ತಿಯು ಹೇಗೆ ಮಟಮಾಯವಾಗಿರಬೇಕು? ಇದು ಚಿಂತನೀಯವಾದ ವಿಷಯವು. 'ಸೇತುಬಂಧಾದಿ' ಕಾವ್ಯದ ಪ್ರಾಕೃತವು ಮರಾಠಿಗೆ ಹತ್ತುಗಡೆ ಎನ್ನುವದಾದರೆ, ಸೇತುಬಂಧದಲ್ಲಿ ಬಂದ 'ಸ್ಕಂದಕ'ವು ಕಂದವಾಗಿ ಕನ್ನಡದ ಮಹಾಕಾವ್ಯಗಳಿಗೆ ಹೇಗೆ ಮೈಗೊಟ್ಟಿತು? ಕಂದವನ್ನು ಮಟಮಾಯಮಾಡಿ ಮರಾಠಿಯಲ್ಲಿ 'ಆರ್ಯೆ' ಯಾಕೆ ಪ್ರಬಲವಾಯಿತು? ಅದಕ್ಕೂ ಮೊದಲು 'ಓವಿ' ಯೇ ಏಕೆ ಪಟ್ಟಾಭಿಷಿಕ್ತವಾಯಿತು? ಇದನ್ನು ಸಂಶೋಧಕರು ವಿವೇಚಿಸಬೇಕಾಗಿದೆ.

ಏನೇ ಇರಲಿ, ಮುಕುಂದರಾಜನ ವಿವೇಕಸಿಂಧುವು 'ಓವಿ' ಛಂದದಲ್ಲಿದೆ. ಕವಿಯು ಮೂಲ ಶೈವನಾದರೂ ನಾಥಪಂಥಗವನು ಎಂದು ತೋರುವದು. ವಿಷಯವಿವೇಚನೆಯ ಧೋರಣೆಯು ಶಾಂಕರ ಮಾರ್ಗದ ವೇದಾಂತ. ವೇದಾಂತವನ್ನು ಸಂಸ್ಕೃತದಲ್ಲಿಯೇ ಹೇಳಬೇಕೆಂಬ ನಿಯಮವೇನು? ಮರಾಠಿಯಲ್ಲಿ ಹೇಳಲಾಗದೆ? ಇದು ಇಲ್ಲಿಯ ನಿಲವು. ಆದರೆ ಮಹಾರಾಷ್ಟ್ರದ ಮಹಾನುಭಾವ ಪಂಥದವರಲ್ಲಿ ಮರಾಠಿಭಾಷೆಯ ವಿಷಯವಾಗಿಯೂ ದೇಶದ ವಿಷಯವಾಗಿಯೂ ಇರುವ 'ವೀರನಿಷ್ಠೆ'ಯು ಪೊಚ್ಚಪೊಸತು ಎಂಬಂತಿದೆ. ಮುಕುಂದರಾಜನ ಪೂರ್ವದಲ್ಲಿಯೂ ನಾಥಪಂಥದವರು ಮರಾಠಿಯಲ್ಲಿ ಬರೆದಿರಬಹುದು. ನಾಥಪಂಥೀಯರು ಯಾವ ಭಾಷೆಯಲ್ಲಿ ಬರೆದಿಲ್ಲ? ಬಂಗಾಲಿ, ಹಿಂದೀ, ಗುರ್ಜರ್, ಪಂಜಾಬೀ, ಕನ್ನಡದಲ್ಲಿ ಕೂಡ ಬರೆದಿದ್ದಾರೆ ಎನ್ನಬಹುದು. 'ಗೋರಕ್ಷ'ಕನ ಮುದ್ರಿಕೆಯ ಕನ್ನಡ ವಚನಗಳು ಪ್ರಭುವಿನ ಸಂವಾದಗಳಲ್ಲಿ ಶೂನ್ಯಸಂಪಾದನೆಯಲ್ಲಿ ಬರುತ್ತವೆ. ಒಂದೇ ಭಾಷೆಯಲ್ಲಿ ಬರೆವೇನೆಂಬ ಹಠವು ಮಹಾನುಭಾವಪಂಥೀಯರಿಗೆ ಮಾತ್ರ ಇದ್ದಿತು. ಯಾಕೆಂದರೆ ಪಂಥ ಹೊಸದು; ಭಾಷೆ ಹೊಸದು. ಕರ್ನಾಟಕದಲ್ಲಿ ಜೈನರು ನವಪಂಥದ ಅಭಿಮಾನದಿಂದಲೆ ತಮ್ಮ ಲೌಕಿಕ ಮತ್ತು ಆಗಮಿಕ ಕಾವ್ಯಗಳಿಗೆ ನವೀನವಾದ ಕನ್ನಡವನ್ನೆ ಮಾಧ್ಯಮವನ್ನಾಗಿ ಮಾಡಿದರು. ಈ ದೃಷ್ಟಿಯಿಂದ ಮುಕುಂದರಾಜನ ಪ್ರಾಕೃತ ಪ್ರೀತಿಯು ಮಹಾನುಭಾವರ ಪ್ರಭಾವದಿಂದ ಬಂದುದೆಂದು ತೋರುವದು. ಮುಕುಂದರಾಜನ ಭಾಷೆಯ ಥಾಟೂ ಕೂಡ ಮಹಾನುಭಾವಿಯ ಭಾಷೆಗಿಂತ ಅರ್ವಾಚೀನ. ಹೇಳಬೇಕಾದ ಮಾತು ತತ್ವದಲ್ಲಿ ಹಳೆಯದು, ಶಾಂಕರವೇದಾಂತಾನುಸಾರಿ. ಕನ್ನಡದಲ್ಲಿ ಈ ಬಗೆಯ ವಿಶಾಲವಿವೇಚನೆಯು ಮಹಾಲಿಂಗರಂಗನ ಅನುಭವಾಮೃತದಲ್ಲಿ ಬಂದಿತು. ಅಷ್ಟೇ ಏಕೆ ಮುಕುಂದರಾಜನ ವಿವೇಕಸಿಂಧುವಿನ ವಿಷಯಕ್ರಮಕ್ಕೂ ಅನುಭವಾಮೃತದ ಕ್ರಮಕ್ಕೂ ತುಂಬಾ ಹೋಲಿಕೆ ಇದೆ. ಈ ವಿಷಯವನ್ನು ಹೈದರಾಬಾದಿನ ಪ್ರೊ. ಡಿ. ಕೆ. ಭೀಮಸೇನರಾಯರು ತಮ್ಮ 'ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರಮಹಾರಾಷ್ಟ್ರ ಸಾಹಿತ್ಯಾವಲೋಕನವೆಂಬ ಪ್ರಬಂಧದಲ್ಲಿ ವಿಸ್ತಾರವಾಗಿಯೂ,

‘ಅನುಭವಾಮೃತ ಮತ್ತು ಹರಿಕಥಾಮೃತಸಾರ’ ವೆಂಬ ಉಪನ್ಯಾಸದಲ್ಲಿ ಸಂಗ್ರಹವಾಗಿಯೂ ತಿಳಿಸಿದ್ದಾರೆ. ಜೀವ, ಬ್ರಹ್ಮ, ಪರಮಾತ್ಮಾ, ಸಗುಣ-ನಿರ್ಗುಣಮಾಯೆ, ಅವಿದ್ಯೆ, ಪ್ರಪಂಚ ಈ ಪದಾರ್ಥಗಳ ನಿರ್ವಚನ ಅದರಲ್ಲಿದೆ ಎಂದರೆ ಎರಡೂ ಗ್ರಂಥದ ಸೋದರ ಸಾದೃಶ್ಯ ಬಲ್ಲವರಿಗೆ ತಾನೇ ಹೊಳೆಯುವುದು.

ಮನೆಯ ಮರವೇ ಕಲ್ಪತರುವಿನ
ಗೊನೆಯೆನುವ ತೆರ ಬೆಳೆದು ಬಂದರೆ
ತೊನೆದು ಮೊಲವರದಿಂದ ಬೆಳೆಸದೆ ಬಿಡುವರೆ.

ಇದನ್ನು ಹೇಳುತ್ತಾನೆ ಕವಿ ಮುಕುಂದರಾಜ. ಸಂಸ್ಕೃತವು ಕಲ್ಪತರುವು ಹೌದು. ಆದರೆ ಮನೆಯ ಮರವಾದ ಮರಾಠಿಯು ಅದಕ್ಕೆ ಕಡಿಮೆ ಇಲ್ಲವಲ್ಲ! ಅದನ್ನೇಕೆ ಪೋಷಿಸಬಾರದು? ವೇದಶಾಸ್ತ್ರಗಳ ಮಥಿತಾರ್ಥವೇ ಮರಾಠಿಯಲ್ಲಿ ಫಲಿತಾರ್ಥವಾಗಿ ಬಂದರೆ ಚತುರರಾದವರು ಆ ಪರಮಾರ್ಥವನ್ನು ಸ್ವೀಕರಿಸದಿರುವರೇ? ಲಲಿತವಹ ಕನ್ನಡದ ನುಡಿಯ ಸುಲಿದ ಬಾಳೆಹಣ್ಣು ಇರುವಾಗ ಸಂಸ್ಕೃತದೊಳಿನ್ನೇನು? ಸ್ವಭಾಷೆಯು, ಜನಭಾಷೆಯು, ಪಕ್ಷವಹಿಸುವ ಯುಕ್ತಿ, ದೃಷ್ಟಾಂತದ ಪರಿ, ದೃಷ್ಟಿ, ಇಬ್ಬರು ವೇದಾಂತಿಗಳಲ್ಲಿಯೂ ಒಂದೇ ಬಗೆಯದಾಗಿದೆ. ಮುಕುಂದರಾಜನು ಸಮರ್ಥನಾದ ವಕ್ತಾರನು, ಕವಿಯೂ; ಆದರೂ ಜ್ಞಾನದೇವನ ‘ಜ್ಞಾನೇಶ್ವರಿ’ಯ ಉದಯವು ಮಹಾರಾಷ್ಟ್ರದಲ್ಲಾದ ಮೇಲೆ ಅನೇಕಾನೇಕ ತಾತ್ತ್ವಿಕ ಗ್ರಂಥಗಳು ಈ ಗ್ರಂಥರಾಜನ ಸೂರ್ಯಪ್ರಭೆಯ ಮುಂದೆ ತಾರಾಗಣದಂತೆ ಅಡಗಿದಂತಾದವು ಮುಕುಂದರಾಜನ ಮತ್ತೊಂದು ಗ್ರಂಥ ‘ಪರಮಾಮೃತವು’ ವೇದಾಂತವಿಷಯದ ಚಿಕ್ಕ ಪ್ರಕರಣ. ಆದರೂ ಸ್ವಯಂಪೂರ್ಣ. ಮರಾಠಿಯ ಆದ್ಯಕವಿಯೆಂದು ಅವನಿಗೂ ಅವನ ಗ್ರಂಥಗಳಿಗೂ ಗೌರವವಿದ್ದೇ ಇದೆ.

ನಾನು ಇನ್ನುಮೇಲೆ, ಈ ಮೊದಲೆ ಹೆಸರೆತ್ತಿದ ಮಹಾನುಭಾವಪಂಥದ ಸಾಹಿತ್ಯವನ್ನು ಕುರಿತು ಚರ್ಚಿಸುತ್ತೇನೆ. ಮಹಾನುಭಾವ ಪಂಥದ ಪ್ರತಿಷ್ಠಾಪನಾಚಾರ್ಯನಾದ ಚಕ್ರಧರ, ಅವನ ಶಿಷ್ಯ ಶಿಷ್ಯೆಯರು ಅವನ ಗುರು ದೈವತಗಳ ಪರಿವಿಡಿ, ಗಂಡು-ಹೆಣ್ಣು ಎಲ್ಲರೂ ಕೂಡಿ ಹೇಳಿದ ಗುರುಚಾರಿತ್ರ್ಯ, ಅವರು ರಚಿಸಿದ ಅಪಾರ ಸಾಹಿತ್ಯ, ಅದರಲ್ಲಿಯೂ ಗೌರವಾರ್ಹವಾದ ಸಪ್ತಕಾವ್ಯಗಳು, ಅವರ ಮಠಗಳು, ಅವರ ಮತಪ್ರಚಾರ, ಗುರುವಿನ ಮಹಾಅವಸಾನ, ಅವರ ಗುಪ್ತಲಿಪಿ, ಅವರ ಅಜ್ಞಾತವಾಸ, ಅವರ ಬಗ್ಗೆ ತಪ್ಪುತಿಳಿವಳಿಕೆ, ಪಂಥೀಯರ ಉತ್ತರೋತ್ತರಗಮನ, ಇತ್ತೀಚಿಗೆ ಅವರ ಸಾಹಿತ್ಯವು ಪ್ರಕಾಶನಕ್ಕೆ ಬಂದ ಸಂದರ್ಭ-ಇವುಗಳಲ್ಲಿ ಒಂದೊಂದರ ಚರಿತ್ರೆಯೂ ಅದ್ಭುತದ ಅಧ್ಯಾಯವಾದೀತು. ‘ಮಾತಿನಲ್ಲಿ ಮಹಾನುಭಾವ, ಕೃತಿಯಲ್ಲಿ ಕಟುಕ’ ಎಂದು ತನ್ನ ಜನ್ಮಭೂಮಿಯಲ್ಲಿಯೇ ಇತರರಿಂದ ಹಂಗಿಸಿಕೊಂಡ ಈ ಜನ ಇಂದಿಗೂ

ಸಂಸ್ಕೃತಿಗೌರವದಿಂದ ಬಾಳಿ ಮತ್ತೆ ಮನ್ನಣೆ ಪಡೆಯುತ್ತಿರುವುದು ಅವರ ಗುರುವಿನ ಪುಣ್ಯ, ಶಿಷ್ಯಾವಳಿಯ ಶ್ರದ್ಧೆಯ ಬಲ, ಅವರ ಸಾಹಿತ್ಯದ ಸಕಲಾಂಗಪೂರ್ಣ ಮಹಿಮೆ ಎಂದೇ ಹೇಳಬೇಕು.

ಮಹಾನುಭಾವಪಂಥದ ಪ್ರತಿಷ್ಠಾಪನಾಚಾರ್ಯನು ಚಕ್ರಧರ ಎಂದು ಈ ಮೊದಲೆ ಹೇಳಿದೆ. ಅವನ ಮೂಲ ಹೆಸರು ಹರಪಾಲ. ಸೌರಾಷ್ಟ್ರದೊಳಗಿನ ಒಬ್ಬ ರಾಜನ ವರಪುತ್ರ; ಮಂತ್ರಿದಂಪತಿಗಳೇ ಅವನನ್ನು ತಂದೆತಾಯಿಗಳಾಗಿ ಬೆಳೆಸಿದರು; ಅವನು ಹುಟ್ಟಾ ಸುತರಾಂಸುಂದರ; ಪ್ರೌಢನಾಗಿ ಒಬ್ಬ ಸುಂದರಿ ಯನ್ನೂ ಮದುವೆಯಾದ. ಆದರೆ ಆಕೆಗೆ ಇವನ ಹೃದಯ ತಿಳಿಯಲಿಲ್ಲ. ವೈರಾಗ್ಯದ ಮೂಲಬೀಜ ಇದು. ಸೇವುಣ ಯಾದವರೊಡನೆ ತನ್ನ ರಾಜ್ಯಪಾಲನಕ್ಕಾಗಿ ಯುದ್ಧಮಾಡಿ ಗೆಲುವಾಂತ ವೀರನೂ ಇವ. ಮುಂದೆ ಅಕಸ್ಮಾತ್ತಾಗಿ ಬಂದ ರೋಗ ನಿಮಿತ್ತದಿಂದ ಪ್ರಾಣ ಬಿಟ್ಟ, ದೇಹವಿಟ್ಟ. ಆದರೆ ಸ್ಮಶಾನಕ್ಕೆ ತಂದ ಅವನ ದೇಹದಲ್ಲಿ ಈಶ್ವರೀ ಶಕ್ತಿಯ ಸಂಚಾರವಾಯಿತು. ಪೂರ್ವಜನ್ಮವನ್ನು ಮರೆಯದೆ ಅವನು ಪುನರ್ಜನ್ಮ ಪಡೆದ. ನವಜನ್ಮವನ್ನು ಪಡೆದು ಮುಂದೆ ಅವತಾರವೆನಿಸಿಕೊಂಡ. ಅನೇಕ ಸ್ತ್ರೀಯರನ್ನು ಮದುವೆಯಾದ, ಅವರನ್ನು ಕಾರಣಾಂತರಗಳಿಂದ ತೊರೆದು ದೇಶ ವಿದೇಶಗಳಲ್ಲಿ ಅಲೆದಾಡಿದ, ತೊಳಲಾಡಿದ; ಋದ್ಧಿಪುರದಲ್ಲಿ ಗುಂಡಮಪ್ರಭುವೆಂಬ ಗುರುವನ್ನು ಕಂಡು ದೀಕ್ಷಾನಂತರದಲ್ಲಿ ಚಕ್ರಧರನೆಂದು ಪ್ರಸಿದ್ಧಿಗೆ ಬಂದನು. ಬಸವಣ್ಣನವರ ಜೀವನದಂತೆಯೇ ಇವನ ಜೀವನದಲ್ಲಿ ಪವಾಡಗಳು ಸೂರೆ ಯಾಗಿವೆ. ಅನೇಕ ವಿದ್ವಾಂಸರು ಇವನ ಸಂಗಸಹವಾಸಸಂಪರ್ಕಗಳಿಂದ ವಿರಕ್ತ ರಾಗಿ ಇವನ ಶಿಷ್ಯರಾದರು. ಗೃಹಿಣಿಯರು ಮನೆ ತೊರೆದು ಭಕ್ತೆಯರಾದರು, ತರುಣಿಯರು ಮಧುರಾಭಾವದ ಮುಗ್ಧೆಯರಾದರು. ಚಕ್ರಧರನ ಮಹಾನ್ ಶಿಷ್ಯನಾದ ನಾಗದೇವಾಚಾರ್ಯನ ಕಟ್ಟುನಿಟ್ಟುಗಳಿಂದ ಪಂಥ ಪ್ರಬಲಿಸಿತು, ಸಾಹಿತ್ಯವು ಶಾಖೋಪಶಾಖೆಯಾಗಿ ಹಬ್ಬಿತು. ಆದರೂ ಪಂಥದ ನವ್ಯತೆಯಿಂದ, ಅವರ ಆಚಾರ ವೈಚಿತ್ರ್ಯದಿಂದ ಪಂಥಾಚಾರ್ಯನ ಅಲೌಕಿಕ ಮರಣದಿಂದ, ಗುಪ್ತಲಿಪಿಯಲ್ಲಿ ಸಾಹಿತ್ಯ ಬರೆದುದರಿಂದ, ಹಿಂದೂ ಚಾತುರ್ವರ್ಣಿತರಿಂದ ಸಿಡಿದು ಬೇರೆಯಾದುದರಿಂದ ಇವೇ ಬಗೆಯಾದ ಅನೇಕ ಕಾರಣಗಳಿಂದ, ಆದರೆ, ಎಲ್ಲಕ್ಕೂ ಹೆಚ್ಚಾಗಿ, ಜ್ಞಾನೇಶ್ವರಿಯ ಪ್ರಕಾಶನದಿಂದ ಮತ್ತು ವಾರಕರಿಪಂಥ, ದತ್ತಪಂಥ, ರಾಮದಾಸಿ ಪಂಥಗಳ ಒತ್ತಡದಿಂದ, ಮಹಾನುಭಾವಪಂಥದವರು ಪರದೇಶವಾಸಿಗಳಾಗಿಯೂ, ಅಜ್ಞಾತವಾಸಪ್ರಾಯರಾಗಿಯೂ ಬಾಳಿದರು. ಅವರು ಕನ್ನಡದೇಶಕ್ಕೂ ತೆಲಗು ನಾಡಿಗೂ ಹೋಗಬಾರದು, ಯಾಕೆಂದರೆ ಅದು ಪಾಖಂಡಿಗಳಿಂದ ತುಂಬಿದೆ ಎಂದು ಅವರ ಗುರುಗಳ ಅಪ್ಪಣೆಯಾಗಿತ್ತು. ಹೀಗಾಗಿ ಕನ್ನಡಕ್ಕೆ ಅದರ ಸೆಕೆ ತಾಕಲಿಲ್ಲ. ಕರ್ನಾಟಕದೊಳಗಿನ ಜೈನರ ಸನ್ಯಾಸಪ್ರವೃತ್ತಿ, ಪಾಂಡಿತ್ಯ, ಭಾಷಾಪ್ರೇಮ ಇವು ಮಹಾನು

ಭಾವರಲ್ಲಿ ಕಾಣುವವು. ವೀರಶೈವಶರಣರ ಪವಾಡವೈಶಿಷ್ಟ್ಯ, ಲೋಕವಿರೋಧಿ ಚರಿತ, ವೀರವೃತ್ತಿ, ನಿಷ್ಠೆ, ಚಾತುರ್ವರ್ಣ್ಯ ಬಾಹ್ಯ ಆಚಾರ ಇವುಗಳ ಸಾದೃಶ್ಯ ಮಹಾನುಭಾವಪಂಥದಲ್ಲೂ ಉಂಟು. ವಿವೇಕಚಿಂತಾಮಣಿಯೊಳಗಿನ ಶೈವ ದೇವತಾ ತಾರತಮ್ಯವನ್ನೋ, ಮಧ್ವಪರಂಪರೆಯ ದೇವತಾತಾರತಮ್ಯವನ್ನೋ ನೋಡಿದರೆ ಕೆಲವೊಂದು ಮತೀಯ ನಿಷ್ಠೆಯ ತತ್ತ್ವಸಾಮ್ಯವೂ ನಮಗೆ ಈ ಪಂಥದೊಡನೆ ತೋರುವದು. ಮಹಾನುಭಾವರು ಉತ್ತರದೇಶದಲ್ಲಿ ರಜಪುತಾನಾ, ಪಂಜಾಬ್, ಆಫಗಾನಿಸ್ತಾನ ವಾಯವ್ಯ ಸರಹದ್ದು ಪ್ರಾಂತಗಳಲ್ಲಿಯೂ ಹಬ್ಬಿದ್ದಾರೆ. ತನ್ನತನವನ್ನು ಕಾಯ್ದುಕೊಂಡಿದ್ದಾರೆ. ಆದರೆ ಅಲ್ಲಿಯ ಸುತ್ತಲಿನ ಸಮಾಜದ ಮೇಲೆ ಏನು ಪರಿಣಾಮ ಮಾಡಿದರೋ ಏನೊ ಲೆಕ್ಕಕ್ಕೆ ಹತ್ತಿಲ್ಲ; ಇನ್ನೂ ತಿಳಿದುಬಂದಿಲ್ಲ. ಮಹಾರಾಷ್ಟ್ರದಲ್ಲಿ ಮಾತ್ರ ಅವರ ತತ್ವಕ್ಕಲ್ಲದಿದ್ದರೂ ಅವರ ಸಾಹಿತ್ಯಕ್ಕೆ ಈಗ ಗೌರವಪ್ರಾಪ್ತವಾಗುತ್ತಾ ಇದೆ.

ಈ ಪಂಥದ ತತ್ತ್ವಜ್ಞಾನದ ವಿಶೇಷವನ್ನು ಕುರಿತು ಒಂದೆರಡು ಮಾತುಗಳನ್ನಾದರೂ ಹೇಳಲೇಬೇಕು. ಈ ತತ್ತ್ವವು ಚಕ್ರಧರಸ್ವಾಮಿ ಕಾಲಕಾಲಕ್ಕೆ ನುಡಿದ ಸಂಭಾಷಣೆಗಳಿಂದ ಮುಖ್ಯವಾಗಿ ಸಂಗ್ರಹಿಸಬಹುದಾಗಿದೆ. ಪಂಥದಲ್ಲಿ ಅನೇಕ ಆಮ್ನಾಯದ ಶಾಖೆಗಳಾಗಿ ಚಕ್ರಧರಚರಿತ್ರವೂ ವಿಸ್ತಾರಗೊಂಡಿದೆ. ಶಿಷ್ಯರ ಗುರುಭಕ್ತಿಯೂ, ಸತ್ಯನಿಷ್ಠೆಯೂ ಕೂಡಿಯೇ ಅದರಲ್ಲಿ ಕಂಡುಬರುವವು. ಇಂಥ ಮಹದ್ಭಾಗ್ಯ ಮಹಾರಾಷ್ಟ್ರದಲ್ಲಿಯಾಗಲಿ ಕರ್ನಾಟಕದಲ್ಲಿಯಾಗಲಿ ಇನ್ನೊಬ್ಬನಿಗೆ ಸಿಕ್ಕಿಲ್ಲ. ಶೂನ್ಯಸಂಪಾದನೆಯ ರೀತಿಯಾಗಲಿ, ಹರಿಹರನ ಬಸವದೇವರಾಜರಗಳೆಯಾಗಲಿ ಚಕ್ರಧರನ ಚರಿತ್ರದ ವಾಸ್ತವಿಕತೆಯ ಮಾನದಿಂದ ಕವಿಕಲ್ಪಿತ ಕೃತಿಗಳಂತೆ ತೋರುವವು. ಅದಿರಲಿ ಇತರ ಹಲವು ಮತಗಳಂತೆ ಮಹಾನುಭಾವರು ಮೋಕ್ಷವನ್ನೇ ಪರಮ ಪುರುಷಾರ್ಥವೆಂದು ತಿಳಿದರೂ ಅದು ಪರಮೇಶ್ವರ ಪ್ರಸಾದದಿಂದ ದೊರೆಯತಕ್ಕುದು. 'ಮೋಕ್ಷಯಿಷ್ಯಾಮಿ ಮಾಶುಚಃ' ಎಂದು ಗೀತೆಯಲ್ಲಿ ಬರುವ ಭಗವದುಕ್ತಿಯನ್ನು ಹಿಡಿದೇ ಈ ಮಾತಿದೆ. ಈಶ್ವರನಲ್ಲಿ ಭಕ್ತಿ, ಉಳಿದೆಲ್ಲ ಭೋಗಗಳ ಬಗ್ಗೆ ವಿರಕ್ತಿ, ಇದಕ್ಕೆ ಅಗತ್ಯ. ಜೀವಗಳು ಅನಂತವೆಂದೂ, ಅವು ನಿತ್ಯ, ಕೇವಲ ಮತ್ತು ಅನಾದಿ ಅವಿದ್ಯಾಯುಕ್ತವೆಂದೂ ಈ ಪಂಥದ ಮತ. ಈ ಅವಿದ್ಯೆಯಿಂದ ಮುಕ್ತಗೊಳಿಸುವದು ಈಶ್ವರಾಧೀನ. ದೇವತೆಗಳಲ್ಲಿ ೮ ಜಾತಿಗಳು. ವಿಶ್ವರೂಪದೇವತೆ ಒಂದೆ ಒಂದು; ಭೈರವರು ಎಂಟು; ಉಳಿದವು ಸಾವಿರಗಟ್ಟಲೆ, ಕೋಟಿಗಟ್ಟಲೆಯಾಗಿವೆ. ಪ್ರಪಂಚವು 'ಪರಿಣಾಮ' ಅಥವಾ 'ವಿವರ್ತ' ವಾಗಿರದೆ ಸ್ವತಂತ್ರವಾಗಿದೆ. ಜೀವ, ದೇವತೆಗಳು, ಪ್ರಪಂಚ, ಇವುಗಳಿಂದ ಭಿನ್ನನಾಗಿ ಪರಮೇಶ್ವರನಿದ್ದಾನೆ. ಪರಮೇಶ್ವರನು ಸಾಕಾರನಾಗಿಯೇ ತನ್ನ 'ಸಂನಿಧಾನ' ವನ್ನೊದಗಿಸುವನು. ಅವನ ದರ್ಶನ, ಅನುಸ್ಮರಣ, ಸೇವೆ, ಮತ್ತು ಸಂಬಂಧಗಳಿಂದ ಪರಮೇಶ್ವರನ ಕೃಪೆಯಾಗುವದು. ಚಕ್ರಧರನು ಇಂಥ ಪರಮೇಶ್ವರಾವತಾರ, ಆದರೆ ಗರ್ಭಾವತಾರವಲ್ಲ, ಜೀವಚ್ಯುತಿಗೊಳಿಸಿ ಸೇರಿದ ಅವತಾರ

ವಲ್ಲ,ಪತಿತಾವತಾರ. ಪತಿತ ದೇಹದಲ್ಲಿ ಈಶ್ವರಶಕ್ತಿ ಸೇರಿದ ಅವತಾರ. ಜ್ಞಾನವು ಶಾಬ್ದ, ಸತ್ತಾಕ, ಸಾಮಾನ್ಯ, ವಿಶೇಷವೆಂದು ನಾಲ್ಕುಬಗೆ. ಇದನ್ನು ಈ ಕ್ರಮವಾಗಿ, ಈಶ್ವರನೇ ಒದಗಿಸುವನು. ಚಕ್ರಧರನಿಗೆ ಅವನ ಶಿಷ್ಯರು ಅವತಾರಿಯೆಂದು ತಿಳಿಯುತ್ತಿದ್ದರಷ್ಟೆ ಅಲ್ಲ, ಸ್ವತಃ ಚಕ್ರಧರನೇ ಹಾಗೆ ಹೇಳಿದ್ದೂ ಉಂಟು. ಇದರಿಂದ ನಮ್ಮ ಕಾಲದ ಶ್ರೀ ರಾಮಕೃಷ್ಣಪರಮಹಂಸರ ನೆನಪಾಗುತ್ತದೆ. 'ಯಾವನು ರಾಮನಾಗಿದ್ದನೋ, ಕೃಷ್ಣನಾಗಿದ್ದನೊ ಅವನೇ ಈಗ ರಾಮಕೃಷ್ಣನಾಗಿದ್ದಾನೆ, ಎಂದು ಅವರು ವಿವೇಕಾನಂದ ರಿಗೆ ಸಾರಿ ಹೇಳಿದರು. ಈ ಪಂಥದಲ್ಲಿ ಐವರ ಅಧಿಕಾರವು ಮೌಲಿಕವಾಗಿದೆ. ಅವರೆಂದರೆ ಶ್ರೀ ಕೃಷ್ಣ, ಶ್ರೀ ದತ್ತಾತ್ರೇಯ; ದ್ವಾರಾವತಿಯ ಶ್ರೀ ಚಾಂಗದೇವ ಅಥವಾ ಚಕ್ರಪಾಣಿ, ಋದ್ಧಿಪುರದ ಶ್ರೀ ಗುಂಡಮಪ್ರಭು, ಕೊನೆಯವರು ಶ್ರೀ ಚಕ್ರಧರರು. ಹಲಪಾಲ ದೇಹದಿಂದಲೇ ಚಕ್ರಧರವುಲ್ಲಗೋಪಾಲ ಭಕ್ತಿ ಸಾಗಿಬಂದಿತ್ತು. ಮೃತರಾದಾಗ ದೇಹದಲ್ಲಿ ದ್ವಾರಾವತಿ ಚಾಂಗದೇವರೋ, ಹಿಮಾಲಯದಲ್ಲಿ ನಿಹಿತ ವಾದ ಪರಮೇಶ್ವರಶಕ್ತಿಯೋ ಅವರಲ್ಲಿ ಸೇರಿತು, ಸಂಹ್ಯಾದ್ರಿಯಲ್ಲಿ ವ್ಯಾಘ್ರರೂಪ ವಾಗಿ ಚಕ್ರಧರರಿಗೆ ಶ್ರೀ ದತ್ತಾತ್ರೇಯದರ್ಶನವಾಗುವದಲ್ಲದೇ ದೀಕ್ಷಾಗುರುಗಳಾದ ಗುಂಡಮಪ್ರಭುಗಳ ಸಂನಿಧಿ ಋದ್ಧಿಪುರದಲ್ಲಿ ದೊರಕಿತು. ಈ ಪಂಥದ ಆಚಾರ ನಿಯಮಗಳು ಸಂನ್ಯಾಸಿಗಳಿಗೆ ತಕ್ಕ ಹಾಗೆ ಕಟ್ಟುನಿಟ್ಟಿನವಾಗಿವೆ. ಇವರಲ್ಲಿ ಗೃಹಸ್ಥರೂ ಉಂಟು. ಸಂನ್ಯಾಸಿಗಳು ಚಾತುರ್ವರ್ಣ್ಯದವರಿಂದ ಭಿಕ್ಷಾಗ್ರಹಣ ಮಾಡಬಹುದು. ಈ ಪಂಥದ ದತ್ತಾತ್ರೇಯನು ಮೂರು ಮುಖದವನಾಗಿರದೆ, ಏಕಮುಖ, ಚತುರ್ಭುಜ ದವನಾಗಿದ್ದಾನೆ. ಭಾಗವತವು ಈ ಮಾತನ್ನೆ ಪುಷ್ಟೀಕರಿಸುವದು. ಈ ಪಂಥದ ವರು ಚೊಕ್ಕಾದ ಮರಾಠಿಯಲ್ಲಿ ವಿಪುಲ ಸಾಹಿತ್ಯವನ್ನು ಶತಕಾನುಶತಕ ನಿರ್ಮಿಸುತ್ತ ಬಂದಿದ್ದಾರೆ. ಆದರೂ ಏಳು ಗ್ರಂಥಗಳಿಗೆ ಬಹಳ ಮನ್ನಣೆಯಿದೆ. (೧) ಕವಿಶ್ವರ ಭಾಸ್ಕರಭಟ್ಟ (A.D. 1298) ಬರೆದ ಶಿಶುಪಾಲವಧ. ಓವಿ ಸಂಖ್ಯೆ ೧೦೮೭, ಶೃಂಗಾರ ರಸ ಪ್ರಧಾನಕಾವ್ಯ. ಇದರಲ್ಲಿ ಪ್ರವೃತ್ತಿಮಾರ್ಗವು ಉದ್ದೀಪಕವಾಗಿದೆ. ಅಂತೆಯೆ ಭಾಸ್ಕರಭಟ್ಟನು 'ಉದ್ಧವಗೀತೆ' ಎಂಬ ನಿವೃತ್ತಿಪರ ಕಾವ್ಯ ಆಮೇಲೆ ಬರೆದನು. (೨) ಈ ಉದ್ಧವಗೀತೆಯೆ ಎರಡನೆ ಗ್ರಂಥ. ಇದು 1309 A.D.ರಲ್ಲಿ ರಚಿತ ವಾಯಿತು. ಸುಮಾರು ೮೦೦ ಓವಿಗಳಿವೆ. ಇದರಲ್ಲಿಯೂ ಅಂಗವಾಗಿ ಬಂದ ಋಷ್ಯ ಶೃಂಗಾಖ್ಯಾನ ಬಂದು ಶೃಂಗಾರವು ಸೇರಿದೆ. (೩) ವಚ್ಛಹರಣವು ಭಾಗವತ ದಶಮ ಸ್ಕಂದವನ್ನು ಆಧಾರವಾಗಿಟ್ಟುಕೊಂಡು ಬರೆದ ಕಾವ್ಯ. ಬರೆದವನು ದಾಮೋದರಪಂಡಿತ. (೪) ನರೇಂದ್ರಕವಿಯು 1292 A.D.ರಲ್ಲಿ ರುಕ್ಮಿಣೀಸ್ವಯಂವರವನ್ನು ಬರೆದನು. ಇದು ಮೂಲದಲ್ಲಿ ದೊಡ್ಡದಾಗಿರಬೇಕು. ಸದ್ಯಕ್ಕೆ ಒಂದು ಭಾಗ ಮಾತ್ರ ದೊರಕಿದೆ. ಇದು ಕನ್ನಡದ ರುದ್ರಭಟ್ಟನ ಜಗನ್ನಾಥವಿಜಯದಂತೆ ಸಾಹಿತ್ಯ ಲಕ್ಷಣ ಸುಸಂಪನ್ನ ವಾಗಿದೆ. (೫) ವಿಶ್ವನಾಥ ಬರೆದ 'ಜ್ಞಾನಬೋಧ'ವು ಇದು ಭಗವದ್ಗೀತೆಯ ೧೩ನೆಯ ಅಧ್ಯಾಯದ 'ಅಮಾನಿತ್ವಾ'ದಿ ಐದು ಶ್ಲೋಕಗಳಿಗೆ ಬರೆದ ಟೀಕೆಯಾಗಿದೆ.

ಓವಿ ಸಂಖ್ಯೆ ೧೨೦೦, ಸ್ವತಂತ್ರವಿಚಾರವಿಸ್ತಾರವೂ ಇದೆ. (೬) ನಾರಾಯಣ ಪಂಡಿತವ್ಯಾಸನು ಋದ್ಧಿಪುರವರ್ಣನಕಾವ್ಯ ಬರೆದನು. ಓವಿ ಸುಮಾರು ೬೦೦-೭೦೦. ಚಕ್ರಧರನು ದೀಕ್ಷೆಪಡೆದಿದ್ದು ಋದ್ಧಿಪುರದಲ್ಲಿದೆ. ಆದ್ದರಿಂದ ಈ ಕ್ಷೇತ್ರ ಮಹಿಮೆಯನ್ನು ಕವಿಯು ಬಹುಭಕ್ತಿಯಿಂದ ಹೇಳಿದ್ದಾನೆ. ಏಳನೆಯದು,ಕೊನೆಯದು. 'ಸಹ್ಯಾದ್ರಿವರ್ಣನೆ'ಕಾವ್ಯ. ಇದರಲ್ಲಿ ಶ್ರೀ ದತ್ತಾತ್ರೇಯ ಲೀಲಾವರ್ಣನೆಯಿದ್ದು, ಮಾಹೂರಕ್ಷೇತ್ರವರ್ಣನೆಯೂ ಬಂದಿದೆ. ಶ್ರೀ ದತ್ತಾತ್ರೇಯನು ಶ್ರೀ ಕೃಷ್ಣಾವತಾರ ವೆಂದೇ ಇವರ ಶ್ರದ್ಧೆ. ಈ ಕಾವ್ಯದಲ್ಲಿ ಅಲರ್ಕಕಾರ್ತವೀರ್ಯರ ಕಥೆ ಬಂದಿವೆ. ಪರಶುರಾಮನ ತಪಶ್ಚರ್ಯೆಯ ಸಂಗತಿ ಬಂದಿದೆ. ದೀಕ್ಷಾಕತೆಯಂತೂ ಇದ್ದೇ ಇದೆ.

ಈ ಗ್ರಂಥಕಾರರಲ್ಲದೆ, ಹೀರಾಂಬಾ, ಮಹದಾಂಬಾ ಎಂಬ ಭಕ್ತೆಯರೂ ಹಾಡು ಬರೆದಿದ್ದಾರೆ. ಮಹದಾಂಬೆಯ 'ಧವಳ' ಗೀತಗಳಲ್ಲಿ ಕೆಲವು 'ಅಕ್ಕರ' ಜಾತಿಗೆ ಸೇರಿದವುಗಳಾಗಿವೆ ಎಂದು ನನಗೆ ತೋರಿದೆ. ಈ ಪಂಥಾನುಯಾಯಿಗಳಲ್ಲಿ ಅನೇಕರು ಸಂಸ್ಕೃತ ಪಂಡಿತೋತ್ತಮರಾಗಿದ್ದರಿಂದ ಸಂಸ್ಕೃತದಲ್ಲಿಯೂ ಪಂಥೀಯ ಗ್ರಂಥಗಳನ್ನು ಬರೆದಿದ್ದಾರೆ.

ಈ ವರೆಗಿನ ವಿವರಗಳಿಂದ ಮಹಾನುಭಾವ ಸಾಹಿತ್ಯದ ಸ್ಥೂಲಪರಿಚಯ ವಾಗಲು ಸಾಕು. ಅವುಗಳಲ್ಲಿಯ ವರ್ಣನಾಶೈಲಿ ನಮ್ಮ ಚಂಪೂ ಕಾವ್ಯಗಳಂತೆಯೆ ಇದೆ. ಆದರೂ ಸಂಸ್ಕೃತದ ಭಾರವಿಲ್ಲ. ಪ್ರಾಕೃತದ ಲಘುತನವಿದೆ. ಭೋಜನ ವರ್ಣನೆ ಯಲ್ಲಿ, ಸಜ್ಜಿಗೆ, ಮಂಡಿಗೆ, ಮೋದಕ, ಹಪ್ಪಳದ ಮಾತು ಬಂದಿದೆ; ವನ ವರ್ಣನೆಯಲ್ಲಿ ಖರ್ಜೂರ, ಮಾತುಳಂಗ, ಹಲಸು, ದಾಳಿಂಬ, ಅಶೋಕ, ಪಾರಿಜಾತಕ, ಚಂಪಕಗಳ ಉಲ್ಲೇಖವಿದೆ. ರಸಗಳು ಒಂಬತ್ತೆಂದೂ, ಶಾಂತವು ಪರಮೇಶ್ವರನಲ್ಲಿ ನಿರಂತರ ವಾಗಿದೆ ಎಂದೂ ಕವಿ ಹೇಳುತ್ತಾನೆ. ವತ್ಸಹರಣದ ಕತೆಯು ಅಜ್ಞಾನತಿಮಿರ ತರಣಿ ಯಾಗಿಯೂ, ಕೈವಲ್ಯಪದದ ನಿಶಾನಿಯಾಗಿಯೂ ಇದೆ ಎನ್ನುವನು ಕವಿ. ದ್ವಾರಾವತಿ ಕಂಡು ವೈಕುಂಠದ ಗರ್ವ ಕಳಚಿತು. ಕೈಲಾಸ ಅಲ್ಲಿ ನೀರಿನ ಊಳಿಗ ಮಾಡಿತಂತೆ. ಅಲ್ಲಿ ಸೂರ್ಯಚಂದ್ರರಿಬ್ಬರೂ ಸದೈವಪ್ರಸನ್ನರಾಗಿರುತ್ತಿದ್ದರು. ಶ್ರೀ ಕೃಷ್ಣನ ನಖ ಗಳಿಗೆ ಆಗ ಉಪಮೆ ಸಿಕ್ಕಿತು ಎಂದು ಉತ್ಪ್ರೇಕ್ಷಿಸಿದ್ದಾನೆ ಕವಿ. ಶಿಶುಪಾಲಯುದ್ಧ ವರ್ಣನೆಯಲ್ಲಿ ಎರಡೂ ದಳಗಳು ರಣರಂಗವನ್ನೇ ಗಾಣವನ್ನಾಗಿ ಮಾಡಿ, ಮಹಾ ಕಾಲನು ರಸ ಹಿಂಡುತ್ತಿದ್ದನಂತೆ. ನಮ್ಮ ತ್ರಿಪದಿಯಂತೆ ಓವಿಯ ವ್ಯಾಪ್ತಿಯೆ ಚಿಕ್ಕದು. ಆದ್ದರಿಂದ ಇಲ್ಲಿಯ ವರ್ಣನೆಯು ಗುತ್ತುಮಾಲೆಯಂತೆ ಇರದೆ ಬಿಡಿಮುತ್ತಿನಂತೆ ಉದುರುವದು.

ಮಹಾನುಭಾವರ ಪೂರ್ವದಲ್ಲಿಯೂ ಸಮಕಾಲದಲ್ಲಿಯೂ ನಾಥ ಸಂಪ್ರದಾಯವು ಮಹಾರಾಷ್ಟ್ರದ ಮಥನವನ್ನು ನಡೆಸಿಯೆ ಇತ್ತು ಮತ್ಸ್ಯೇಂದ್ರ, ಗೋರಖ

ಗಹಿನಿ, ಚರ್ಪಟಿ ಮೊದಲಾದ ನಾಥ ಸಿದ್ಧರ ಮಹಿಮೆ ಜನಮನವನ್ನು ಮುಟ್ಟುತ್ತಲೆ ಇತ್ತು. ಆದರೆ ಜ್ಞಾನದೇವನ ವಾಣಿಯಿಂದ ಮರಾಠಿಯು ಪಾವನವಾದಾಗಲೇ ಅದರ ನಿಜವಾದ ಪ್ರಭಾವವು ಪ್ರಕಾಶಿತವಾಯಿತು. ಅದನ್ನೇ ನಾನು ಮುಂದಿನ ಉಪ ನ್ಯಾಸದಲ್ಲಿ ವಿವರಿಸಬೇಕಾಗಿದೆ.

'ಗೋರಕ್ಷ-ಅಮರ-ಸಂವಾದ' 'ಗೋರಕ್ಷಗೀತ'ಎಂಬ ಪ್ರಕರಣಗಳು ಮರಾಠಿ ಯಲ್ಲಿವೆಯಂತೆ. ಮಹಾರಾಷ್ಟ್ರ ಸಾರಸ್ವತಕಾರರಾದ ಭಾವೆಯವರು ಗೋರಕ್ಷನ ಒಂದು 'ಪದ' ಉದ್ಧರಿಸಿದ್ದಾರೆ. ಅದರ ಅಭಿಪ್ರಾಯ ಹೇಳಿ ಇಂದಿನ ಮಾತಿಗೆ ಮಂಗಲಮಾಡುತ್ತೇನೆ.

ಕಲ್ಲಿನ ಗುಡಿಯಲ್ಲಿ ಕಲ್ಲಿನ ದೇವರು, ಕಲ್ಲಿನ ಪವಳಿ, ಅಲ್ಲಿ ಸಂದೇಹವೆಂತಳಿದೀತು? ನಿಜಲಿಂಗವನ್ನು ನಿರುಕಿಸಿ, ನಾನು ನೀನು ಅಳಿದಾಗ ದೇವರ ನೆಲೆ ಹತ್ತೀತು. ಪಾಂಡಿ ತ್ಯದ ಮಾತಿನಿಂದೇನು? ಗಂಗೆಯಲ್ಲಿ ಅಥಾಂಗವಾಗಿ ಮುಳುಗು ಹಾಕದೆ, ಬರಿ ಬಾಹ್ಯ ಪ್ರಕ್ಷಾಳನೆಯಿಂದ ಅಂತರಂಗವು ಆರ್ದ್ರವಾದೀತೇ? ಕರ್ಮಕಾಂಡದಿಂದ ಪ್ರಾಣಿಯ ಉದ್ಧಾರವಾಗದು. ಸಜೀವ ಬಿಟ್ಟು ನಿರ್ಜೀವ ಪೂಜಿಸಿದರೆ ಏನು ಫಲ? ಜಗವು ಅಂಧ ನಂತೆ ಗೊಂದಲಗೆಟ್ಟಿದೆ. ಆತ್ಮಲಿಂಗವನ್ನು ಹೃದಯದಲ್ಲಿ ಕಂಡುಕೊಳ್ಳಿ ಎನ್ನುತ್ತಾನೆ ಗೋರಖರಾಯ. ಸದ್ಗುರುವಿನ ಮಾತು ಕೇಳಿ ನಾವು ಸಂಸಾರದ ಮೇಲೆ ನೀರು ಬಿಟ್ಟೆ ವಯ್ಯಾ ನಿಜಲಿಂಗ ಸಾಧಕರಾಗಿ.

ಈ ಗೋರಕ್ಷನ ಶಿಷ್ಯ ಗಹಿನಿ, ಗಹಿನಿಯ ಶಿಷ್ಯ ನಿವೃತ್ತಿನಾಥ, ಅವನ ಶಿಷ್ಯ ಜ್ಞಾನದೇವ. ಅವನೇ ಮಹಾರಾಷ್ಟ್ರದ ಪ್ರಾಣಲಿಂಗ. ಅವನಲ್ಲಿ ಪ್ರತಿಷ್ಠೆ ಪಡೆದೆ ಮುಂದಿನ ಸಾಧು ಸಂತರು ಗತಿಗಂಡರು. ಆ ಕತೆ ನಾಳಿನದು.

ವಿಲಾಸ ಮಸೃಣೋಲ್ಲಸನ್ ಮುಸಲ ಲೋಕದೋಃಕಂದಲೀ।
ಪರಸ್ಪರ ಪರಿಸ್ಖಲತ್ ವಲಯ ನಿಸ್ವನೌದ ಬಂಧುರಾಃ॥
ಲಸಂತಿಕ ಲಹುಂಕೃತಿ ಪ್ರಸಭ ಕಂಪಿತೋ ರಸ್ಥಲ।
ತ್ರುಟತ್ ಗಮಕ ಸಂಕುಲಾಃ ಕಲಮಕಂಡನೀ ಗೀತಯಃ॥

—ವಿಜ್ಜಿಕಾ.

ಭತ್ತಕುಟ್ಟುವಾಗ, ಹೆಣ್ಣುಮಕ್ಕಳು, ಕಲಹುಂಕಾರಸಹಿತವಾಗಿ

ಗಮಕದ ತುಣುಕುಬಿಣುಕಿನಿಂದ ಹಿತವಾಗಿ, ಬಳೆಗಳ ನಿನಾದದೊಡನೆ

ಪದ್ಯ ಹೇಳಿತ್ತಿದ್ದರಂತೆ ಅದೇ ಮರಾಠಿಯ ಗೇಯ ಓವಿ, ಕನ್ನಡದ ಗೇಯ ತ್ರಿಪದಿ, ಒನಕೆವಾಡು.

ಎರಡನೆಯ ಉಪನ್ಯಾಸ

ಮಿತ್ರರೇ, ಇಂದಿನೀ ಉಪನ್ಯಾಸದಲ್ಲಿ ಹಲವು ಶತಕಗಳ ಕಾಲಖಂಡವನ್ನು ವ್ಯಾಪಿಸಬೇಕಾಗಿದೆ. ನಿನ್ನೆಯ ದಿನ, ದೇವಗಿರಿ ಯಾದವರ ರಾಜ್ಯದಲ್ಲಿ ತಲೆಯೆತ್ತಿ, ಒಂದೆರಡು ತಲೆಮಾರಿನಲ್ಲಿ ಪ್ರತಿಷ್ಠೆಗೊಂಡ ನಾಥಪರಂಪರೆಯ, ಮಹಾನುಭಾವಪಂಥದ ಸಾಹಿತ್ಯವನ್ನು ಕುರಿತು ಹಲವು ಮಾತುಗಳನ್ನು ಹೇಳಿದ್ದಾಯಿತು. ಜ್ಞಾನದೇವನಿಂದ ಮಹಾರಾಷ್ಟ್ರದ ವಿವಿಧೋಪಾಸನೆಗಳಲ್ಲಿ ಏಕಾತ್ಮತೆ ಬಂತು. ಇದಕ್ಕೆ ಕಾರಣ ಆವರ ಮನೆತನದ ತಲೆತಲಾಂತರದ ಚರಿತ್ರೆ; ಜ್ಞಾನದೇವನ ಮನೆತನದಲ್ಲಿ ವಿಠ್ಠಲಭಕ್ತಿಯೂ, ನಾಥದೀಕ್ಷೆಯೂ ಮೊದಲೇ ಹುರಿಗೊಂಡು ಬಂದಿದ್ದವು. ಇವರ ತಂದೆ ವಿಠ್ಠಲಪಂತ ಲೋಕಾತೀತಚರಿತರು. ಬಾಲ್ಯದಿಂದಲೆ ವಿರಕ್ತಿಯನ್ನು ತಾಳಿ ತೀರ್ಥಕ್ಷೇತ್ರ ದರ್ಶನಕ್ಕಾಗಿ ಅಲೆದಾಡುತ್ತಿರುವಾಗ, ದೈವಯೋಜನೆಯಿಂದ ಆಳಂದಿ ಕ್ಷೇತ್ರದ ರಖುಮಾಬಾಯಿಯನ್ನು ಮದುವೆಯಾಗಿ, ಮತ್ತೆ ವಿರಕ್ತಿತಾಳಿ, ಉತ್ತರ ಹಿಂದುಸ್ಥಾನದ ಯಾವುದೊ ರಾಮಾನಂದಗುರುವಿನಿಂದ ಸಂನ್ಯಾಸದೀಕ್ಷೆ ಹೊಂದುತ್ತಾರೆ. ಗುರುವಿಗೂ ಈ ಸಂಗತಿ ತಿಳಿದು ಆವರ ಆಜ್ಞೆಯಿಂದಲೆ ಮತ್ತೆ ಸಂಸಾರದಲ್ಲಿ ಕಾಲಿಕ್ಕುತ್ತಾರೆ. ಸಂನ್ಯಾಸೋತ್ತರ ದಾಂಪತ್ಯಯೋಗದಲ್ಲಿ ಅವರಿಗೆ ನಾಲ್ಕು ಮಕ್ಕಳು ಹುಟ್ಟುತ್ತಾರೆ. ಆವರೇ ನಿವೃತ್ತಿ, ಜ್ಞಾನದೇವ, ಸೋಪಾನ ಮತ್ತು ಮುಕ್ತಾಬಾಯೀ ವಿಠ್ಠಲಪಂತರು ತಮ್ಮ ಸಂತಾನಕ್ಕೆ ನಾಮಕರಣ ಮಾಡುವಾಗ ಸಾಕಾರಸಿದ್ಧಿಗಳನ್ನೆ ಪಡೆದಂತೆ ಅವರಿಗೆ ಹೆಸರಿಡುತ್ತಾರೆ. ಪಾತಂಜಲಯೋಗಸೂತ್ರಗಳಲ್ಲಿ, ಕೊನೆಯ ಸೂತ್ರಗಳು ಇವು. ತತಃ ಕ್ಲೇಶಕರ್ಮನಿವೃತ್ತಿಃ ॥ ತದಾ ಸರ್ವಾವರಣಮಲಾಪೇತಸ್ಯ ಜ್ಞಾನಸ್ಯ ಆನಂತ್ಯಾತ್ ಜ್ಞೇಯಮ್ ಅಲ್ಪಂ ॥ ತತಃಕೃತಾರ್ಥಾನಾಂ ಪರಿಣಾಮಕ್ರಮಸಮಾಪ್ತಿಃ ಗುಣಾನಾಂ ॥ ಕ್ಷಣಪ್ರತಿಯೋಗೀ ಪರಿಣಾಮಾ-ಪರಾಂತ-ನಿಗ್ರಾರ್ಹ್ಯಃ ಕ್ರಮಃ ॥ ಪುರುಷಾರ್ಥ ಶೂನ್ಯಾನಾಂ ಗುಣಾನಾಂ ಪ್ರತಿಪ್ರಸವಃ ಕೈವಲ್ಯಂ, ಸ್ವರೂಪ ಪ್ರತಿಷ್ಠಾವಾ, ಚಿತಿಶಕ್ತೇಃ ಇತಿ ॥

ರಾಜಯೋಗಸಾಧನೆಯಲ್ಲಿ ಕೊನೆಕೊನೆಗೆ ವಿವೇಕನಿಮ್ನವಾದ ಚಿತ್ತವು ಕೈವಲ್ಯದತ್ತ ಒಲೆಯುವದಂತೆ, ಆಗ ಪೂರ್ವಸಂಸ್ಕಾರದ ಪ್ರತ್ಯಯಾಂತರಗಳು ಕ್ಲೇಶಗಳಂತ ನಷ್ಟವಾಗಿ ಧರ್ಮಮೇಘವೆಂಬ ಸಮಾಧಿಸಿದ್ಧಿಯಾಗುವದು. ಆಗ ಕ್ಲೇಶ ಮತ್ತು ಕರ್ಮಪೂರ್ಣನಿವೃತ್ತಿಯಾಗುವದು. ಆ ನಿವೃತ್ತಿಯನ್ನು ವಶದಲ್ಲಿಟ್ಟುಕೊಂಡು ಯೋಗಚಕ್ರವರ್ತಿಯಂತೆ ಆಳುವವನೇ ನಿವೃತ್ತಿನಾಥ; ನಿವೃತ್ತಿನಾಥನ ಧರ್ಮಮೇಘ ಸಮಾಧಿಯೇ ಗುರುಕೃಪಾಧಾರೆಯಾಗಿ ಸುರಿದು ಅಜ್ಞಾನದ ಆವರಣಮಲವು ಕಳಚಿ ಹೋಗಿ ಜ್ಞಾನದ ಅಪಾರತೆಯಲ್ಲಿ ಜ್ಞೇಯವೇ ಅಲ್ಪವಾಗುವದು. ಆ ಭೂಮಿಕೆಯ ಸತ್ತ್ವಮೂರ್ತಿಯೇ ಜ್ಞಾನದೇವ. ಈ ದಿವ್ಯಜ್ಞಾನದ ಪರಿಣಾಮವಾಗಿ ಕ್ರಮೇಣ ಜೀವನದ ಉದ್ಧಾರವಾಗಿ ಜ್ಞಾನದ ಸೋಪಾನಕ್ರಮವೇ ಏರ್ಪಡುವದು. ಆದರ

ಮೂರ್ತಿ ಸೋಪಾನದೇವ. ಹೀಗಾಗಿ ಪುರುಷನು ಪುರುಷೋತ್ತಮನಲ್ಲಿ ಶರಣತೆಯಿಂದ ಸ್ಥಿರತೆ ಪಡೆಯುವದೇ ಕೈವಲ್ಯ, ಅಥವಾ ಚಿತಿಶಕ್ತಿಯ ಸ್ವರೂಪ-ಪ್ರತಿಷ್ಠೆ, ಅಥವಾ ಮುಕ್ತಿ. ಈ ಶಕ್ತಿಯೇ ಮುಕ್ತಾಯಿ, ಮುಕ್ತಾಬಾಯಿ! ಮಹಾರಾಷ್ಟ್ರದ ಆ ಕಾಲದ ಪಂಡಿತಂಮನ್ಯ ಕರ್ಮಠ ಜನತೆ ಈ ಕುಟುಂಬವನ್ನು ಸಂಸ್ಕಾರದಿಂದ ಬಾಹ್ಯವನ್ನಾಗಿ ಇರಿಸಲು ಪ್ರಯತ್ನ ಪಟ್ಟಿತು. ಜ್ಞಾನದೇವನ ಲೋಕಜ್ಞಾನದಿಂದ ದುರಂತ ತಪ್ಪಿತು. ಆದರೂ ತಂದೆತಾಯಿ ನಾಲ್ಕು ಮಕ್ಕಳನ್ನು ದೈವಕೃಪೆಗೊಪ್ಪಿಸಿ, ದೇಹವಿಸರ್ಜನೆ ಮಾಡಿದರು. ಈ ಸುಮಾರಿನಲ್ಲಿಯೇ ನಿವೃತ್ತಿಯು ಮತ್ಸ್ಯೇಂದ್ರನಾಥನ ಶಿಷ್ಯರಿಂದ ಕೃಪೆ ಪಡೆದು, ತನ್ನ ಕೃಪಾಕಟಾಕ್ಷವನ್ನು ತಮ್ಮನಾದ ಜ್ಞಾನದೇವನಲ್ಲಿ ಬೀರಿ, ಅವನನ್ನು ಜ್ಞಾನದ ಘನಪಿಂಡವನ್ನೇ ಮಾಡಿದನು. ಇದರ ಫಲವಾಗಿಯೇ ಶ್ರೀ ಕೃಷ್ಣನ ಭಗವದ್ಗೀತೆಯು ಮರಾಠಿಯಲ್ಲಿ ಜ್ಞಾನೇಶ್ವರಿಯಾಗಿ ಬಂದು, ಅಂದಿನ ಜನದಿಂದ ಇಂದಿನ ವಿನೋಬಾಜಿಯವರ ವರೆಗೂ, ಮಹಾರಾಷ್ಟ್ರದ ಅಂತಃಕರಣವನ್ನು ತೊಳೆಯುತ್ತಲೇ ಇದೆ. ಪೂನಾದ ಹತ್ತಿರಿನ ಆಳಂದಿ ಕ್ಷೇತ್ರದಲ್ಲಿ, ಅಜಾನವೃಕ್ಷದ ಬುಡದಲ್ಲಿ, ಸಮಾಧಿ ಪ್ರಜ್ಞೆಯಲ್ಲಿ, ಜ್ಞಾನದೇವನು ಇಂದಿಗೂ ಜ್ಞಾನಭಕ್ತಿಪಿಪಾಸುಗಳಿಗೆ ಅಮೃತಾನುಭವವನ್ನು ನೀಡುತ್ತಲಿದ್ದಾನೆ. ಮೂಲಭಗವದ್ಗೀತೆ ಚಿಕ್ಕಗ್ರಂಥ. ಜ್ಞಾನದೇವನ ವಾಣಿಯ ವಿಸ್ತಾರದಲ್ಲಿ ಅದು ಅಪಾರ ಸಾಗರವಾಗಿದೆ. ಈ ಅಪಾರವಾದ ವಾಕ್‌ಯಜ್ಞದಿಂದ ಜ್ಞಾನದೇವನು ಗಳಿಸಿದ್ದೇನು? ತನ್ನ ಜನಕ್ಕಾಗಿ ಬೇಡಿಕೊಂಡಿದ್ದೇನು? ಇದು ಜ್ಞಾನೇಶ್ವರಿಯ ಕೊನೆಯ ವರಯಾಚನೆಯ ಓವಿಗಳಲ್ಲಿ ಬರುತ್ತದೆ.

ಆತಾ ವಿಶ್ವಾತ್ಮಕೆ ದೇವೆ। ಯೇಣೆ ವಾಗ್‌ಯಜ್ಞೆ ತೋಷಾವೆ। ತೋಷೋನಿ ಮಜದ್ಯಾವೆ
ಪಸಾಯದಾನ ॥

ಜೇ ಖಳಾಚಿ ವೆಂಕಟಿಸಾಂಡೋ। ತಯಾ ಸತ್‌ಕರ್ಮರತಿವಾಢೊ। ಭುತಾಪರಸ್ಪರೆ
ಪಡೊ। ಮೈತ್ರಜೀವಾಚೆ ದುರಿತಾಚೆ ತಿಮಿರ ಜಾವೊ। ವಿಶ್ವಸ್ವಧರ್ಮಸೂರ್ಯೆಂ
ಪಾಹೊ। ಜೋ ಜೇ ವಾಂಛಿಲ ತೋತೆಲಾಹೊ। ಪ್ರಾಣಿಜಾತ ॥

ವರ್ಷತ ಸಕಳ ಮಂಗಳಿ। ಈಶ್ವರ ನಿಷ್ಠಾಂಚಿ ಮಾಂದಿಯಾಳಿ। ಅನವರತ ಭೂತಳಿ।
ಭೇಟೊ ತಯಾಭೂತಾ ॥

ಕಿಂಬಹುನಾಸರ್ವಸುಖೀ। ಪೂರ್ಣಹೋಊನೀ ತಿಹಿಲೋಕೀ। ಭಜಿಜೊ ಆದಿಪುರುಷೀ
ಅಖಂಡಿತ ॥

ಇನ್ನು ವಿಶ್ವಾತ್ಮಕನಾದ ದೇವನು, ನನ್ನೀ ವಾಗ್ಯಜ್ಞದಿಂದ ತುಷ್ಟನಾಗಿ, ಪ್ರಸಾದ ದಾನವನ್ನು ಮಾಡುವನಾಗಲಿ; ಖಳರ ವಕ್ರತೆಯು ಕಳೆದು ಹೋಗಲಿ, ಅವರಿಗೆ ಸತ್ ಕರ್ಮದಲ್ಲಿ ರತಿಯುಂಟಾಗಲಿ; ಭೂತಗಳಲ್ಲಿ ಪರಸ್ಪರ ಮೈತ್ರಿ ಬೆಳೆಯಲಿ, ದುರಿತಗಳ ತಿಮಿರವು ಇಲ್ಲದಾಗಿ, ವಿಶ್ವದಲ್ಲಿ ಸ್ವಧರ್ಮ ಸೂರ್ಯನ ಪ್ರಭಾತವಾಗಲಿ, ಪ್ರಾಣಿಜಾತದ

ವಾಂಛಿತವೇನೇನಿದೆಯೋ ಅದೆಲ್ಲದರ ಲಾಭ ಅವರಿಗಾಗಲಿ; ಮಾಂಗಲ್ಯದ ಮಳೆಯು ಎತ್ತಲೂ ಕರೆದು, ಈಶ್ವರನಿಷ್ಠಮಂದಿಯ ಗುಂಪು ಗುಂಪುಗಳು ಅನವರತವಾಗಿ ಈ ಭೂಮಂಡಲದಲ್ಲಿ ಎತ್ತೆತ್ತಲೂ ಒಬ್ಬರನ್ನೊಬ್ಬರು ಕಾಣಲಿ; ಕಿಂಬಹುನಾ ಹೆಚ್ಚಿಗೇನು? ಮೂರು ಲೋಕದೊಳಗಿನ ಎಲ್ಲರೂ ಸರ್ವತೋಪರಿಯಿಂದ ಸುಖಿಗಳಾಗಿ, ಅಖಂಡಿತ ವಾಗಿ ಆದಿಪುರುಷನ ಭಕ್ತರಾಗಿ ಬಾಳಲಿ–ಇದು ಜ್ಞಾನದೇವನ ಹೃದಯಾಂತರಾಳದ ಆಕೂತಿ; ಇದು ಜ್ಞಾನೇಶ್ವರನಾದ ಶ್ರೀ ಕೃಷ್ಣನ ಭಗವದುಕ್ತಿಯ ಕಾರ್ಯ. ಶಾಂಕರ ಮತವನ್ನ ಪ್ರಾಕೃತದಲ್ಲಿ ಪ್ರಸಾರಮಾಡಲು ಜ್ಞಾನದೇವನು ಉದ್ಯುಕ್ತನಾದನ ಎಂದು ಹೇಳುವವರುಂಟು. ಆದರೆ ಕುರುಕ್ಷೇತ್ರದ ಅರ್ಜುನನಿಗೆ ನಿವೇದಿತವಾದ ಭಗವದ್ಗೀತೆ ಬುದ್ಧಕಾಲೀನರಾದ ಸಂನ್ಯಾಸೋನ್ಮುಖ ಪಂಡಿತರಿಗೆ ಹೇಳಿದ ಗೀತೆ; ಪರಚಕ್ರಪದಾ ಹತಿಗೆ ಸಿಕ್ಕು ದಿಗ್ಭ್ರಮೆಗೊಂಡ ಸಾಧು ಸಜ್ಜನರಿಗೆ ಹೇಳಿದ ಗೀತೆ. ಇವು ಏಕ ಗೀತೆಯ ತ್ರಿವಿಧ ಧ್ವನಿಮುಖಗಳು. ಇಂದು ಕೂಡ ಹೇಳಲಾಗುತ್ತಿರುವ ಟಿಳಕರ ಗೀತೆ, ಗಾಂಧೀ ಗೀತೆ, ವಿನೋಬಾಗೀತೆ, ಶ್ರೀ ಅರವಿಂದಗೀತೆ ಒಂದೆ ಅಲ್ಲ. ಸಂದರ್ಭವು ಬೇರೆ ಆದಂತೆ ಕೇಳುವವರ ಹೇಳುವವರ ಅಪೇಕ್ಷೆ ಅಧಿಕಾರಗಳಂತೆ ಗೀತೆಯ ಧ್ವನಿ ಬದಲಾ ಗುತ್ತದೆ. ಗೀತೆಯ ಕಾರ್ಯ ಅಜ್ಞಾನಿಗಳನ್ನು ಜ್ಞಾನಿಯ ಭೂಮಿಕೆಗೇರಿಸುವ ದಕ್ಕಿಂತ, ಆರ್ತ, ಜಿಜ್ಞಾಸು, ಅರ್ಥಾರ್ಥಿಗಳನ್ನು ಜ್ಞಾನಸೂತ್ರದಿಂದ ಭಕ್ತಿಗೆತ್ತಿ, ಭಕ್ತಿಯಿಂದ ಭಗವಂತನಲ್ಲಿ ಏಕರಸಮಾಡಿ, ಭಗವಲ್ಲೀಲೆಯಲ್ಲಿ ಭಕ್ತರ ಕರ್ಮಯೋ ಗಕ್ಕೆ ಇಂಬು ಮಾಡಿಕೊಡುವದಾಗಿದೆ. ಜ್ಞಾನೇಶ್ವರಿಯಲ್ಲಿ ಉಗಮಹೊಂದಿದ ಭಕ್ತ್ಯೋ ದ್ಧಾರ ತರಂಗಿಣಿಯು ಮಹಾರಾಷ್ಟ್ರದಲ್ಲಿ, ಹೊಲೆ ಹದಿನೆಂಟು ಜಾತಿಯಲ್ಲಿ, ಈ ನಿರ್ಮಲೀ ಕರಣವನ್ನು ನಿರಲಸವಾಗಿ ಇಂದಿಗೂ ಮಾಡುತ್ತಿದೆ; ಹಿಂದೆಯೂ ಮಾಡಿದೆ. ಅದಕ್ಕೆ ಇತಿಹಾಸವೇ ಸಾಕ್ಷಿ! ಮಹಾರಾಷ್ಟ್ರ ಭಕ್ತಮಾಲಿಕೆಯೇ ಸಾಕ್ಷಿ! ನಾಮದೇವ, ಏಕನಾಥ, ತುಕಾರಾಮ, ರಾಮದಾಸ, ಮೋರೋಪಂತ, ಲೋಕಮಾನ್ಯಟಿಳಕ, ವಿನೋ. ಬಾಜಿ ಇವರಲ್ಲಿ ಪ್ರತಿಯೊಬ್ಬರೂ ಜ್ಞಾನೇಶ್ವರಿಯ ದಿವ್ಯಸ್ಪರ್ಶಹೊಂದದೆ ಉಳಿದಿಲ್ಲ ಜ್ಞಾನದೇವನು ಜ್ಞಾನೇಶ್ವರಿಗೆ ಭಗವದ್ಗೀತೆಯ ಆಧಾರ ಇಟ್ಟುಕೊಂಡರೆ,ಅನಂತರದಲ್ಲಿ, ಅವನು ಪ್ರಕಟಿಸಿದ 'ಅಮೃತಾನುಭವ'ಕ್ಕೆ ತನ್ನ ನಿಕ್ಕಳ ಅನುಭವವನ್ನೆ ನೆಲೆ ಮಾಡಿ ಕೊಂಡಿದ್ದಾನೆ. ಈ ಅಮೃತಾನುಭವದ ಆದಿಯಲ್ಲಿ ಜ್ಞಾನದೇವನು ಸಂಸ್ಕೃತದ ಜ್ಞಾನ ಭಂಡಾರಕ್ಕೆ ಐದು ಶ್ಲೋಕಗಳನ್ನು ನೀಡಿದ್ದಾನೆ. ಅದಕ್ಕೆ ಅಮೃತಾನುಭಾವ ಒಂದು ಭಾಷ್ಯವೆಂದರೂ ಸಲ್ಲುವದು.

ಯದಕ್ಷರಮನಾಖ್ಯೇಯಂ ಆನಂದಮಜಮವ್ಯಯಂ।
ಶ್ರೀಮನ್ನಿವೃತ್ತಿನಾಥೇತಿ ಖ್ಯಾತಂ ದೈವತಂ ಆಶ್ರಯೆ॥
ಗುರುರಿತ್ಯಾರವ್ಯಯಾ ಲೋಕೆ ಸಾಕ್ಷಾತ್ ವಿದ್ಯಾಹಿಶಾಂಕರಿ।
ಜಯತ್ಯಾಜ್ಞಾ ನಮಸ್ತಸ್ಯೈ ದಯಾದ್ರಾಯೈ ನಿರಂತರಂ॥

ಸಾರ್ಥಂಕೇನಚ ಕಸ್ಯಾರ್ಥಂ ಶಿವಯೋಃ ಸಮರೂಪಿಣೋಃ।
ಜ್ಞಾತುಂ ನಶಕ್ಯತೆ ಲಗ್ನಮಿತಿ ದ್ವೈತಚ್ಛಲಾನ್ ಮುಹುಃ॥
ಅದ್ವೈತಮಾತ್ಮನಸ್ತತ್ತ್ವಂ ದರ್ಶಯಂತೊ ಮಿಥಸ್ತರಾಂ।
ತೌ ವಂದೇ ಜಗತಾಮಾದ್ಯೌತಯೋಸ್ತತ್ತ್ವಾಭಿಪತ್ತಯೆ॥
ಮೂಲಾಯಾಗ್ರಾಯಮಧ್ಯಾಯ ಮೂಲಮಧ್ಯಾಗ್ರ ಮೂರ್ತಯೆ।
ಕ್ಷೀಣಾಗ್ರ ಮೂಲಮಧ್ಯಾಯ ನಮಃ ಪೂರ್ಣಾಯ ಶಂಭವೆ॥

ಈ ಪಂಚಶ್ಲೋಕಗಳಲ್ಲಿ ಜ್ಞಾನದೇವನ ಪಂಚಪ್ರಾಣವೇ ಇದೆ ಎಂದರೂ ಸಲ್ಲುವದು. ಆದರ ಅರ್ಥ ಹೇಳುವದಕ್ಕಿಂತ ಅದು ಭಾವೈಕವೇದ್ಯವಾಗಲೆಂದು ಕನ್ನಡಿಸಿದ ಈ ರೀತಿಯನ್ನೇ ನಿಮಗೆ ಶ್ರುತಪಡಿಸುತ್ತೇನೆ. (ಪದ್ಯಗಳು.)

ಮುಕ್ತಕಂಠ ೯೯ನೇ ಪುಟ ಮೊದಲ ಮೂರು ಪದ್ಯ

(೧)

ನಮೋ ಎಂಬೆ ಚೈತನ್ಯದೇವ ಶ್ರೀಮನ್ನಿವೃತ್ತಿನಾಥ
ನನ್ನ ದೈವ ನನಗಾದನಣ್ಣ ನಿನ್ನಪ್ಪ ಗುರುವೆ ಈತ.
ಸ್ವಸ್ವರೂಪದಾನಂದದುರುಳೆ ಅರಿದಿದಕೆ ಭವದ ನೋವು.
ತೀರಲರಿಯದೋ ಹೇಳಬರದು, ಇದಕಿಲ್ಲ ಹುಟ್ಟುಸಾವು.

(೨)

ಜಯಜಯವೆ ವಿದ್ಯೆ ಗುರುವೆನಿಸಿ ಎದ್ದೆ, ಶಾಂಕರಿ, ಸ್ವಪಾಕದಲ್ಲಿ.
ನೀ ಜ್ಞಾನಸಿದ್ಧೆ, ನಾ ಪದದೊಳಿದ್ದೆ ಆ ಜ್ಞಾನಲೋಕದಲ್ಲಿ
ದಿವ್ಯದಯೆಯ ಅವತಾರಸಾರ ಜಲಪಾತದಂತೆ ಬಂದೆ.
ಶಿವದ ಮೇಲೆ ಸುರಿವಂಥ ಗಂಗೆಯೊಲು ನಿರಂತರವು ನಿಂದೆ.

(೩)

ಶಿವನ ಶಿವೆಯ ಶ್ರೀ ಲಗ್ನರಂಗವೇ ಜಗಜ್ಜನ್ಮಭೂಮಿ
ಅವಳು ಅವಗೆ ಸ್ವಾಮಿನಿಯು, ಅವಳಿಗೋ ಆತ ತಾನೇ ಸ್ವಾಮಿ.
ಯಾರು ಯಾರೊಡನೆ ಎಂತು ಕೂಡಿದರೊ? ಈ ಅನಾದಿತಂತು.
ಬಿಡಿಸಬರದು, ಅವಿಭಕ್ತ ಭಕ್ತಿ ಭೇದವನು ಅರಿವುದೆಂತು?

೧೬೫ ಪುಟ. ಎರಡು ಪದ್ಯ

(೧)

ತಾವು ಇಬ್ಬರೂ ಒಬ್ಬರೆನ್ನುವದ ತೋರಿಸುವರು ಸತತ
ಆಗಲಿ ಕೂಡಿ ಒಂದಾಟ ಹೂಡಿ ಜಗಭರಿತರಾಗಿ ವಿತತ
ಬಿಂದುರಜದ ಸಂಧಾನದಂತೆ ಈ ತಂದೆ-ತಾಯಿಯೆಂದು
ಶರಣುಹೋಗುವೆನು ನಮ್ಮ ಪಡೆದವರ ನಾವೆ ಪಡೆಯಲೆಂದು.

(೨)

ಬೇರಿಗಿವನು, ಗೊನೆಫಲದಲಿವನು, ನಡುವ್ಮೈಯೊಳಿವನೆ ಇವನು
ಮೂಲ ಮಧ್ಯ ಮತ್ತಗ್ರದಲ್ಲಿ ಒಂದಾದ ಮೂರ್ತಿ ಶಿವನು
ಸುತ್ತಲೆಲ್ಲ ಸರ್ವತ್ರ ಮೇಲು ಒಳ—ಹೊರಗು ಅವನ ಕಾಂಬೆ
ಮೂರ ಮೀರಿ ಒಳಗೊಂಡ ಪೂರ್ಣಶಂಭುವಿಗೆ ನಮೋ ಎಂಬೆ.

ಅಮೃತಾನುಭವದ ನಾಂದಿ ಹೀಗೆ ಮಾಡಿ, ಜಗತ್ತಿನ ಮಾತಾಪಿತರಾದ ದೇವೋ ದೇವಿಯ ಭಕ್ತಿಪ್ರೇಮವನ್ನು ಕವಿ ಈ ರೀತಿ ಕೊಂಡಾಡುತ್ತಾನೆ.

ಪದ್ಯ ೪, ಪುಟ ೯೯ ರಿಂದ ೧೦೧

ಎರಡು ದಂಡೆಗೂ ಒಂದೆ ಶ್ರುತಿಯು, ಹೂವೆರಡಕೊಂದೆ ಗಂಧ,
ಎರಡು ದೀಪದಲಿ ಒಂದೆ ಬೆಳಕು ಬೆಳಗುವದು ಎನಿತು ಚೆಂದ!
ಎರಡು ತುಟಿಗಳೊಳಗೊಂದೆ ಮಾತು, ಕಣ್ಣೆರಡಕೊಂದೆ ನೋಟ,
ಎರಡರಲ್ಲಿ ಒಂದಾಗಿ ನಡೆದಿಹುದು ಸೃಷ್ಟಿಯೆಂಬ ಮಾಟ.

ಒಬ್ಬರೊಬ್ಬರನು ಬಿಟ್ಟು ಇರರು ಈ ಇಬ್ಬರೂನು ಕೂಡ;
ಹುಟ್ಟಲರಿದು ತೃಣಮಾತ್ರ ಇಬ್ಬರೂ ಕೂಡದೇನೆ ಗೂಢ,
ಒಬ್ಬರೊಬ್ಬರನು ಹೊಕ್ಕುಹೊಮ್ಮಿ ಹೊರಮೂಡಿಸುವದು ನೋಡಿ,
ಪರಸ್ಪರರಿಗೂ ಜೀವಪ್ರಾಣರೆನುವಂತೆ ಇವರ ಜೋಡಿ.

ಇವಕಿಂತ ಹೆಚ್ಚು ಒಳಿತಾವುದನ್ನು ಆ ಶಬ್ದ ಮಾಡಲಹುದು?
ಅದೊ ಅಬುದ ಶಬುದ ಬುದ್ಬುದವು ಒಡೆದು ಹುಸಿಸದ್ದು ಹೊರಡಬಹುದು.
ನುಡಿನುಡಿದುಕೊಂಡು ಮೆರೆಯುವದು ಮುಂದಿ ಜಗದಲ್ಲಿ ಹಿಂದುಮುಂದು
ಒಡನಾಗಿ ನೆನಪು ಮೂಡುವುದು ನುಡಿಗೆನುಡಿ ಬೆಲೆಯು ಅದುವೆ ಒಂದು.

ಕೊಡುವಾಗ ಒಂದೆ; ಕೊಳುವಾಗ ಒಂದೆ; ಇಬ್ಬರಿಗು ಮುಂದಿನಂತೆ.
ಕೊಡುಕೊಳೆಯು ಮಾಡೆ ಫೀನೊಬ್ಬನೆಂಟ ಬಹುರೂಪಿಯಾಗಿ ನಿಂತೆ.

ನಾ ನೀನು ಎಂಬ ಎರಡೆಣಿಕೆ ಏಕೆ? ಸಂಸಾರ ಪಸರ ತುಂಬಿ
ಹಿಗ್ಗಿಹಿಗ್ಗಿ ಹಲವಾಗಿ ಮರಳಿ ನೀನಾದೆ ಕಣ್ಣಗೊಂಬಿ.

ಒಂದು ತನಕೆ ಒಡಕಿಲ್ಲವಣ್ಣ ಶಿಷ್ಯರಿಗೆ ಹಂಚಿಕೊಡಲು,
ಒಂದೆ ನೀರು ಹರಿಯುವದು ಒಡಲಿನಲಿ ಉಗಮ ಮುಖಗಳಲ್ಲು.
ವೇದ ಕೀರ್ತಿಸಿದ ವೇದಮೂರ್ತಿನೀ ಬಂದಿ ಭೇದಬೇಕೆ?

ಕಂಪಿತ್ತು ಅಲ್ಲಿ ಮೂಗಾಯ್ತು ಇಲ್ಲಿ, ನಾದಾರ್ಥವಾಯ್ತು ಕಿವಿಯು,
ಕನ್ನಡಿಯು ಕಣ್ಣು ಆರೂಪಮೂಲ, ರುಚಿಮೂಲಕಿಹುದು ಸವಿಯು.
ಆಗಾಳಿತಾನೆ ಬೀಸಣಿಗೆಯಾಗಿ ತನ್ನನ್ನೆ ಬೀಸಿಕೊಳ್ಳಲು
ತಲೆಯಲ್ಲೆ ಹೂವು ಅರಳಿರಲು ಮುಡಿಸಿಕೊಳಲೇಕೆ ತಳಿರತೊಳಲು?

ತಾವರೆಯೆ ಆಗಿ ತೆರೆದಿಹುದು ನೋಡ ಆ ರವಿಯ ಛವಿಯನೋಟ.
ಬೆಳುದಿಂಗಳನ್ನೆ ತಿಂಗಳನು ಕುಡಿಯೆ ಚಂದ್ರಮ—ಚಕೋರದಾಟ.
ತುಂಬಿಯೆನೆ ತಾವು ಹೀರುವವು ಹೂವು, ಆ ನೀರೆ ನೀರನಾಗಿ
ಕನಸಾಗಿ ನಿದ್ದೆ ತನ್ನಲ್ಲಿ ತಾನು ತನ್ನನ್ನೆ ಮೀರದಾಗಿ.

ಕಣ್ಣುಕಣ್ಣು ತಿರುಮುರುವು ನೋಟ ನೋಡುವನ ಗೊಂಬೆಯುಹುದು.
ಕಲ್ಪನೆಯು ಮೂರ್ತಿ ಶಿಲ್ಪಿಯೆನೆ ತೆರೆದು ಕಲ್ಲನ್ನೆ ಕೊರೆದು ಬಹುದು.
ಬಂಗಾರವೆಲ್ಲ ಆಕಾರವಾಗಿ ಆಗುವದು ವಸ್ತು ಒಡವೆ.
ನಾ ನನ್ನನೆಟ್ಟು ಆನಂದಬಟ್ಟು ನನ್ನಲ್ಲಿ ನಾನೆ ಪಡೆವೆ.

ತಳಿರು ಚಿಗುರು ಕೋಕಿಲಗಳಾಗೆ ತೆಂಗಾಳಿ ಮೂರ್ತವಾಗೆ
ರಸವೆ ತನ್ನ ರುಚಿ ನೋಡಿಕೊಳಲು ಮೈತುಂಬ ರಸನೆಯಾಗೆ.

ಅಮೃತಾನುಭವದ ಮುಕ್ತಾಯ ಹೀಗಾಗುತ್ತದೆ (ಪುಟ ೧೦೫)

ಉಣಿಸಿದಿರಿ ನೀವು ತಣಿಸಿದಿರಿ ಕರತಲದಿ, ಹೇ ನಿವೃತ್ತಿರಾಜಾ
ಆತ್ಮತೃಪ್ತಿಯಲಿ ಮೌನವಿಹುದು ನಿಜ, ತೇಗು ಕೂಡ ಸಾಜಾ.
ರವಿಯ ಬತ್ತಿಯನು ಹೊತ್ತಿಸಿಹುದು ಬಾನಲ್ಲಿ ಈಶನೋಜ.
ಲೋಕಲೋಕಗಳ ಬೆಳಗುತಿಹುದು ಆ ಸೂಸುತುಂಬು ತೇಜ.

ಚಂದ್ರನಲ್ಲಿ ತುಂಬುವದು ಅಮೃತ, ಆ ಚಂದ್ರ ಕುಡಿಯಲೆಂದೇ?
ಕಡಲು ಎರೆಯುವದು ಮೋಡಗಳಿಗೆ, ನೀರಡಿಕೆ ಮೋಡಕೆಂದೇ?
ಹಣತಿ ಸೊಡರು ಹೊತ್ತುವದು, ತನ್ನ ಮುಖವನ್ನೆ ಬೆಳಗಲೆಂದೇ?
ಬಯಲು ಹರಹಿಹುದು ಇಂಬುಗೊಂಡು, ಈನಿಖಿಲಲೋಕಕೆಂದೇ?

'ಶಮದ ಜಲಧಿಗಾನಂದ ಶೋಭೆ ಆ ಚಂದ್ರನಿಂದ ತಮ್ಮಾ'
ಕೊರಡು ಕೊನರಿಸುವದಣ್ಣ ಸುಗ್ಗಿಯಲಿ ಅಂಥ ಕೃಪೆಯು ನಿಮ್ಮಾ.
ಅಣ್ಣ ದೇವರೈಶ್ವರ್ಯ ವಿಭವವೀ ಗ್ರಂಥರೂಪವೆಲ್ಲಾ
ತಮ್ಮ ಪಾದಗಳ ತಮ್ಮ ಮೋದವಿದು, ನಾ ಸ್ವತಂತ್ರನಿಲ್ಲಾ.

ತಾನೆ ತೋರುವದ ತೆರೆವುದೇಕೆ? ಅಹುದಲ್ಲ ಅತ್ತ ಇರಲಿ.
ಪ್ರಭು-ಪ್ರಭಾವ-ವಿನ್ಯಾಸಕೆಂತು ನಾನೇಕೆ ಅಡ್ಡಬರಲಿ?
ಬೇರೆ ಮಾತಿನಿಂದೇನು ಅದುವು ತಮ್ಮಲ್ಲೆ ಪ್ರಕಟವಿಹುದು
ಸ್ವಪ್ರಕಾಶವಸ್ತುವನು ಬೇರಾವ ಬೆಳಕು ಬೆಳಗಬಹುದು?

ಇದು ಬೆಳ್ಳಬೆಳಕು, ಬಿಡಗೇಕೆ ಇದಕೆ? ನಾ ಸುಮ್ಮನಿದ್ದರೂನು.
ಈ ಜನರೆ ನೋಡುವರು ಜನರೆ ಕಾಣುವರು, ಇದುವು ತಿಳಿಯದೇನು?
ಕಣ್ಣು-ನೋಟ ಇದು ಒಂದರಾಟ ನಾ ತಿಳಿಸಿ ಹೇಳಲೇಕೆ?
ಸಿದ್ಧಸಾಧ್ಯ ಒಡ್ಡಾಟ ಸಾಕು; ಆಯತಕೆ ಸಿದ್ಧಿ ಬೇಕೆ?

ಇದನು ಬಿಟ್ಟು ಅನುಭವದ ಹಾದಿಯಲಿ ಬೇರೆ ಗುಟ್ಟು ಇಲ್ಲ.
ತಾನೆ ದೃಶ್ಯ, ದೃಷ್ಟಾರ ತಾನೆ, ಸಂವಿದ್ರಹಸ್ಯವೆಲ್ಲ,
ಎಂದಿನಂತೆ ಅದು ಇಂದಿಗೂನು ಸಿದ್ಧ[illegible]ದಾರಪಾರ
ಯಾರು ಹೇಳಿದರು, ಹೇಳದಿದ್ದರು ಸತ್ಯಚಿತ್ತಸಾರ.

ಇದ್ದ ಮಾತನ್ನೆ ಹೇಳಲಿಕ್ಕೆ ಬೇಕೇನು ಗ್ರಂಥ ಹೊಸದು?
ಸತ್ಯ ಮೆಚ್ಚಿ ಮೂಡುವುದು ಮಾತು, ಅದನೆಂತು ಅಡಗಿಸುವದು?
ರುಚಿಸಿದ್ದನುಂಡು, ಕಂಡದ್ದೆ ಕಂಡು, ಹಲನ್ಪೊಲವು ನವ್ಯಪ್ರೀತಿ.
ಹಾಡಿದ್ದೆ ಹಾಡಿ, ಹೇಳಿದ್ದೆ ಹೇಳಿ, ರಮಿಸುವದು ರಮ್ಯರೀತಿ.

ಹೊಸತೇನು ಇಲ್ಲ ಇದರಲ್ಲಿ ಅಹುದು ಆಗಿಲ್ಲ ಗುಟ್ಟುರಟ್ಟು.
ತಮ್ಮರಿವೆ ಗುರುವು ತಂತಮಗೆ ಎಂಬೆ, ಪರಮಾತ್ಮ ಎಲ್ಲ ನಿಟ್ಟು.
ನಾವೆಲ್ಲರಲ್ಲಿ ತುಂಬಿಹುದ ಕಂಡು ಅಡಗಿರದೆ ಹೊರಗೆ ಬಂದೆ
ನನ್ನಲ್ಲಿ ತಾವು ತುಂಬಿಹಿರಿ ಎಂದು ಒಳಹೊರಗೆ ಒಂದೆ ಎಂದೆ.

ಮುಚ್ಚೇನು ಮತ್ತೆ ಬಿಚ್ಚೇನು ಇಲ್ಲಿ, ಅದು ಇರಲಿ ಯಾಕೆ ಮಾತು?
ಮಧ್ಯಮೆಯು ದಾಟಿ ಪಶ್ಯಂತಿಯಾಚೆ ಪರವಾಣಿ ಓತು ಹೂತು,
ಬರದೇನು ಮತ್ತೆ ತುಸ ಮೌನವೇಕೆ? ಮೌನವನೆ ಮಾನವಿರಿಸಿ.
ಜಲಲಿಪಿಯು ತೆರದೆ ಈ ಮಾತನೊರೆದೆ, ಹೃದಯಕ್ಕೆ ಹೃದಯ ತೆರೆಸಿ.

ಉಪನಿಷತ್ಸಾರ ಅದು ಕಂಡ ಪಾರ ಇದರೊಳಗಪಾರವಿಹುದು.
ಇದರಲ್ಲೆ ಬೋಧ ಮುಳುಗಿಹುದು ಒಳಗೆ ಶೋದಾರ್ಥ ಮುಳುಗಲಹುದು.
ಅಮೃತಾನುಭವದಿ ಶ್ರೀಮಂತರಾಗಿ ಶ್ರೀಜ್ಞಾನದೇವನೆನುವ
ಮನದಿಂದ ಮುಕ್ತ ಭಗವಂತಯುಕ್ತ ಸಂಪ್ರಾಪ್ತ ಅಮೃತತನುವ.

ಪಡೆದುಣಲು ಬೇಕು, ಮುಕ್ತರಿಗೆ ಸಾಕುಬೇಕೆಂಬುದಿಲ್ಲ ಬಲ್ಲೆ.
ಅಮೃತಾನುಭವವು ಬೇಡೆಂಬರುಂಟೆ ಆ ಮುಕ್ತಯುಕ್ತರಲ್ಲೆ?
ಇದು ವಿಶ್ವನಿಯಮ ಪ್ರೇಮಕ್ಕೆ ಪ್ರೇಮ ಬರುತಿಹುದು ತಾನೆ ಓತು.
ಸೋಜಿಗವದೇನು? ರಚಿಸುವದು ತಾನು ಅಮೃತಕ್ಕೆ ಅಮೃತಸೋತು.

ದಿನದಿನವು ಒಸಗೆ ಚಂದಿರನ ಹೊಸಗೆ, ಪೂರ್ಣಿಮೆಯ ಚಂದ್ರ ಬೇರೆ.
ಇದ ಹೇಳಬೇಕೆ ಸಮದೃಷ್ಟಿಯವರು, ಅದ ಹೇಳದಿರಲು ಆರೆ.
ಅವರವರ ಪ್ರಾಯ ಆ ಕಾಯದಾಯ; ಆ ಲಿಂಗಸಂಗದಲ್ಲಿ
ಹೊರಹೊಮ್ಮಿ ಸೂಸಿ ಒಳಹೊಕ್ಕು ಸೋಸಿ ಬಹದೇಕರಂಗದಲ್ಲಿ.

ಮಧುಋತುವಿನಲ್ಲಿ ಆ ವೃಕ್ಷವಲ್ಲಿ ತತ್ತಳಿತು ಹೂವಬಿಟ್ಟು
ದಿಗ್ದೇಶದಲ್ಲಿ ಹೊರಚೆಲ್ಲಿ ಬಹವು ಗಗನಕ್ಕೆ ಮುತ್ತನಿಟ್ಟು.
ಈ ಉಕ್ಕು ಏಕೆ, ಅದ ಹೇಳಬೇಕೆ, ಮುಕ್ತರಿಗೆ ಬಿಚ್ಚಿಬಿಡಿಸಿ?
ಅನುಭವದ ಅಮೃತ ಇರುತಿಹುದು ಸಹಜ ಎಲ್ಲರಿಗು ಹುಚ್ಚು ಹಿಡಿಸಿ.

ಆತ್ಮಾನುಬಂಧ ಆನಂದದಿಂದ ತೊರೆಬಿಟ್ಟು ತುಟಿಗೆ ಚಿಮ್ಮಿ
ಬಿಟ್ಟವರು ಉಂಟೆ ಅಮೃತಾನುಭವವ ರುಚಿಗಂಡಮೇಲೆ ಒಮ್ಮೆ?
ಅವ ಬದ್ಧನೆಂಬ, ಇವ ಬಿದ್ದನೆಂಬ, ಅವಗೆದ್ದನೆಂಬ ಹಸಿಗೆ
ಹುಸಿಹೋಗಿ ಇಲ್ಲಿ ಅನುಭವಕೆ ಬಹುದು ಅಮೃತತತ್ವದೊಂದು ಬೆಸಿಗೆ.

ಗಂಗೆಯಲಿ ಬಂದು ತಾನಾಗಿ ಒಂದು ಹರಿದಿಹವು ಹತ್ತು ನೀರು.
ಬೆಕ್ಕೈವುದೆಂತು ಬಿಸಿಲಲ್ಲಿ ಬೆರೆತ ತಮದೊಂದು ಏರು ಪೇರು?
ಆ ಕ್ಷರದ ಕ್ಷಾರ ಕ್ಷರಿಸುತ್ತಲಿರಲಿ ಅಕ್ಷರವು ಶಾಂತಜಲಧಿ.
ಸಾಹಿತ್ಯವೆಲ್ಲ ಐವತ್ತ ವರ್ಣ ಓಂಕಾರ ಸಾರ ಬಲದಿ.

ಕಸ್ತೂರಿಯಲ್ಲಿ ಒಳಬೆರೆತ ಮಣ್ಣು ಆ ಗಂಧ ತೇಗುವಂತೆ,
ಚಂದನದ ಸಂಗ ಪಡೆದಂಥ ಬೇವು ಬಾಪನ್ನವಾಗುವಂತೆ,
ಆ ಲೋಹವೊಮ್ಮೆ ಪರಿಸಕ್ಕೆ ತಾಗಿ ಪಡೆಯುವದು ಸ್ವರ್ಣರೇಖೆ;
ಆಪಾದವಾಗಿ ಜ್ಞಾನಾತ್ಮನಲ್ಲಿ ಹೂತಂತೆ ಮುಕ್ತಿಶಾಖೆ.

ಅಬಲ ಬ್ರಹ್ಮದಲಿ ಸಬಲಬ್ರಹ್ಮ ನೆರೆಬೆರೆತು ಒಂದುಗೂಡಿ,
ಪರಮಾತ್ಮನಲ್ಲೆ ವೈವರ್ತವಾಗಿ ಪರಿಣಮಿಸಿ ವಿಶ್ವವೋಡಿ,
ಐಶ್ವರ್ಯವೆಲ್ಲ ಮೆರೆಯುತ್ತಲಿರಲು ನಶ್ವರಕೆ ಹೋಯಿತೋಡಿ
ಸುಡುಬೆರಳನೆತ್ತಿ ತೋರಿಸುವರಾರು ಶಿವ-ಶಕ್ತಿ ಬೇರೆ ಮಾಡಿ ?

ಅದಕಾಗಿ ಎಸುವ ಈ ಜ್ಞಾನದೇವ ಅನುಭವದ ಅಮೃತ ಪಡೆದು
ಸಂಪೂರ್ಣರಾಗಿ ಆ ಬ್ರಹ್ಮವಾಗಿ ಭೌಮತ್ವವನ್ನು ಹಡೆದು
ಮೊಡಲಿಹುದು ಮುಕ್ತಿ ಅನುಭವದ ಭುಕ್ತಿ ಹಬ್ಬಕ್ಕೆ ಹಬ್ಬವಾಗಿ
ಓಬ್ಬೆಂದು ವಿಶ್ವ ನಲಿದಾಡುತಿರಲಿ ಆಗರ್ಭವ್ರೊಬ್ಬನಾಗಿ.

ಜ್ಞಾನದೇವನು ೧೨೭೫ರಲ್ಲಿ ಹುಟ್ಟಿ ೧೨೯೬ರ ಕಾರ್ತಿಕವದ್ಯ ತ್ರಯೋದಶಿಯ ದಿನ ಸಮಾಧಿ ಸೇರಿದನು. ಹೃದಯದಲ್ಲಿ ಧ್ಯಾನವು ಮೂರ್ತಿಗೊಂಡು ನಿರ್ವಾಣ ಸಮಾಧಿಯಲ್ಲಿಯೂ ಜ್ಞಾನದೇವನು ಕಥಾ ಕೀರ್ತನವನ್ನು ಮಾಡುತ್ತ ಕುಳಿತನಂತೆ; ಒಂದೇ ವರ್ಷದಲ್ಲಿ ನಾಲ್ವರೂ ಸೋದರರು, ಜನರ, ಭಾಷೆಯ, ದೇಶದ, ಪಿತೃಗಳ, ದೇವತೆಯ, ಋಷಿಗಳ ರಿಣವನ್ನು ತಮ್ಮ ಅಮರ ಸಾಹಿತ್ಯದಿಂದ ತೀರಿಸಿ ಚರ್ಮ ಚಕ್ಷುವಿಗೆ ಅಗೋಚರರಾದರು. ಮಹಾರಾಷ್ಟ್ರ ಜನತೆಯ ಹೃದಯರಂಗದಲ್ಲಿ ಮಾತ್ರ ಅವರ ಭಜನೆ ಕೀರ್ತನೆ ನಡೆದೇ ಇದೆ.

ನಿವೃತ್ತಿ ಜ್ಞಾನದೇವ ಸೋಪಾನ ಮುಕ್ತಾಬಾಯಿ ।
ಏಕನಾಥ ನಾಮದೇವ ತುಕಾರಾಂ ॥

ಎಂದು ಇಂದಿಗೂ ಮಹಾರಾಷ್ಟ್ರದ ಹಳ್ಳಿಹಳ್ಳಿ ನಿನದಿಸುತ್ತದೆ. ಅಲ್ಲಿದೆ ಮಹಾರಾಷ್ಟ್ರ ! ಮುಕ್ತಾಬಾಯಿಯ ಶಿಷ್ಯನೆನಿಸಿಕೊಂಡ ಚಾಂಗವಟೇಶ್ವರನು ಇವರ ನಿರ್ವಾಣವನ್ನು ಒಂದು ಅಭಂಗದಲ್ಲಿ ಹೀಗೆ ವರ್ಣಿಸಿದ್ದಾನೆ.

ಮುಕ್ತಿನ ನೀರಿನಿಂದ ತುಂಬಿದ ರಂಜಣಿಗೆಯನ್ನು ಜ್ಞಾನದೇವನು ಹೊಟ್ಟೆ ತುಂಬಾ ಕುಡಿದನು. ಮೋಡದ ನೆರಳನ್ನು ಕೈಗೂಡಿಸಿಕೊಂಡು ನಿವೃತ್ತಿಯು ಏಕಾಂತಕ್ಕೆ ತೆರಳಿದನು. ಹೂವಿನಿಂದ ಬೇರ್ಪಡಿಸಿದ ಕಂಪಿನ ಹಾರವನ್ನು ಕೊರಳಿಗೆ ಹಾಕಿ ಸೋಪಾನ ತೆರಳಿದನು. ವಜ್ರದ ಗುಗ್ಗರಿಯನ್ನು ಹೊಟ್ಟೆ ತುಂಬ ಉಂಡು ಮುಕ್ತಾಬಾಯಿ ತಣಿದಳು. ಈ ನಾಲ್ವರ ಮರ್ಮವನ್ನು ಹಸ್ತಗತ ಮಾಡಿಕೊಂಡು ಇದ್ದಾನೆ ಚಾಂಗದೇವ. ಈ ಚಾಂಗದೇವನಿಗಾಗಿ ಜ್ಞಾನದೇವನು 'ಚಾಂಗದೇವ ಪಾಸಷ್ಟಿ' ಅಂದರೆ ೬೫ ಓವಿ ಬರೆದ. ಅದಕ್ಕೆ ಉತ್ತರರೂಪವಾದ ಚಾಂಗದೇವಗ್ರಂಥವೂ ಇದೆಯಂತೆ. ಈ ಪ್ರಶ್ನೋತ್ತರ ಸಂದರ್ಭದಲ್ಲಿ ಜಿಜ್ಞಾಸುಗಳಾದ ಋಷಿಗಳನ್ನು 'ಶಿಶು' ಎಂದು ಸಂಬೋಧಿಸಿದ ನೆನಪಾಗುತ್ತದೆ. ಈ ಚಾಂಗದೇವನಿಗೂ ಮಹಾನುಭಾವ

ಚಕ್ರಧರನಲ್ಲಿ ಪ್ರವೇಶಮಾಡಿದ ಯೋಗಿ ಚಾಂಗದೇವನಿಗೂ ಯಾವದೋ ಸಂಬಂಧ ವಿರಬೇಕು ಎಂದು ತೋರುತ್ತದೆ. ಜ್ಞಾನೇಶ್ವರ ಕಾಲವಾಗಿ ಹೋದಮೇಲೆ ಮಹಾರಾಷ್ಟ್ರಕ್ಕೆ ಕಷ್ಟದ ಕಾಲ ಬಂದಿತು. ಮಹಾರಾಷ್ಟ್ರವು ಮಹಮ್ಮದೀಯರ ದಾಳಿಗೆ ತುತ್ತಾಯಿತು. ಶಾಹಿರಾಜ್ಯಗಳಲ್ಲಿ ಬ್ರಾಹ್ಮಣರು, ಕ್ಷತ್ರಿಯರು ತಮ್ಮ ಶ್ರದ್ಧಾಬಲದಿಂದಲೆ ತಮ್ಮ ರಾಷ್ಟ್ರಧರ್ಮವನ್ನು ಕಾಯ್ದುಕೊಂಡು ಉತ್ತಮ ಕಾಲದ ಆಸೆಯಿಂದ ಸಾಂಸ್ಕೃತಿಕ ಕೃಷಿ ಮಾಡಿದರು. ಈ ಕಾಲದಲ್ಲಿಯೇ ಇನ್ನೊಬ್ಬ ಮಹಾತ್ಮರ ಉದಯವಾಯಿತು. ಅವರು ನರಸಿಂಹಸರಸ್ವತಿಗಳು. ಅವರು ಪರಮದತ್ತಭಕ್ತರು, ದತ್ತಾವತಾರಿಗಳು' ಅವರ ಜೀವನಕ್ಕೆ ಸಂಬಂಧಿಸಿದ ಗಾಣಗಾಪುರ ಮತ್ತು ಕುರುಗಡ್ಡಿಗಳು ಕರ್ನಾಟಕದ ಸೀಮೆಯೊಳಗೇ ದೈವಕೃಪೆಯಿಂದ ಬಂದಿವೆ. ನರಸೋಬಾವಾಡಿ ಮತ್ತು ಔದುಂಬರಗಳು ಕರ್ನಾಟಕ ಸೀಮಾರೇಷೆಗೆ ಅನತಿದೂರವಾಗಿ ಉಳಿದಿವೆ. ನರಸಿಂಹಸರಸ್ವತಿಗಳ ಜನ್ಮಸ್ಥಳವಾದ ಕಾರಂಜಾದಲ್ಲಿಯೂ ಜೈನರ ವಸ್ತಿ ಇದೆ, ಕನ್ನಡ ಗ್ರಂಥಗಳೂ ಇವೆ. ನರಸಿಂಹ ಸರಸ್ವತಿಗಳ ಕನ್ನಡ ಭಕ್ತನಾದ ಸರಸ್ವತಿ ಗಂಗಾಧರನು ಬರೆದ ಗುರುಚರಿತ್ರೆಯು, ಜ್ಞಾನದೇವನ-ಜ್ಞಾನೇಶ್ವರಿ, ರಾಮದಾಸರ ದಾಸಬೋಧ, ತುಕಾರಾಮ ನಾಮದೇವರ ಗಾಥೆ, ಏಕನಾಥನ ಭಾಗವತಗಳೊಡನೆ ಮರಾಠಿಗಳ ಹೃದಯ ಪೀಠವನ್ನು ಆಕ್ರಮಿಸಿಕೊಂಡಿದೆ. ಸಾಹಿತ್ಯದೃಷ್ಟಿಯಿಂದ ಇದು ಅಂಥ ಪ್ರೌಢಗ್ರಂಥವಲ್ಲ. ಆದರೆ ಪಾರಾಯಣಕ್ಕೆ ಫಲ ಕೊಡುವ ಗ್ರಂಥ. ಇದರ ಕೊನೆಗೊಂದು ಕನ್ನಡದ ಆರತಿಯ ಪದ್ಯವಿದೆ. ಕನ್ನಡವು ಮಹಾರಾಷ್ಟ್ರದ ಹೃದಯ ಹೊಕ್ಕುದು ಹೀಗೆ! ಗುರುಚರಿತ್ರೆಯ ಅನೇಕ ಕನ್ನಡ ಅನುವಾದಗಳಿವೆ. ಮಹಾನುಭಾವರ ದತ್ತಾತ್ರೇಯನೂ ಮೂಲದಲ್ಲಿ ಇವನೇ ಆದರೂ ಎರಡು ಪಂಥದ ಆಚಾರದಲ್ಲಿ ಮಹದಂತರವಿದೆ. ಅಕ್ಕಲಕೋಟೆಯ ಮಹಾರಾಜರು, ಮಾಣಿಕಪ್ರಭುಗಳು, ಇತ್ತೀಚಿನ ವಾಸುದೇವಾನಂದ ಸರಸ್ವತಿಟೆಂಬೇ ಮಹಾರಾಜರು ಈ ಪಂಥದವರು. ಮೈಸೂರಿನ ಒಡೆಯರಾದ ಜಯಚಾಮರಾಜೇಂದ್ರರೂ ಇತ್ತೀಚೆಗೆ ದತ್ತಾತ್ರೇಯ ತತ್ತ್ವವನ್ನು ಕುರಿತು ಇಂಗ್ಲೀಷಿನಲ್ಲಿ ಒಂದು ಪ್ರೌಢಪ್ರಬಂಧವನ್ನು ರಚಿಸಿದ್ದಾರೆ. ಈ ದತ್ತಾತ್ರೇಯ ಸಂಪ್ರದಾಯಕ್ಕೆ ಸೇರಿದ ಜನಾರ್ದನಸ್ವಾಮಿಗಳ ಕೃಪೆಗೆ ಪಾತ್ರನಾದವನು ಏಕನಾಥನು. ಇವನ ಮನೆತನದಲ್ಲಿ ಕೃಷ್ಣಭಕ್ತಿ ನೆಲೆಗೊಂಡಿತ್ತು, ಇವನ ಅಜ್ಜ ಭಾನುದಾಸನು ವಿಜಯನಗರದಿಂದ ವಿಠಲಮೂರ್ತಿಯನ್ನು ಮರಳಿ ತಂದು ಪಂಢರಪುರದಲ್ಲಿ ಮತ್ತೆ ಪ್ರತಿಷ್ಠಾಪಿಸಿದನೆಂದು ದಂತಕಥೆಯೂ, ಐತಿಹ್ಯವೂ ಇದೆ. ಇವನ ಗುರುವೋ ದತ್ತಭಕ್ತ. ಸ್ವತಃ ಏಕನಾಥನು ರಾಮ-ಕೃಷ್ಣರ ಜೀವನಚರಿತ್ರೆಗಳ ಕೀರ್ತನೆ ಮಾಡಿದ್ದಾನೆ, ಅದ್ವೈತಭಕ್ತಿಯ ಆನಂದವನ್ನು ಪಂಡಿತರಿಗೂ ಪಾಮರರಿಗೂ ವೇದ್ಯವಾಗುವಂತೆ ಗ್ರಂಥರಚನೆ ಮಾಡಿದ್ದಾನೆ. ಇವನ ಮಗಳ ಮಗ ಮುಕ್ತೇಶ್ವರನು ಮಹಾಭಾರತದ ಸೃಷ್ಟಿಯನ್ನು ಕುಮಾರವ್ಯಾಸನ ವೈಭವದಿಂದ ಮಾಡಿದ್ದಾನೆ. ಆದರೆ ನಮ್ಮ ಪುಣ್ಯದಿಂದ ಕನ್ನಡಭಾರತ ಪೂರ್ಣ ಸಿಕ್ಕಿದೆ. ಮುಕ್ತೇಶ್ವರ ಪೂರ್ಣವಾಗಿ ಹಸ್ತಗತವಾಗಿಲ್ಲ. ಈ ಏಕನಾಥ ಮುಕ್ತೇಶ್ವರರ

ಸಂತತಿಯವರೇ ದಕ್ಷಿಣದ ತಂಜಾವೂರಿನಲ್ಲಿ ವಿಪುಲವಾದ ಮರಾಠಿಸಾಹಿತ್ಯವನ್ನು ನಿರ್ಮಿಸಿದ್ದಾರೆ. ಇವರಲ್ಲಿ ಸ್ತ್ರೀಯರೂ ಇದ್ದಾರೆ. ಏಕನಾಥನು ಮಾಡಿದ ಇನ್ನೊಂದು ಮಹತ್ಕಾರ್ಯವೆಂದರೆ ಜ್ಞಾನೇಶ್ವರಿಯ ಶುದ್ಧಪ್ರತಿ. ಇದು ಕ್ರಿಸ್ತಶಕ ೧೫೯೦ರ ಸುಮಾರಿನಲ್ಲಾಯಿತು. ಸದ್ಯಕ್ಕೆ ಎಲ್ಲ ಜ್ಞಾನೇಶ್ವರಿ ಪ್ರತಿಗಳಿಗೆ ಇದೇ ಮಾತೃಕೆ. ತನ್ನ ಈ ಶುಧ್ಧ ಜ್ಞಾನೇಶ್ವರಿ ಪ್ರತಿಯಲ್ಲಿ ಪ್ರಕ್ಷೇಪ ಮಾಡಿದ್ದರೆ ಅಮೃತದ ಬಟ್ಟಲಿರುವ ತಟ್ಟೆಯಲ್ಲಿ ಟೆಂಗಿನ ಸೂಟ್ಟಿ ಸೇರಿಸಿದಂತಾಗುವದೆಂದು ಬಜಾಯಿಸಿದ್ದಾನೆ. ಆದರೆ ಈ ಬಜಾವಣೆ ತಿಳಿದವರಿಗೆ ಮಾತ್ರ. ನಾ ಹಿಂದೆ ನೀ ಮುಂದೆ ಎಂದು ಜ್ಞಾನೇಶ್ವರಿಯ ಪ್ರತಿಗಳು ತಲೆ ಎತ್ತುತ್ತಲೆ ಇರುತ್ತವೆ. ವಿಜಾಪುರದ ರುಕ್ಮಿಣಿಪಂಡಿತರ ಶಿಷ್ಯರೊಬ್ಬರು ಬರೆದ ಜ್ಞಾನೇಶ್ವರಿ ಪ್ರತಿಯು ಇತ್ತೀಚೆಗೆ ಬಯಲಿಗೆ ಬಂದಿದೆ. ಕರ್ನಾಟಕದಲ್ಲಿ ಜ್ಞಾನೇಶ್ವರಿಯ ಶುದ್ಧ ಪ್ರತಿಯೊಂದು ಸಿಕ್ಕುವ ಸಂಭವ ತುಂಬಾ ಇದೆ. ಇದು ಮಾತ್ರ ನಿಜ. ಏಕನಾಥನಿಗಿಂತಲೂ ಮುಂಚಿತವಾಗಿಯೇ ಜ್ಞಾನದೇವ ಸಹೋದರರ ಮಹಿಮೆ ಕಂಡು ಸ್ವತಃ ಏವ ಮಹಾಭಕ್ತನಾಗಿ, ಭಕ್ತಿಸಾಹಿತ್ಯ ಬೆಳೆಸಿದವನು ನಾಮದೇವನು. ಇವನ ಕೆಲ ಅಭಂಗಗಳು ಪಂಜಾಬದ ಸೀಖರ ಪವಿತ್ರ ಗ್ರಂಥಗಳಲ್ಲಿ ಸೇರಿವೆ. ಮಹಾನುಭಾವರಂತೆ ಪಂಜಾಬ ಪ್ರಾಂತ ಒಳನುಗ್ಗಿದ ಮತ್ತೊಬ್ಬ ಮಹಾರಾಷ್ಟ್ರ ಸಂತ ನಾಮದೇವ. ಸೀಖರ ಗುರು ಗೋವಿಂದಸಿಂಗನು ಇದಕ್ಕೆ ಪ್ರತಿಯಾಗಿ ದೈವನಿಯೋಜನೆಯಿಂದಲೋ ಏನೋ, ಮಹಾರಾಷ್ಟ್ರದ ನಾಂದೇಡ ಪ್ರಾಂತದಲ್ಲಿ ಕೊನೆಯ ಕಾಲ ಕಂಡನು. ನಾಮದೇವನ ಮನೆತನಕ್ಕೆ ಮನೆತನವೇ ಭಕ್ತರದಾಗಿತ್ತು. ತಂದೆ, ತಾಯಿ, ಹೆಂಡತಿ, ಗಂಡುಮಕ್ಕಳು, ಹೆಣ್ಮಕ್ಕಳು, ಮನೆಗೆ ಬಂದ ಸೊಸೆಯರು, ಕೊನೆಗೆ ಜನಾಬಾಯಿ ಅವನ ದಾಸಿ ಕೂಡ ಭಕ್ತೆಯಾಗಿ ಅಭಂಗರಚನೆ ಮಾಡಿದ್ದಾಳೆ. ಈ ಋಣ ಇಷ್ಟಕ್ಕೆ ತೀರಲಿಲ್ಲವೇನೋ ಎಂಬಂತೆ ತುಕಾರಾಮನಿಗೂ ನಾಮದೇವನಿಗೂ ಭಕ್ತಚರಿತ್ರಕಾರರು ಸಂಬಂಧ ಕಲ್ಪಿಸಿದ್ದಾರೆ. ಆ ಕಥೆ ಮರಾಠಿ ಸಾಹಿತ್ಯದ ಇನ್ನೊಂದು ಘಟ್ಟ. ಹದಿನೇಳನೆಯ ಶತಮಾನದ ಮೊದಲ ದಶಕದಲ್ಲಿ ಮರಾಠಿ ಸಾಹಿತ್ಯದ ನಾಲ್ವರು ಮಹಾತ್ಮರು ಉದಿಸಿದರು. ಅವರಲ್ಲಿ ಇಬ್ಬರು ಪಂಡಿತರು ಕೆಲಮಟ್ಟಿನ ಭಕ್ತರು, ಇಬ್ಬರು ಸಮರ್ಥರಾದ ಸಂತರು. ತುಕಾರಾಮ ಮತ್ತು ರಾಮದಾಸರೇ ಆ ಸಂತರು. ಮುಕ್ತೇಶ್ವರ ಮತ್ತು ವಾಮನ ಇವರು ಪಂಡಿತಕವಿಗಳು. ಮುಕ್ತೇಶ್ವರನು ಮಹಾಭಾರತಕಾರನೆಂದು ಈ ಮೊದಲೆ ಹೇಳಿದೆ. ವಾಮನನು ಮರಾಠಿಸಾಹಿತ್ಯದ ಜಗನ್ನಾಥಪಂಡಿತನೆಂದರೂ ಸಲ್ಲುವದು. ಅದೇ ಪಾಂಡಿತ್ಯ, ದರ್ಪ, ನಿರ್ಮಾಣಶಕ್ತಿ ಜೀವನದ ಕೊನೆಯಲ್ಲಿ ಅದೇ ಭಕ್ತಿ ವಿನಯ. ಜ್ಞಾನದೇವನ ಜ್ಞಾನೇಶ್ವರಿಗೆ ಭಾವಾರ್ಥದೀಪಿಕಾ ಎಂಬದು ಇನ್ನೊಂದು ಹೆಸರು. ಅದು ಒಪ್ಪುವಂತಹದೂ ಅಹುದು, ಭಗವದುಕ್ತಿಯಿಂದ ಉದಿತವಾದ, ಉದ್ದೀಪ್ತವಾದ ಭಾವದೀಪಿಕೆಯೇ ಅದು. ವಾಮನಪಂಡಿತನ ಭಾವ ಬೇರೆ. ಭಾವ ಎಂಬದು ಅವರವರ ಕಲ್ಪನೆ. ಮಹದುಕ್ತಿಗಳ ಯಥಾರ್ಥವನ್ನು ಹೇಳುವುದೇ ಸರಿಯಾದ ಮಾರ್ಗ ಎಂದು ಅವನ ವಾದ. ತನ್ನ ಯಥಾರ್ಥವನ್ನು ತಿಳಿದುಕೊಳ್ಳುವ ವಾಚಕ ಇಂದಿಲ್ಲ ನಾಳೆ

ಹುಟ್ಟುವನು ಎಂದು ಭವಭೂತಿಯಂತೆ ಅವನ ಪ್ರತಿಜ್ಞೆ. ಟಾಕೀಮಹಾರಾಜ ಎಂಬ ಮಹಾರಾಷ್ಟ್ರೀಯರೊಬ್ಬರು ಇತ್ತೀಚೆ ಯಥಾರ್ಥದೀಪಿಕೆಗೆ ಇಂಗ್ಲೀಷ್ ವ್ಯಾಖ್ಯಾನ ಬರೆದಿದ್ದಾರೆ. ಯಥಾರ್ಥದೀಪಿಕೆಯದು ಒಂದು ದೃಷ್ಟಿಯ ದ್ವೈತವಾದ. ಇದೋ ಮಹಾರಾಷ್ಟ್ರದ ಅದ್ವೈತಪ್ರಕೃತಿಗೆ ತೀರ ಹೊರತು. ಆ ಕಾರಣ ಯಥಾರ್ಥದೀಪಿಕೆಯು ಜ್ಞಾನೇಶ್ವರಿಯ ಸೂರ್ಯಪ್ರಭೆಯ ಮುಂದೆ ದೀಪಿಕೆಯಾಗಿಯೇ ಉಳಿದಿದೆ ಎಂದೆನ್ನಬಹುದು. ಅವನು ಯಮಕಪ್ರಿಯ, ಶ್ಲೋಕರಚನಾಚತುರ. ಅಂತೆಯೇ ಮಹಾರಾಷ್ಟ್ರದಲ್ಲಿ ಒಂದು ಸುಭಾಷಿತವಿದೆ.

ಸುಶ್ಲೋಕ ವಾಚನಾಚಾ ಅಭಂಗವಾಣೀ ಪ್ರಸಿದ್ಧ ತುಕಯಾಚೀ ।
ಓವೀ ಜ್ಞಾನೇಶಾಚೀ ಕಿಂವಾ ಆರ್ಯಾ ಮಯೂರ ಪಂತಾಚೀ ॥

ಈ ವಾಮನಶ್ಲೋಕ, ತುಕಾರಾಮನ ಅಭಂಗ, ಜ್ಞಾನೇಶ್ವರನ ಓವಿ ಅದರಂತೆಯೇ ಮೋರೋಪಂತನ ಆರ್ಯೆ ಇವುಗಳಿಗೆ ಇವರೇ ಮೇಲುಪಂಕ್ತಿಯೆಂದು, ವಾಮನ ಪಂಡಿತನಲ್ಲಿ ರಾಮದಾಸರ ಬೋಧೆಯಿಂದ ಬದಲಾವಣೆಯಾಯಿತೆಂದೂ ಆಮೇಲೆ ಅವರ ರಚನೆಯಾಯಿತೆಂದೂ, ಹೇಳಲಾಗುತ್ತದೆ, ಕಂಡೂ ಬರುತ್ತದೆ. ರಾಮದಾಸ ಮತ್ತು ತುಕಾರಾಮ ಇಬ್ಬರೂ ಛತ್ರಪತಿ ಶಿವಾಜಿಗೆ ಸಮಕಾಲೀನರು. ಇಬ್ಬರ ಸಂಬಂಧವೂ ಅವನೊಡನೆ ಬಂದಿತೆಂಬ ಕತೆಗಳಿವೆ. ಹಾಗೆ ಇರಲಾರದು ಇರಬಾರದು, ಎಂದು ತರ್ಕಗಳೂ ವ್ಯಥೆಗಳೂ ಇವೆ. ಸಮರ್ಥ ರಾಮದಾಸರ ಪ್ರಭಾವವು ಶಿವಾಜಿಯ ಮೇಲಾಗಿರಲಿಲ್ಲವೆಂದರೂ ಜನತೆಯ ಮೇಲಾಗಿರಲಿಲ್ಲ ಎಂದು ಯಾರೂ ಹೇಳಲಾರರು ಎಂದು ತೋರುತ್ತದೆ. ಸಮರ್ಥರು ತಮ್ಮ ರಾಮಸೇವೆಯ ವಿದ್ಯಾಪೀಠಗಳನ್ನೇ ಮಠ-ಮಹಂತರ ರೂಪದಿಂದ,ಮಹಾರಾಷ್ಟ್ರದ ಉತ್ತರದ ಮೇರೆಯಿಂದ ದಕ್ಷಿಣದ ತಂಜಾವೂರಿನ ವರೆಗೆ ಹಬ್ಬಿಸಿದರು. ತಂಜಾವೂರಿನ ಸಮರ್ಥಸಂಪ್ರದಾಯದ ಒಬ್ಬ ಮಹಂತರಾದ ಮೇರುಸ್ವಾಮಿಗಳ ಕೀರ್ತನೆ ಕೇಳಿ, ಕೇರಳದ ಸ್ವಾತಿತಿರುನಾಳರು ಸದಾಮಾದಿ ಸಂಸ್ಕೃತಾದಿ ಕೀರ್ತನ ನಾಟಕರಚನೆಯನ್ನು ಮಾಡಿದರೆಂದು ತಿಳಿದುಬರುತ್ತದೆ. ರಾಮದಾಸರ ದಾಸಬೋಧವು ಜ್ಞಾನೇಶ್ವರಿಯಂತೆಯೇ ಕನ್ನಡದಲ್ಲಿ ಭಾಷಾಂತರಿತವಾಗಿದೆ. ಆದರೆ ಜ್ಞಾನದೇವ-ರಾಮದಾಸ ಸತ್ತ್ವವಿರದೆ ವಾಣಿಯಲ್ಲಿ ಭಾವ ತಿಳಿಯುವದು ಕಷ್ಟ.ರಾಮದಾಸರ ಬುದ್ಧಿಯ ಕಟ್ಟುನಿಟ್ಟುತನದ ಇತ್ತೀಚಿನ ಮೂರ್ತಿ ಎಂದರೆ ಲೋಕಮಾನ್ಯ ಟಿಳಕರು. ರಾಮದಾಸರ ಮೂಲ ಹೆಸರು ನಾರಾಯಣ. ಅವರು ಬಾಲ್ಯದಲ್ಲಿಯೇ ವಿರಕ್ತಿಯನ್ನು ತಾಳಿ, ಮಾರುತಿ ಸತ್ತ್ವವನ್ನು ಸಾಕ್ಷಾತ್ಕರಿಸಿಕೊಂಡು ರಾಮನ ಸೇವೆಯಿಂದ ರಾಮದಾಸರಾದರು. ಅವರ ರಾಮನು ವಿರಹಿ ರಾಮನಲ್ಲ; ವೀರಧನುರ್ಧರ, ಶಿಷ್ಟಪಾಲಕ, ದುಷ್ಟಮರ್ದಕ, ಧರ್ಮಪ್ರತಿಷ್ಠಾಪಕ. ರಾಮದಾಸರ ಪ್ರತಿಜ್ಞೆಯನ್ನು ಕೇಳಿ—

ಶಹಾಣೇ ಕರಾವೇ ಜನ। ಪತಿತ ಕರಾವೇ ಪಾವನ।
ಸೃಷ್ಟಿಮಧ್ಯೇ ಭಗವದ್ಭಜನ। ವಾಢವಾವೆ ॥

ಪ್ರಕೃತಿ ಸಾರಿಖೆ ಚಾಲಾವೆ। ಪರಿ ಅಂತರಿ ಶಾಶ್ವತ ಓಳಖಾವೆ।
ಸತ್ಯರ್ಹೋವುನಿ ವರ್ತಾವೊ ಲೋಕಾವೆ ಐಸೆ॥
ಪ್ರಕೃತಿ ಮಧೀಲ ದೇವ ತೋ ಪ್ರಕೃತೀಚಾಸ್ವಭಾವ।
ಭಾವಾತೀತ ಮಹಾನಭಾವ। ವಿವೇಕೆ ಜಾಣಾವಾ॥
ಉತ್ತಮ ಮಧ್ಯಮ ಕನಿಷ್ಠರೇಖಾ। ಅದೃಷ್ಟೀಚಿ ಗುಪ್ತರೇಖಾ।
ಚತ್ವಾರ ಅನುಭವ ಸಾರಿಖಾ। ಹೋತಾನಾಹಿ॥
ದೇವಾ ಏವಢೆ ಚಪಳ ನಾಹಿ। ಬ್ರಹ್ಮಾಏವಢೆ ನಿಷ್ಕಳನಾಹಿ।
ಪಾಯರೀನೆ ಪಾಯರೀ ಚಢೋನ ಪಾಹಿ ಮೂಳಪರ್ಯಂತ॥
ಏಕ ನಾನಾಪ್ರತಿಮಾ। ದುಸರಾ ಅವತಾರ ಮಹಿಮಾ।
ತಿಸರಾ ತೋ ಅಂತರಾತ್ಮಾ। ಚೌಥಾ ನಿರ್ವಿಕಾರೀ॥

ಈ ಗುಡುಗಿನ ಧ್ವನಿ ರಾಮದಾಸರದಾದರೆ, ತುಕಾರಾಮನ ಭಾವ ವಿಹ್ವಲತೆಯ, ಪ್ರಾಮಾಣಿಕ ಒರಟುತನದ ರೀತಿಯೇ ಬೇರೆ. ಖಳರನ್ನು ಬಳದಿಂದ ಒತ್ತಿಕ್ಕಬೇಕು. ಈ ಸಂಹಾರ ಪಾಪವಲ್ಲ. ದೇವರಲ್ಲಿ ಚೇಳು ಬಂದರೆ, ಅದಕ್ಕೆ ಮೆಟ್ಟಿನ ಪೆಟ್ಟಲ್ಲದೆ ಬೇರೆಯೆ ಪೂಜೆಯೆ-ಎನುತ್ತಾನೆ ತುಕಾರಾಮ.

ಈ ಬಿರುಸು ಇದ್ದ ಧ್ವನಿ ವಾತ್ಸಲ್ಯಪೂರ್ಣವಾಗಿಯೆ ಇದೆ. ಮಕ್ಕಳಿಗಾಗಿ ತಂದೆ ಚಾಕರನಾಗುವದಿಲ್ಲವೇ, ಹಾಗೆಯೇ ಸಾಧುಸಂತರ ಮುಗ್ಧಲೌಕಿಕರ ಸೇವೆಮಾಡಿ ಅವರನ್ನು ಉದ್ಧರಿಸುತ್ತಾರೆ. ಅಂಗದಲ್ಲಿ ಚಾಂಗುಭಲ್ಲವಿಲ್ಲದೆ, ಕಾಶಿಗಂಗೆಯ ಸಂಗ ದಿಂದೇನಾದೀತು-ಎನ್ನುವ ತುಕಾರಾಮನು, ಪ್ರೇಮ ತುಂಬಿಬಂದಾಗ, ಬಾಯಿಂದ ಹೇಳಲು ಆಡಲು ಬರದು. ಅನುಭವವನ್ನು ಚಿತ್ತದಿಂದ ಚಿತ್ತಕ್ಕೇ ಹಾಯಿಸಬೇಕಾಗು ವದು ಎನ್ನುತ್ತಾನೆ. ಬೆಳಕಿನ ಸುತ್ತೆಲ್ಲ ಬೆಳಕಯ್ಯ, ಸಕ್ಕರೆ ಎತ್ತಲೂ ಸಿಹಿ, ಸಜ್ಜನನ ಶಿವಗುಣದಲ್ಲಿ ಅವಗುಣ ಸಿಗದು.

ಶಿವಾಜಿ ಕಾಲ ಕಳೆದು ಪೇಶವೆಯರ ಸಾಮ್ರಾಜ್ಯ ಹಬ್ಬಿ ಇಳಿಮುಖವಾದ ಕಾಲ ದಲ್ಲಿ ಕರಹಾಟ ಬ್ರಾಹ್ಮಣನಾದ ಮೋರೋಪಂತನ ಉದಯವಾಯಿತು. ಅವನು ೧೦೮ ರಾಮಾಯಣದ ಕರ್ತೃ, ಮಹಾಭಾರತವನ್ನೆ ಬೃಹತ್‌ಕಾವ್ಯವನ್ನಾಗಿ ರಚಿಸಿದವನು. ಸ್ಫುಟಪ್ರಕರಣಗಳು ಅನೇಕಾನೇಕವಾಗಿ ಬಂದು ಮಹಾರಾಷ್ಟ್ರ ಕೀರ್ತನ ಸಂಪ್ರದಾ ಯಕ್ಕೆ ಅನ್ನ ಒದಗಿಸಿದುವು. ಜೀವನದ ಪಕ್ವಕಾಲದಲ್ಲಿ ಅವನು ಬರೆದ ಕೇಕಾವಲಿ, ಸಂಶಯ ರತ್ನಮಾಲೆ ಬಹುಜನಪ್ರಿಯವಾಗಿವೆ. ತಾನು ಭಕ್ತನೆಂಬ ಬಗ್ಗೆ ಅವರ ಜೀವಕ್ಕೆ ಸಂಶಯವಿಲ್ಲ; ದೇವಕೃಪೆಯ ಮೇಘವು ತನ್ನ ಜೀವ ಮಯೂರದತ್ತ ಹೊರಳುತ್ತಿಲ್ಲ ವಲ್ಲ ಎಂದು ಕಾತರಿಸಿ ಅದು ಕೇಕಿಸುತ್ತಿದೆ.

ಸರಿಗೂಡಲಿದ್ದು ಯಮನವರ ದಂಡು ಮುಪ್ಪಿಡುತ ಬಂತು ಬಳಿಗೆ
ರೋಗದೊಡನೆ ಗುದ್ದಾಡಿ ಮೈಯು ಸಡಿಲಾಯ್ತು ಬಿಚ್ಚಿ ಕಳಿಗೆ

ನೀನಲ್ಲದಿಲ್ಲ ಮತ್ತಾರು ನನಗೆ ಬೆಂಬಲವು ಆಗಿಸುತ್ತು
ಬೇಗ ನೀನು ಬರದಿರಲು, ಸಾವು ಕೊಯ್ಯುವುದು ನನ್ನ ಕತ್ತು

ಕೃಪಾನಿಧಿಯೆ, ಕೃಪಣನನೆ ಕಾಡುವರೆ, ನೀತಿ ಯಾವುದಯ್ಯ
ಭಟನ ಭಟನು ಕೊಲಬಹುದು ರಣದಿ, ಚಾಚಯ್ಯ ಕೃಪೆಯ ಕೈಯ
ಮಾಡಿದಷ್ಟು ಕೃಪೆ ಸಾಕು, ಮುಳುಗುತಿಹೆ ತಮದ ಆಳದಲ್ಲಿ
ನೀ ಶರಣ್ಯ ಶರಣರನು ಕಾಯದೇ ನಮಗೆ ಬಾಳದೆಲ್ಲಿ?

ದಯಾಮೃತದ ಘನ, ಘನಶ್ಯಾಮ ಹರಿ, ಕೇಕಿಸುವ ಮಯೂರ
ಕೂಸು ಅಳಲು ಕಳವಳಿಸಿ, ತಾಯಿ ಎತ್ತುವಳು, ತಂದೆ ಬಾರ
ಅಂಬಿಗನು ನೀನು ನಂಬಿಗನು ನಾನು ದಾಟಿಸಲು ಬೇಕು ನೀರ
ಧರ್ಮಿ ನೀನು ಧಾರ್ಮಿಕನು ನಾನು ತಿಳಿದಿದನು ಕೈಯ ತಾರ.

ಆದರೂ ಕೃಪೆಯ ಲಕ್ಷಣ ಕಾಣದು. ಹಾಗಾದರೆ, ದೇವರು ಬರದಿರಲು ಕಾರಣವೇನು? ಆ ಸಂಶಯಗಳನ್ನೆ ರತ್ನಮಾಲೆ ಮಾಡಿ ಅರ್ಪಿಸಿದ್ದಾರೆ ಮಯೂರ ಕವಿ.

ನನ್ನ ಕರೆಯನು ಕೇಳಿ ನೀನು ಹೊರಟಿರಬಹುದು
ಎಲ್ಲಿಂದು–ಕೇಳಿದರೇನೊ ಅಮ್ಮನವರು!
ನಿಲ್ಲಿಂದ ಹಾಗಾಗಿ, ಅಲ್ಲೆ ನಿಂತೆಯೊ, ಜಾಣ
ಹೊರಟಾಗ ಕೇಳಿದರೆ ಬಿಮ್ಮಗಿಹರು.

ಸ್ವಕೀಯ ಸಚ್ಚರಿತಂಗಳನು ಆಲಾಪಿಸುತ
ನಾರದನು ಬಂದನೇ ನಿನ್ನ ಎಡೆಗೆ
ಹರಿಣಂಗಳಂತೆ, ಹರಿ, ಗೀತಮುಗ್ಧನು ನೀನು
ಕಿವಿಗೊಟ್ಟು ನಿಂತೆ ನಾರದನ ಕಡೆಗೆ!

ಇಲ್ಲವೇ, ನಿನ್ನ ಬರುವಾ ಹಾದಿಯಲ್ಲಿಯು ತಾನೆ
ಅಡ್ಡ ಬಂದಿರಬಹುದು ನನ್ನ ದುರ್ದೈವ
ಶರಣಾಗತರ ಭಯಶಮನ ಮಾಡುವ ನೀನು
ಬರದೆ ಬಿಟ್ಟೇ ಏನು ಹೇಳು ದೇವ?

ಬಲಿಯ ಬಾಗಿಲಿನಲ್ಲಿ ದ್ವಾರಪಾಲಕನಿರುವೆ
ಊಳಿಗವ ಬಿಟ್ಟು ಬರಲಾರೆ ನೀನು
ಪಾಪಿಯಾ ಉದ್ಧಾರ ತಡೆದರೂ ನಡೆದೀತು
ಸಜ್ಜನರ ಸೇವೆ ತಡೆದೀತು ಏನು?

ಇಲ್ಲವೇ ನನಗಿಂತ ದೀನದಾಸನು ಒಬ್ಬ
ಕಣ್ಗೆ ಬಿದ್ದನೊ ಏನೊ ಅತ್ತ ಹೋದೆ
ಆವನ ದೈವದ ಗಾಳಿ ಅತ್ತ ಕರೆಯಿತೊ ನಿನ್ನ
ನಾ ಮೊರೆದು ಮೇಘಕೆ ಮಯೂರನಾದೆ

ನನ್ನ ಹಿಂದೆಯೆ ನೀನು ಗುಪ್ತನಾಗಿಯೆ ನಿಂತು
ಕಾಯುತ್ತ ಇರಬಹುದು ಪ್ರೇಮದಿಂದ
ಬಾಲಕನು ಆದರದಿ ವಟವಟಿಸುವನು ಎಂದು
ತಾಳ್ಮೆಯಲಿ ನಿಂತಿಹೆಯೊ ತಂದೆಯೆಂದ!

ಪತಿತ ಪಾಪಿಯು ಬೀಜ ಒಂದಾರೆ ಇರಲೆಂದು
ನನ್ನ ನಿಟ್ಟಿಯೊ- ಪತಿತಪಾವನನೆ, ಏನು
ನಿನ್ನ ವತನವ ನಿಟ್ಟಿ ಜತನದಿಂದಲೆ ಇಲ್ಲಿ
ಮಂಗಲವ ನೀಡುವಾ ಕಾಮಧೇನು!

ಇದು ಪಂಡಿತವಾಣಿಯಾದರೂ ಖಂಡಿತವಾಗಿ ಪ್ರಾಮಾಣಿಕನ ವಾಣಿಯೆಂದು ಮೋರೋಪಂತಕವಿಯ ಸಮಗ್ರ ಜೀವನಚರಿತೆಯಿಂದ ಸಿದ್ಧವಾಗಿದೆ. ತಮ್ಮ 'ಸನ್ಮಣಿ-ಮಾಲೆ'ಯಲ್ಲಿ ಈ ಕವಿ ಪೂರ್ವಕವಿಗಳಾದ ಜ್ಞಾನರಾಜ, ಏಕನಾಥ, ನೃಸಿಂಹ ಸರಸ್ವತಿ, ರಾಮದಾಸ, ವಾಮನಸ್ವಾಮಿ, ಮುಕುಂದರಾಜ, ಬಹಿರಾ, ಶ್ರೀಧರ, ಶ್ರೀ ಮುಕ್ತೇಶ್ವರ, ಅಮೃತರಾಯ, ತುಕಾರಾಮ, ಮಾಧವದಾಸ, ನರಹರಿ-ಇವರನ್ನು ಭಕ್ತಿಯಿಂದ ಕೊಂಡಾಡಿದ್ದಾರೆ. ಸುಮಾರು ೬೦೦೦೦ ಪದ್ಯ ಬರೆದ ಕವಿಯು ಈಪನ್ಮಾತ್ರ ದರ್ಶನ ಸಾಕು.

ಮರಾಠ ಸಾಮ್ರಾಜ್ಯದ ಕೊನೆಗಾಲದಲ್ಲಿ, ಶ್ರೀಧರ ಮತ್ತು ಮಹಿಪತಿ ಈ ಕವಿಗಳು ಭಕ್ತಿಚರಿತ್ರಗಳಿಂದಲೂ ಶ್ರೀ ರಾಮ ಕೃಷ್ಣಾದಿ ಅವತಾರಿಗಳ ಪಾವನಲೀಲೆಗಳಿಂದಲೂ ಸ್ತ್ರೀ, ಬಾಲ, ವೃದ್ಧ, ಪತಿತರ ಮನಗಳನ್ನು ಪುನೀತ ಮಾಡಿದರು. ಆದರೆ ಪುಣ್ಯ ಸಾಲಲಿಲ್ಲ. ಶೂರರ ವೀರಗಾಥೆಯು-ಪವಾಡ ಹಾಡುವವರು ಬಂದರು. ಭೀಮ ರಣರಂಗದಿಂದ, ಕಾಮ ರಣರಂಗದಲ್ಲಿ ರಮಿಸುವಾಗ ಕೇಳಬಹುದಾದ ಮರ್ಮಭೇದಕ ಲಾವಣಿಗಳನ್ನು ಹೇಳುವವರೂ ಬಂದರು. ಅದಕ್ಕೂ ಉತ್ಶೃಂಖಲತೆ ಬೇಡುವವರಿಗೆ 'ತಮಾಷಾ' ಎಂಬ ಆಟನೋಟ ನಾಟಕಗಳೂ ಬಂದವು. ಸಾಮ್ರಾಜ್ಯ ವೈಭವದ ಅಸ್ತಮಾನ ಸಮಯವೂ ಬಂದಿತು. ಈ ಹೊತ್ತಿಗೆ ಆಂಗ್ಲರು ದೇಶ ಆಕ್ರಮಿಸಿದ್ದರು, ೧೮೧೮ ರಿಂದ ೧೯೪೭ರ ವರೆಗಿನ ಆಧುನಿಕ ವಾಙ್ಮಯ ಚರಿತೆಯು ನಾಳಿನ ಉಪನ್ಯಾಸದ ವಿಷಯ. ನಾಳಿನ ಮಾತು ನಾಳೆ.

ಮೂರನೆಯ ಉಪನ್ಯಾಸ

ಮಿತ್ರರೇ, ಮೊದಲಿನ ಎರಡು ಉಪನ್ಯಾಸಗಳಲ್ಲಿ, ಮರಾಠಿ ಸಾಹಿತ್ಯದ ಪೂರ್ವ ವೈಭವವನ್ನು ಕುರಿತು ವಿವೇಚಿಸಿದ್ದಾಯಿತು. ಅದು ಭಕ್ತಿಪ್ರಾಧಾನ್ಯದ ಕಾಲ. ಮರಾಠಿ ಸಾಹಿತ್ಯದ ಉದಯವೇ ಒಂದು ಬಗೆಯಲ್ಲಿ ತಡವಾಯಿತು. ಉದಿತವಾದ, ಪ್ರಭಾವಿಯಾದ ಮಹಾನುಭಾವ ಪಂಥದ ವಾಙ್ಮಯವು ಜನರ ಮನ್ನಣೆಯಿಂದ ದೂರವಾಯಿತು. ನಾಥಪಂಥವೂ ಕೂಡ ತನ್ನ ಪರಕೀಯ ರೂಪವನ್ನು ತ್ಯಜಿಸಿ, ಮರಾಟಿಯೊಡನೆ ಏಕರೂಪವಾಗಬೇಕಾಯಿತು. ವಿಠ್ಠಲನು ಪಂಡರಿನಾಥನೆನಿಸಿಕೊಂಡರೂ, ನಾಥತತ್ತ್ವವು, ಮಹಾನುಭಾವ ತತ್ತ್ವದಂತೆಯೆ ಭಾಗವತ, ಭಾರತ, ಭಗವದ್ಗೀತೆ, ರಾಮಾಯಣಗಳಲ್ಲಿ ಮುಳುಗುಹಾಕಿ ಬರಬೇಕಾಯಿತು. ದತ್ತಾತ್ರೇಯ ಪಂಥವೂ ಕೂಡ ನಾರಾಯಣೀಯ ಪಂಥದ ಶಾಖೆಯೆಂಬಂತೆ ತನ್ನ ಅವಧೂತತತ್ವವನ್ನು ಸಂಯಮದಿಂದಲೆ ಸಾಗಿಸಿಕೊಂಡು ಯಾವಾಗಲೂ ಬಂದಿತು. ಶೈವ–ವೈಷ್ಣವದ ಭೇದದ, ನಿಷ್ಠೆಯ, ಛಲದ ಹಲವು ಕತೆಗಳು ಕೇಳಬಂದರೂ, ಅವುಗಳಲ್ಲಿ ದ್ರಾವಿಡ ಕರ್ನಾಟಕಗಳ ಉಗ್ರವಿರೋಧವಿಲ್ಲ. ಮಹಾರಾಷ್ಟ್ರದಲ್ಲಿ ಅದ್ವೈತ ಬಿಟ್ಟು ಉಳಿದಾವ ವೇದಾಂತ ಮಾರ್ಗಗಳೂ ನೆಲೆಗೊಳ್ಳಲಿಲ್ಲ. ಆ ಅದ್ವೈತವೂ ಜ್ಞಾನಕ್ಕಿಂತ ಭಕ್ತಿಗೂ, ಭಕ್ತಿಯ ನಿವೃತ್ತಿಗಿಂತ ಭಕ್ತಿಯಪ್ರವೃತ್ತಿಗೂ ಇಂಬುಗೊಟ್ಟಿತು. ಜ್ಞಾನಿಭಕ್ತರ ಪ್ರವೃತ್ತಿಯೇ ಕರ್ಮನಿಷ್ಠೆಗೂ ವೀರಜೀವನಕ್ಕೂ ಕರ್ಮಯೋಗಕ್ಕೂ ಹಾದಿ ಮಾಡಿಕೊಟ್ಟಿತು. ದತ್ತಾತ್ರೇಯ, ವಿಠ್ಠಲ, ರಾಮ, ಕೃಷ್ಣ, ಜ್ಯೋತಿಬಾ, ಖಂಡೋಬಾ, ವೆಂಕಟರಮಣ, ಭವಾನಿ,—ಉಪಾಸ್ಯವು ಯಾವುದೇ ಆಗಲಿ ಎಲ್ಲವೂ ಪರಿಣಾಮತಃ ಅದ್ವೈತ ಭಕ್ತಿಯತ್ತ ಒಲೆಯುತ್ತಿತ್ತು. ಮತ್ಸೇಂದ್ರಾದಿ ನವನಾಥರ ಕತೆಗಳೇ ಇರಲಿ, ಹರಿ-ರಾಮ ವಿಜಯವೇ ಇರಲಿ, ಪಾಂಡವಪ್ರತಾಪವೇ ಇರಲಿ, ಶಿವಲೀಲಾಮೃತವೇ ಇರಲಿ, ಅದು ಎಂದೂ ಅತಿ ಪ್ರಾಪಂಚಿಕದ ವೃತ್ತಿಯತ್ತಲಾಗಲಿ, ಲೋಕಗರ್ಹಣದ ಅತಿಪರಮಾರ್ಥಿಕತೆ, ಪಾರಲೌಕಿಕತೆಯ ಕಡೆಗಾಗಲಿ ಎಂದಿಗೂ ಒಲೆಯಲಿಲ್ಲ. ‘ ಆಧೀ ಪ್ರಪಂಚ ಕರಾವಾ ನೇಟಕಾ ಮಗ ಪರಮಾರ್ಥವಿವೇಕಾ ’ ಮೊದಲು ಸರಳವಾಗಿ, ನೆಟ್ಟಗಿನ ಚೊಕ್ಕಪ್ರಪಂಚ ಮಾಡಿ ಆಮೇಲೆ ಪರಮಾರ್ಥವಿವೇಕದತ್ತ ಹೊರಳಬೇಕು, ‘ ಪಹಿಲೇ ತೇ ರಾಜಕಾರಣ। ದುಸರೇ ಹರಿಕಥಾ ನಿರೂಪಣ ’ ಮೊದಲು ರಾಜಕಾರಣ ಮಾಡಿ, ಎರಡನೆಯದಾಗಿ ಹರಿಕಥಾ ನಿರೂಪಣೆ ಮಾಡಬೇಕು. ರಾಜಕಾರಣವೆಂದರೆ ಸಾಮಾಜಿಕ ಧರ್ಮ ಪ್ರಪಂಚ, ಅದನ್ನು ಮಾಡಿಯೇ ಹರಿಕಥಾ ನಿರೂಪಣವನ್ನೂ ಶ್ರವಣವನ್ನೂ ಅದರೊಡನೆ ಆಮೇಲೆ ಮಾಡಬೇಕು. ವಿಫಲ ಪ್ರಪಂಚದಿಂದ, ಶಿಷ್ಟಪರಿಪಾಲಕ, ಮತ್ತು ದುಷ್ಟನಿಗ್ರಹಕಾರಕನಾದ ಹರಿಯ ಲೀಲಾಚಾರಿತ್ರ್ಯವೂ ಸರಿಯಾಗಿ ಅರ್ಥವಾಗುವದಿಲ್ಲ. “ ಸಾಮರ್ಥ್ಯ ಆಹೇ ಚಳವಳೀಚೆ। ಜೋಜೋ ಕರೀಲ ತಯಾಚೇ। ಪರಂತು ತೇಥೇ ಭಗವಂತಾಚೇ ಅಧಿಷ್ಠಾನ ಪಾಹಿಜೆ।” ಸತತ ಪ್ರಯತ್ನದಿಂದಲೆ ಸಾಮರ್ಥ್ಯ ಉಂಟಾಗುವದು. ಯಾವನು ಕರ್ಮಪ್ರವೃತ್ತನಾಗುವನೋ ಅವನಿಂದ ಕಾರ್ಯವು ರೂಪವನ್ನು

ತಾಳುವದು, ಆದರೂ ಅದಕ್ಕೆ ಸತ್ಫಲ ಬರಬೇಕಾದರೆ ಭಗವತ್ಕೃಪೆಯು ಮಾತ್ರ ಬೇಕೇ ಬೇಕು. "ವಹ್ನೀತೋ ಚೇತವಾವಾರೇ। ಚೇತವಿತಾಚೆ ಚೇತತೋ। ವಿವೇಕ ಜಾಣೆ ಜೇ ತೈಸಾ। ವಾಢವಿತಾಚಿ ವಾಢತೋ." ಅಗ್ನಿಯನ್ನು ಹೊತ್ತಿಸದೆ ಅದು ಹೊತ್ತುವದಿಲ್ಲ. ಅಲ್ಲಿ ಮಂಥನ ಬೇಕು. ಈ ಹೊತ್ತಿನಲ್ಲಿ ಹೊತ್ತಿಸುವವನೂ ಹೊತ್ತಿ ಹೋಳಪಾಗುತ್ತಾನೆ. ಅದರಂತೆಯೇ ವಿವೇಕವೂ ಕೂಡ ವಿವೇಕ ಪ್ರಯತ್ನದಲ್ಲಿಯೇ ವಿವೇಕಿಸುವನಲ್ಲಿ ಮಾಹಾತ್ಮ್ಯ ಉಂಟಾಗುತ್ತದೆ. "ಕೇಲ್ಯಾನೇ ಹೋತ ಆಹೇರೇ ಆಧಿ ಕೇಲೇಚಿ ಪಾಹಿಜೇ। ಯತ್ನತೋ ದೇವ ಜಾಣಾವಾ। ಅಂತರೀ ಧರಿತಾ ಬರೇ॥" ಮಾಡದೇ ಯಾವುದೂ ಆಗುವದಿಲ್ಲ. ಮೊದಲು ಮಾಡುವದನ್ನು ಮಾಡಬೇಕು. ಯತ್ನವೇ ದೇವರು. ಆ ದೇವರನ್ನು ಹೃದಯದಲ್ಲಿ ಜತನ ಮಾಡಬೇಕು— ಇವೇ ಮೊದಲಾದ ರಾಮದಾಸ ವಚನಗಳು ಮಹಾರಾಷ್ಟ್ರದ ಜನರ ಜೀವದುಸಿರಾಗಿವೆ. ಜ್ಞಾನೇಶ್ವರ–ಏಕನಾಥರ ಪರಮಾರ್ಥವಿವೇಕವೂ, ಜ್ಞಾನನಿಷ್ಠೆಯೂ, ನಾಮದೇವ-ತುಕಾರಾಮರ ಭಾವಶುದ್ಧಿ, ಭಾವನಾಬಲವೂ, ರಾಮದಾಸರ, ಗುರುಚರಿತ್ರಕಾರರ, ಭಕ್ತಚರಿತ್ರಕಾರರ ಕರ್ಮನಿಷ್ಠೆ, ಅಚಲಶ್ರದ್ಧೆ, ಉಪಾಸನಾ ಸಾಮರ್ಥ್ಯವೂ, ಮೋರೋಪಂತ ವಾಮನಪಂಡಿತರ, ಉಕ್ತಿಚಾತುರ್ಯ, ಚೌರಸ ಪಾಂಡಿತ್ಯವೂ, ಮರಾಠ ಸರದಾರರ ವೀರವೃತ್ತಿಯೂ, ಸಾಹಸಪ್ರವಣತೆಯೂ, ಲಾವಣಿಕಾರರ ರಸಿಕವೃತ್ತಿಯೂ, ಮಹಾರಾಷ್ಟ್ರ ಮನೋಧರ್ಮದ ಕೆಚ್ಚಿನ ಘಟಕಗಳಾಗಿವೆ. ಇದೆಲ್ಲ ನಿಜವಿದ್ದರೂ ಮಹಮ್ಮದೀಯರ ದಾಳಿಯನ್ನು ಹಿಮ್ಮೆಟ್ಟಿಸಿ ಮರಾಠರು ವಿಜಯದ ಸ್ವಾಭಿಮಾನದಿಂದ ತಲೆ ಎತ್ತಿದರೂ, ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ದೈವದ ಯಾವದೂ ವಿಚಿತ್ರವಿಪಾಕದಿಂದ ಮಹಾರಾಷ್ಟ್ರ ಧರ್ಮವು ಸರಿಯಾಗಿ ಸಫಲವಾಗಲಿಲ್ಲ. ಇಂಗ್ಲೀಷರ ಪರಿಕೆಯ ಮುಂದೆ, ಮರಾಠರು ಚದುರಿದರು, ಒಡೆದರು, ತಗ್ಗಿದರು, ಬಗ್ಗಿದರು, ನೆಲಸಮನಾದರು. ಇದೇ ಗತಿಯು, ಟೀಪುವಿನ ಮರಣದಿಂದ ಸೋಲಿಸಿಂದ ಕರ್ನಾಟಕದ್ದೂ ಆಯಿತು. ಪೇಶ್ವಾಯಿಯು ಅಸ್ತವಾಯಿತು; ಛತ್ರಪತಿಗಳ ವಂಶದವರೂ, ಇತರ ಮರಾಠ ಬ್ರಾಹ್ಮಣ ಸರದಾರರೂ ಕಾಲನ ತೀರ್ಪಿಗೆ ತಲೆಬಾಗಿ, 'ಜೀವನ್ ಭದ್ರಾಣಿ ಪಶ್ಯತಿ' ಎಂದು ನವೀನಕಾಲವನ್ನು ಸ್ವಾಗತಿಸಲು ಅನುವಾದರು. ಈ ಕಾಲಜ್ಞಾನವು ಶ್ರೀ ಚಿದಂಬರ ದೀಕ್ಷಿತರು, ಅಕ್ಕಲಕೋಟೆಯ ಸ್ವಾಮಿಗಳು, ಶುಭರಾಯರು ಇವರೇ ಮೊದಲಾದವರಿಗಾಗಿ ಅವರು ಗುರುಭಕ್ತಿಯತ್ತ ದೈವಶರಣತೆಯತ್ತ ಜನಸಾಮಾನ್ಯರ ಮನವೊಲಿಸಿ ಅವರು ಜೀವನದಲ್ಲಿ ನಂಬುಗೆ ಕೆಡದಂತೆ, ಅವರು ತೀರ ನಿರಾಶಾ ಪರವಶರಾಗದಂತೆ ಮಾಡುತ್ತಲೆ ಇದ್ದರು. ಜಯಪ್ರಮತ್ತರಾದ ಭಾರತದ ಆಂಗ್ಲಪ್ರಭುಗಳೂ, ಅವರ ಮಂತ್ರಿವರ್ಗದವರೂ, ಅವರ ಧಾರ್ಮಿಕ ಪುರೋಹಿತ ಗಣವೂ, ಆರ್ಥಿಕದೃಷ್ಟಿಗಳಾದ ಅವರ ಜ್ಞಾತಿಬಾಂಧವರೂ, ಇಡೀ ಭರತಖಂಡವನ್ನೇ, ರಾಜಕೀಯ ದಾಸ್ಯದಲ್ಲಷ್ಟೇ ಅಲ್ಲ, ಸಾಂಸ್ಕೃತಿಕ ದಾಸ್ಯದಲ್ಲೂ ಸೆರೆ ಹಿಡಿಯಲು ತೀಕ್ಷ್ಣವಾದ ಸಂಭ್ರಮ ಹಬ್ಬಿಸಿ, ದೇಶದ ದಿಗ್ಬಂಧ ನಡೆಸಿದರು. ಈ ದಿಗ್ಬಂಧದಲ್ಲಿಯೂ ಧೃತಿಗೆಡದ ಸಾಂಸ್ಕೃತಿಕ

ಅಭಿಮಾನದಿಂದ ಕಾದಾಡಿದ, ಕಾದಾಡುತ್ತಿರುವ ದೇಶವೆಂದರೆ ಮಹಾರಾಷ್ಟ್ರವೆಂಬುದು ೧೯ನೆಯ ೨೦ನೆಯ ಶತಮಾನಗಳ ಇತಿಹಾಸವನ್ನು ಅರಿತವರಿಗೆ ಹೇಳಬೇಕಾಗಿಲ್ಲ. ಇದೇನೋ ನಿಜ-ಪರಾಜಯದ ಅನಂತರದಲ್ಲಿ ಕೆಲವು ದಶಕಗಳವರೆಗೆ ಮಹಾರಾಷ್ಟ್ರವು ಅನಿಶ್ಚಯದಲ್ಲಿ ತೂಗಾಡುತ್ತಿತ್ತು. ೧೮೫೭ ರ ಬಂಡಾಯದ ವರೆಗೂ ತಾನು ಇನ್ನೂ ತಲೆ ಎತ್ತೇನೆಂಬ ಹುಮ್ಮಸದಲ್ಲಿಯೂ, ಭ್ರಮೆಯಲ್ಲಿಯೂ ಮಹಾರಾಷ್ಟ್ರವಿತ್ತು. ಹೊಸ ಶಿಕ್ಷಣಕ್ರಮವೂ, ರಾಜ್ಯವ್ಯವಸ್ಥೆಯೂ ಭರದಿಂದ ಸಾಗಿತ್ತು. ಕ್ರಿಶ್ಚನ ಮಿಶನರಿಗಳ ವಿವಿಧ ತಂತ್ರವು ಮಹಾರಾಷ್ಟ್ರಕ್ಕೂ ಬಲೆಯೊಡ್ಡಿತ್ತು. ಈ ಬಲೆಯಲ್ಲಿ ಸಿಕ್ಕೂ ಮಹಾರಾಷ್ಟ್ರಕ್ಕೆ ಸೇವೆ ಮಾಡಿದ ಮೂವರು ಮಹನೀಯರೆಂದರೆ, ಬಾಬಾಪದಮನಜಿ, ಪಂಡಿತಾ ರಮಾಬಾಯಿ, ರೆವರೆಂಡ ಟಿಳಕ. ೧೮೫೭ ರಲ್ಲಿಯೇ ಬಾಬಾಪದಮನಜೀಯವರು 'ಯಮುನಾ ಪರ್ಯಟನ'ವೆಂಬ ಕಾದಂಬರಿಯನ್ನು ಬರೆದು ಮಹಾರಾಷ್ಟ್ರ ಸಮಾಜವನ್ನು ಕೆಣಕಿದರು; ಎಚ್ಚರಿಸಿದರು. ಪದಮನಜೀಯವರು ಮೂಲತಃ ಬೆಳಗಾವಿ ಪ್ರಾಂತದವರು. ಅವರು ಸ್ವತಃ ಕ್ರಿಸ್ತಧರ್ಮಕ್ಕೆ ಸೇರಿ, ಹಿಂದೂಸಮಾಜದ ಹುಳುಕನ್ನು ಹೊರಗೆಳೆದು ವಿಚಾರಿಗಳಿಗೆ ಆಹ್ವಾನವಿತ್ತರು. ಹಿಂದೂ ಅದರಲ್ಲಿಯೂ ಬ್ರಾಹ್ಮಣ ವಿಧವೆಯರ ಗೋಳನ್ನು ಮರ್ಮಚ್ಛೇದವಾಗುವಂತೆ ವರ್ಣಿಸಿದರು. ಪಂಡಿತಾ ರಮಾಬಾಯಿ ಅಂಥ ಒಬ್ಬ ಬ್ರಾಹ್ಮಣವಿಧವೆ ಅವರು ಮೂಲತಃ ಮಂಗಳೂರ ಪ್ರಾಂತದವರು. ದೈವದ ವಿಚಿತ್ರಲೀಲೆಯಿಂದ ಅವರು ಕ್ರೈಸ್ತರಾಗಬೇಕಾಗಿಬಂತು. ಅವರು ತಮ್ಮ ಶೈಕ್ಷಣಿಕ ಚಳುವಳಿಯನ್ನು ಖುದ್ದು ಪೂನಾದಲ್ಲಿಯೇ ಪ್ರಾರಂಭಿಸಿ ಬೌದ್ಧಿಕರೆಂಬ ಅಭಿಮಾನವುಳ್ಳ ಪೂನಾದ ಜನರನ್ನು ಉದ್ದೀಪಿಸಿದರು. ಈ ಉದ್ದೀಪನದ ಮೂರ್ತಿಮತ್ತಾದ ಉತ್ತರವೆಂದರೆ ಆಗರಕರ ಮತ್ತು ಭಾರತರತ್ನ ಕರ್ವೇಯವರು. ಆಗರಕರರು ಮರಾಠಿಯ ಉತ್ತಮ ಪ್ರಬಂಧಕಾರರು, ಟಿಳಕರ ಸಹಾಧ್ಯಾಯಿಗಳು, ಸಹೋದ್ಯೋಗಿಗಳು, ಗೌರವ್ಪೋದಾರ್ಯದ ಎದುರಾಳಿಗಳು. ಕೇಸರಿ-ಮರಾಠಾ ಸಂಸ್ಥೆಗಳಿಗೂ ಬೇರೆ ಶೈಕ್ಷಣಿಕ ಕಾರ್ಯಗಳಿಗೂ ಟಿಳಕರಿಗೂ ನೆರವಾದವರು. ಭಾರತರತ್ನ, ಶತಾಯುಷಿ, ಧೋಂಡೋಪಂತ ಕರ್ವೇಯವರು ಕರ್ಮಯೋಗಿಗಳು, ತತ್ತ್ವತಪಸ್ವಿಗಳು. ಇವರ ಪುಣ್ಯದಿಂದಲೇ ಹಿಂದೂ ಸ್ತ್ರೀಯರು ಶಿಕ್ಷಣಕ್ಕಾಗಿ ಕ್ರೈಸ್ತರಾಗುವ ವಿಪತ್ತಿಯೊಳಗಿಂದ ಪಾರಾದರು. ಪುಣೆಯ ಮಹಿಲಾವಿಶ್ವವಿದ್ಯಾಲಯವು ಕರ್ವೆಯವರ ಜ್ವಲಂತ ಸ್ಮಾರಕವು. ಈ ಸಂಸ್ಥೆಯಲ್ಲಿ ದುಡಿದ ವಾಮನ ಮಲ್ಹಾರ ಜೋಶಿಯವರು ಖ್ಯಾತ ಕಾದಂಬರಿಕಾರರು. ಸ್ತ್ರೀ ಸಮಸ್ಯೆಯನ್ನು ಮತ್ತೊಂದು ಘಟ್ಟ ಮೇಲಕ್ಕೇರಿಸಿದವರು. ಸ್ತ್ರೀಯರು ಸಧವೆಯರಿರಬೇಕೋ ವಿಧವೆಯರಾಗಿಯೇ ಉಳಿಯಬೇಕೋ ಈ ಪ್ರಶ್ನೆಗಿಂತ, ಸ್ತ್ರೀಯರಿಗೂ ಸ್ವಂತ ಜೀವನವಿದೆ, ಜೀವನದ ಗುರಿಯಿದೆ, ಪ್ರತ್ಯೇಕ ವ್ಯಕ್ತಿತ್ವವಿದೆ ಎಂದು ತೋರಿಸಿದರು. ಇವರ ಒಬ್ಬ ಶಿಷ್ಯೆಯರಾದ ಮುಕ್ತಾಬಾಯಿ ದೀಕ್ಷಿತ ಎಂಬವರು 'ಮಾನಸಲಹರಿ' ಮತ್ತು 'ಅನಿರುದ್ಧಪ್ರವಾಹ'ಎಂಬ ಕಥಾಸಂಗ್ರಹಗಳಿಂದ ಸ್ತ್ರೀಸಹಜವಾದ ನವೀನವ್ಯಕ್ತಿಗಳನ್ನು ಎತ್ತಿ ತೋರಿಸುವದಲ್ಲದೇ, 'ಜುಗಾರ'ಎಂಬ ಹೊಸ

ಬಗೆಯ ನಾಟಕದಿಂದ ಸ್ತ್ರೀ ಹೃದಯದ ವಜ್ರಸದೃಶವಾತ್ಸಲ್ಯದ ನವೀನ ದರ್ಶನ ಮಾಡಿಸಿದ್ದಾರೆ. ಮುಕ್ತಾಬಾಯಿಯವರು ಖಾನದೇಶದ ಕರಂದೀಕರ ಮನೆತನದವರು. ಈ ಮನೆತನದಲ್ಲಿಯೇ 'ವಿನಾಯಕ'ರೆಂಬ ವೀರ-ರಸಿಕಕವಿಗಳು ಆಧುನಿಕ ಕಾಲದಲ್ಲಾಗಿಹೋದರು. ನಾರಾಯಣ ವಾಮನ ಟಿಳಕರೆಂಬ ಚಿತ್ಪಾವನ ಕೊಂಕಣಸ್ಥರು ಕ್ರೈಸ್ತರಾಗಿ, ಉತ್ತಮ ಕವಿಗಳೆಂದೂ ಮಹಾರಾಷ್ಟ್ರದಲ್ಲಿ ಮನ್ನಣೆ ಪಡೆದರು. ಇವರು ಅನೇಕ ಭಾವಗೀತೆಗಳನ್ನು ಬರೆದಿರುವುದಲ್ಲದೆ ಕ್ರಿಸ್ತಾಯನವೆಂಬ ಕಾವ್ಯ ಬರೆದಿದ್ದಾರೆ. ರೆವರೆಂಡ ಟಿಳಕ, ಮತ್ತು ವಿನಾಯಕರು ಆಧುನಿಕ ಮರಾಠಿಕಾವ್ಯದ ಪ್ರವರ್ತಕರೆನಿಸಿಕೊಂಡ ಕೇಶವಸುತರ ಸಮಕಾಲೀನರು. ಧಾರವಾಡದಲ್ಲಿ ಕೇಶವಸುತರು ಸರಕಾರೀ ಇಂಗ್ಲೀಷ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಮೊದಲ ಪ್ಲೇಗಿನ ಕಾಲಕ್ಕೆ ಹುಬ್ಬಳ್ಳಿಯಲ್ಲಿ ತೀರಿಕೊಂಡರು. ಇವರು ಧಾರವಾಡದಲ್ಲಿದ್ದಾಗಲು ಮರಾಠಿಕಾವ್ಯ ಬರೆದರು. ರೆವರೆಂಡ ಟಿಳಕರ ಚರಿತ್ರವನ್ನು ಕಾವ್ಯದ ಮಾದರಿಯನ್ನು ನೋಡಿದ ರೆವರೆಂಡ ಚೆನ್ನಪ್ಪ ಉತ್ತಂಗಿಯವರು ಕನ್ನಡದಲ್ಲಿ ನೀಡಿದ್ದಾರೆ. ಮುಕ್ತಾಬಾಯಿ ದೀಕ್ಷಿತರ 'ಜುಗಾರ' ನಾಟಕವು ಲಕ್ಷ್ಮಣರಾವ ಬೇಂದ್ರೆಯವರು 'ಜೂಜು' ಹೆಸರಿನಿಂದ ಕನ್ನಡಿಸಿದ್ದಾರೆ. ಶ್ರೀ ಶಂ.ಬಾ. ಜೋಶಿಯವರು ಮಹಾರಾಷ್ಟ್ರ ಸಾಂಸ್ಕೃತಿಕ ಸಮಸ್ಯೆಗಳನ್ನು ಕುರಿತು ಮರಾಠಿಯಲ್ಲಿ ಒಂದು ಮಹಾಪ್ರಬಂಧವನ್ನು ಬರೆದಿದ್ದಾರೆ. ಅದರಲ್ಲಿ ಅವರು ಕನ್ನಡ ಮರಾಠಿಗಳು ಅವಳಿ-ಜವಳಿ ಎಂದು ಪ್ರತಿಪಾದಿಸಿದ್ದಾರೆ. ನೆರೆಹೊರೆಯ ಭಾರತೀಯ ಸಾಂಸ್ಕೃತಿಕ ಪ್ರಾಂತಗಳು ಅವಳಿ-ಜವಳಿಯಾಗದೆ ಮತ್ತೇನಾಗಬಲ್ಲವು? ಆದರೆ, ಸೋದರಿಕೆಗೆ ಇನ್ನೂ ಮಾನವನು ಸರಿಯಾದ ಅರ್ಥ ಮಾಡಿಕೊಂಡಿಲ್ಲ. ಅರ್ಥ ಮಾಡಿಕೊಳ್ಳಲಿ ಅನರ್ಥಮಾಡಿಕೊಳ್ಳಲಿ ಸೋದರಿಕೆ ಸುಳ್ಳಾಗಲಾರದು ಎಂಬುದು ಸಾಹಿತ್ತಿಕಸಂಬಂಧದಿಂದ ಇಂದಿಗೂ ಕಂಡುಬರುವದೆಂಬುದು ಸುಳ್ಳಲ್ಲ. ಮಹಾರಾಷ್ಟ್ರದೊಳಗಿನ ಕ್ರೈಸ್ತರ ಪರಿವರ್ತನೆಯ ನಿಮಿತ್ತದಿಂದ ನಾವು ಸಾಹಿತ್ತಿಕ ಪರಿವರ್ತನಗಳೇನೇನಾದವು ಎಂಬುದನ್ನು ಈಷನ್ಮಾತ್ರ ಕಂಡುದಾಯಿತು.

ಇನ್ನು ಇನ್ನೊಂದು ನೋಟವನ್ನು ಬೀರುವಾ. ಮೇಕೋಲೇ ಸಾಹೇಬನ ಮಂತ್ರೋಪದೇಶದಿಂದ ಪ್ರಾರಂಭವಾದ ನವೀನ ಶಿಕ್ಷಣಕ್ರಮವೂ ಮರಾಠಿ ಸಾಹಿತ್ಯದಲ್ಲಿ ಕ್ರಾಂತಿಯನ್ನು ಮಾಡಿತು. ಸಂಸ್ಕೃತದ ಅಭಿಮಾನದೊಂದಿಗೆ ಇಂಗ್ಲೀಷನ್ನು ಅಕಸ್ಮಾತ್ತಾಗಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ಭಾಷಾಂತರ ಸಾಹಿತ್ಯವೂ ಅನುಕರಣ ಸಾಹಿತ್ಯವೂ ಪ್ರಾರಂಭದಲ್ಲಿ ತಲೆದೋರಿತು. ಇಂಥ ಯತ್ನಗಳಲ್ಲಿ, ಕಷ್ಣಶಾಸ್ತ್ರೀ ಚಿಪಳೂಣಕರವರು ಮಾಡಿದ 'ಮೇಘದೂತ' ಭಾಷಾಂತರವೂ, ಕಿರ್ಲೋಸ್ಕರರ ಸಂಗೀತ ಶಾಕುಂತಲ ನಾಟಕವೂ, ದೇವಲರವರ 'ಶಾಪಸಂಭ್ರಮ,' 'ಮೃಚ್ಛಕಟಿಕ,' 'ಸಂಶಯಕಲ್ಲೋಲ' ಎಂಬ ನಾಟಕಗಳೂ ಖ್ಯಾತಿಯನ್ನು ಪಡೆದವು. ಸಂಶಯಕಲ್ಲೋಲವು ಮೂಲದಲ್ಲಿ ಮೋಲಿಯರನ ಋಣ. ಇದನ್ನು ವಾಮನರಾವ ಮಾಸ್ತರ ಇವರು ಕನ್ನಡದಲ್ಲಿ ಪರಿವರ್ತಿಸಿ ರಂಗಭೂಮಿಯಲ್ಲಾಡಿ ಕನ್ನಡ ರಸಿಕರನ್ನೂ ರಂಜಿಸಿದರು. Scottನ 'Lady

of the Lake' ಮತ್ತು Tennysonನ Princess 'ದೇವಸೇನಿ' ಮತ್ತು 'ಇಂದಿರಾ' ಎಂದು ಕಾವ್ಯರೂಪಗಳಲ್ಲಿ ಅವತರಿಸಿದವು. ವಿಷ್ಣು ಮೋರೇಶ್ವರ ಮಹಾಜನಿಯವರು ೧೮೮೩ ರಲ್ಲಿಯೇ ಶ್ರೀಕಂಠಯ್ಯನವರಂತೆ ೪೧ ಇಂಗ್ಲೀಷು ಭಾವಗೀತಗಳನ್ನು 'ಕುಸುಮಾಂಜಲಿ' ಯಾಗಿ ಪ್ರಕಟಿಸಿದರು. ನಮ್ಮ 'ಇಂಗ್ಲಿಷ್ ಗೀತೆಗಳ ತ್ರಾಣ ಮಾತ್ರ ಅವುಗಳಿಗೆ ಬರಲಿಲ್ಲ. ಮರಾಠಿಯ ಸ್ವತಂತ್ರಪ್ರತಿಭೆಯು, ವಿಷ್ಣುಶಾಸ್ತ್ರಿ ಚಿಪಳೂಣಕರ ಅವರ ಪ್ರಬಂಧ, ಹರಿ ನಾರಾಯಣ ಆಪಟೇಯವರ ಕಾದಂಬರಿ, ಮತ್ತು ಕೇಶವಸುತ ಇವರ ಕಾವ್ಯಗಳಿಂದ ಪ್ರಕಟಿತವಾಯಿತು. ಚಿಪಳೂಣಕರ ಮರಾಠಿಯ Macoulay, ಆಪಟೇ ಮರಾಠಿಯ Scott, ಕೇಶವಸುತರು ಮರಾಠಿಯ Keats ಎಂದು ಒಂದರ್ಥದಿಂದ ಹೇಳಬಹುದು. ಆದರೆ, Scott ಮೇಕೋಲೆಗಳ ಹೆಸರು ಇಂಗ್ಲಿಷಸಾಹಿತ್ಯದಲ್ಲಿ ಈಗಾಗಲೇ ತಗ್ಗಿದಷ್ಟು, ಚಿಪಳೂಣಕರ, ಆಪಟೇಯವರ ಖ್ಯಾತಿ ಕುಗ್ಗಲಾರದು. ಚಿಪಳೂಣಕರರು ಸಮರ್ಥ ಪ್ರಬಂಧಕಾರರಾಗಿರುವರಲ್ಲದೆ, ಮಹಾರಾಷ್ಟ್ರದ ಸ್ವಾಭಿಮಾನ ಪ್ರಚೋದಕರು, ಬೌದ್ಧಿಕ ವಿವೇಕದ ದೃಷ್ಟಿಪ್ರದಾತರು. ಆಪಟೇಯವರು ತಮ್ಮ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳಿಂದ ಮಹಾರಾಷ್ಟ್ರೀಯ ಜನತೆಗೆ ಅಭಿಮಾನಧನವನ್ನೊದಗಿಸಿದರಲ್ಲದೆ, ಮಹಾರಾಷ್ಟ್ರೀಯ ಕುಟುಂಬಗಳು ತಮ್ಮ ಸ್ತ್ರೀಧನವನ್ನೂ, ಮಕ್ಕಳಸಂಪತ್ತಿಯನ್ನೂ ಹಾರ್ದಿಕ ಎಚ್ಚರದಿಂದ ಕಾಪಾಡಬೇಕು, ದೊಡ್ಡವರನ್ನಾಗಿ ಮಾಡಬೇಕು ಎಂಬ ಪ್ರಬೋಧನೆಯು ಮನರಂಜನೆಯೊಡನೆಯೆ ಜನರ ಹೃದಯದಲ್ಲಿ ಮನೆಮಾಡಿತು. 'ಪಣಲಕ್ಷಾತ ಕೋಣ ಘೇತೋ' 'ಮೀ' 'ಯಶವಂತರಾವ ಖರೇ' ಈ ಕಾದಂಬರಿಗಳು ಅಗರಕರರ ಸಾಮಾಜಿಕ ಪ್ರಬಂಧಗಳು ಬುದ್ಧಿ ವಿವೇಕಗಳಿಗಾಗಿ ಮಾಡಿದ ಕಾರ್ಯವನ್ನೇ ಜನರ ಹೃದಯ ಭಾವನೆಗಳಲ್ಲಿ ಮಾಡಿದವು. ಆಪಟೇಯವರ 'ಭಾವಾನಂದ' ಕಾದಂಬರಿಯಲ್ಲಿ ಲೋಕಮಾನ್ಯ ಟಿಳಕರ ಛಾಯೆಯೂ ಬಿದ್ದಿದೆ. ಆಪಟೇಯವರ ಆದರ್ಶವು ನಮ್ಮ ಗಳಗನಾಥರನ್ನು ಪ್ರಚೋದಿಸಿತ್ತು. ವಿಜಯನಗರ ಇತಿಹಾಸದ ಆಧಾರದಿಂದ ಆಪಟೆಯವರು 'ವಜ್ರಾಘಾತ' ಎಂಬ ಕಾದಂಬರಿಯನ್ನು ಬರೆದಿರುವರಲ್ಲದೆ, ಟೀಪೂಸುಲ್ತಾನನ್ನು ಕುರಿತು ಭಾಷಾಂತರಪ್ರಾಯವಾದ ಅವರದೊಂದು ಕಾದಂಬರಿಯೂ ಇದೆ. ಚಿಪಳೂಣಕರರ ಸೊಂಕು ಮುದವೇಡಕರ, ಮತ್ತು ಕೆರೂರ ವಾಸುದೇವಾಚಾರ್ಯರಿಗಿದ್ದರೂ ಆ ಔನ್ನತ್ಯವು ನಮ್ಮ ಸಾಮಾಜಿಕ ಪರಿಸ್ಥಿತಿಯಿಂದ ಅವರ ಬರೆವಣಿಗೆಗೆ ಬರಲೇ ಇಲ್ಲ. ಸಾಮಾಜಿಕ ಸುಧಾರಣೆಯ ಪ್ರಚೋದನೆಯನ್ನು ಆಪಟೆಯವರ ಕಾದಂಬರಿ ಮಾಡಿದಂತೆ–ಭಾವನಾ ಪರಿಣತಿಯನ್ನು ಮಾಡಲು ಕೇಶವಸುತ ಕವಿಯ ಕವನಗಳೂ ಉಕ್ತಿಗಳೂ ಕಾರಣವಾದವು. ಇವರ ಕ್ರಾಂತಿವಾದವು 'ತುತೂರಿ' ಎಂಬ ಕವನದಲ್ಲಿ ಪ್ರಕಟವಾಯಿತು. ಮಹಾರಾಷ್ಟ್ರೀಯ ಸಂತಕವಿಗಳ ಪಾರಮಾರ್ಥಿಕ ಕವಿತೆಗಳ ಬೆಡಗಿನ ರೀತಿಯ ಪ್ರೇರಣೆಯಿಂದಲೂ, ಕೇಶವಸುತರು ತಮ್ಮ ಹೃದಯದ ಅಗಮ್ಯ ಅನುಭವಗಳನ್ನು 'ಝುಪುರ್ಝಾಗಡೇ ಝುಪುರ್ಝಾ'ಎಂಬ ಬಗೆಯ ಕವನಗಳಲ್ಲಿ ಪ್ರಕಟಿಸಿದರು.

ಹರ್ಷಖೇದಗಳು ಅಸ್ತಮಿಸುತ್ತಲೆ
ಯಾವುದು ಬೆಳಗು? ಯಾವುದು ಕತ್ತಲೆ
ನಗೆಯೂ ಉದುರಿತು
ಕಂಬನಿ ಚೆದುರಿತು
ಕಂಟಕ ಶಲ್ಯದೊಳಿದೆ ಹರ್ಷ
ಮಖ್‌ಮಲಿನಾ ನವಿರಿನ ಸ್ಪರ್ಶ
ಕಾಣದು ಕಣ್ಣಿಗೆ ಏನೇನೂ
ಪ್ರಕಾಶ ಕಳೆದಿತು
ತಿಮಿರವು ಅಳಿದಿತು
ಏನೆನ್ನಲಿ ನಾನೀ ಸ್ಥಿತಿಗೆ
ಝುಪುರ್ಝಾಸಖೀ ಝುಪುರ್ಝಾ
ಭಗಾಟಭಗರೀ ಆಡೋಣ ಬಾ।
ಬಣ್ಣದ ಚವರೀ ಬೀಸೋಣ ಬಾ।
ಬಾ ಪೋರಿ ಬಾ।
ಕೈಗೆ ಕೈ ತಾ॥

ಎಂದು ಹಾಡುತ್ತ ಉತ್ತರ ಕರ್ನಾಟಕದಲ್ಲಿ ಹುಡಿಗೆಯರು ಇಬ್ಬಿಬ್ಬರಾಗಿ ರಿಂಗಣ ಗುಣಿತವಾಡುವದುಂಟು. ಅದೊಂದು ಕ್ರೀಡಾನಂದ, ಹರ್ಷೋನ್ಮಾದ. ಝುಪುರ್ಝಾ ಎಂಬುದು ಕೋಹಂ ಸೋಹಂಗಳೆಂಬಾ ಗಜಿಬಜಿ ಪುಗದಾನಂದ ಸಂವಿತ್ತಿನ ತನ್ಮಯ ಉದ್ಗಾರ. ಕೇಶವಸುತರಿಗೆ ಕಾವ್ಯ ಪ್ರತಿಭೆಯ ವಿಷಯವಾಗಿ ತಕ್ಕಮಟ್ಟಿನ ಲಲಿತೋದ್ಧತ ಅಭಿಮಾನವಿತ್ತು.

ದೇವನ ಮೆಚ್ಚಿನ ಮಕ್ಕಳು ನಾವು
ಯಾರೆನೆ ಕೇಳುವ ಯಾರೋ ನೀವು?

ಎಂದು ತಮ್ಮನ್ನು ಪ್ರತಿಭಟಿಸುವವರಿಗೆ ಕೇಳಿದ್ದಾರೆ. ದೇವತೆಗಳ ಜನನಿಯಾದ ಪ್ರತಿಭೆಯು ಪ್ರಸನ್ನಳಾದರೆ ಪ್ರಪಂಚವೇ ತುಚ್ಛವಾಗಿ ತೋರುವದು ಆಶ್ಚರ್ಯವಲ್ಲ ಎಂದು ಅವರು ಹೇಳುತ್ತಾರೆ. ೧೮೯೨ನೆಯ ಜುಲೈ ೨೮ಕ್ಕೆ ಧಾರವಾಡದಲ್ಲಿ ಬರೆದ 'ಪ್ರತಿಭೆ'ಎಂಬ ಸುನೀತ (Sonnet) ದಲ್ಲಿ.

ಆ ಅತ್ಯದ್ಭುತ ಶಕ್ತಿ ಸಹಸಾ ಸಂಚಾರವಾಗುತ್ತಲೇ ಮುಕ್ತಾತ್ಮಂ ಗಗನಕ್ಕೆ ಹಾರಿ ಯೆರಗಲ್ ಉಚ್ಚೈಃಶ್ರವಂ ಸೋಲುವಂ ದೈತ್ಯಾಂತರ್ಭವಶಕ್ತಿ, ದೇವತೆಯ ಸತ್ತ್ವಂ ಸಮುಂತುಂಬರಲ್ ಸಾಯುಜ್ಯತ್ವವನಾ ವಿರಾಟ ಪುರುಷಂ ತಾನಾಗಿ ತಾನರ್ಪಿಪಂ.

ಎಂದು ಅವರು ಹೇಳುತ್ತಾರೆ. ಇನ್ನೊಂದೆಡೆಗೆ ಅವರು

ಪಿಂಡದಲ್ಲಿ ಬ್ರಹ್ಮಾಂಡವು ಕರಗಿ
ಶಬ್ದಬ್ರಹ್ಮವು ಉಕ್ಕುವದೆರಗಿ।
ಅದರಾ ಧ್ವನಿಯನು ಬ್ರಹ್ಮನು ಕೇಳಿ
ಮಾಡುವ ಸೃಷ್ಟಿಯ ಲೀಲಾಕೇಲಿ.

ಎಂದಿದ್ದಾರೆ. ಸಾಮಾನ್ಯವಾಗಿ ಅವರಿಗೆ ಸಂಸಾರದಲ್ಲಿ ಸುಖವಿರಲಿಲ್ಲ, ಕಾವ್ಯಪ್ರೇರಣೆಯಾದಾಗ ಅವರನುಭವಿಸುವ ಭಾವೋನ್ನತಿಯೇ ಬೇರೆ.

ಆಗ ಕಂಡೆನು ನನ್ನ ವಿಭೂತಿ
ವಿಶ್ವದಿ ಹಬ್ಬಿ ವಿಶ್ವವ ಕೂಡಿ
ದಿಕ್ಕಾಲಕ್ಕೂ ಅತೀತವಾಗಿ
ಉಗಮದಿ, ವಿಲಯದಿ ಅನಂತನಾದೆ
ಭೇದವನೆಲ್ಲವ ಮರೆತವನಾಗಿ.

ಹೀಗೆ ಗೂಢಗುಂಜನ ಮಾಡುವ ಈ ಕವಿ, ಸುತ್ತಲಿನ ಸಂಸಾರದ ವಿಕಲಾವಸ್ಥೆಯನ್ನು ಕಂಡು

ರಾಕ್ಷಸ ಸಂತಾನದ ಸಂತೆ
ರೂಢಿಗಳೊತ್ತಾಯದ ಕಂತೆ
ಕೂಳಬಾಕರನು ಬಕ್ಕರಿಸುವವಿವು
ಕಚೇರಿಗಳನೇರ್ಪಡಿಸದಿರಿ
ಎಚ್ಚರ! ಕೇಳಿರಿ ತುತ್ತೂರಿ.

ಎಂದು ಜಾಗೃತಿಯನ್ನೂ ಉದ್ದೀಪಿಸುತ್ತಾರೆ.

ಸುತ್ತಾಡುತ್ತಿದೆ ನನ್ನ ಪಿಶಾಚಿ।
ಮೃತ ಆಶೆಗಳಾ ಚಿತೆಗಳ ಆಚಿ।

ಎಂದು ಬಿಸುಸುಯ್ದು ಈ ಕವಿ

ಇಹಲೋಕದ ಆ ಕಲ್ಪಕತೆ
ಅದುವೇ ಉದ್ಯೋಗ ಪ್ರಿಯತೆ
ಹೃದಯದೊಳುದಿಸಿದ ನಿರ್ಧಾರ
ಅದುವೇ ಸಿದ್ಧಿಯ ದಾತಾರ

ಹಣೆ ತಲೆ ಜಜ್ಜುವದೇತಕ್ಕೋ
ಕೈ ಬಳೆತೊಡು ಮೊದಲಿದೊ ತಕ್ಕೋ
ಹೃದಯದಿಂದ ಬರದಾ ಮಾತು
ಮಾತಲ್ಲವು ಅವು ಬರಿ ತೂತು—

ಎಂದು ಕೇಶವಸುತ ಸಾರಿದ್ದಾರೆ. ಅವರ ಮಾತು ವ್ಯರ್ಥಹೋಗಲಿಲ್ಲ. ಅವರ ಕವಿತೆಯಿಂದ ಪ್ರೇರಣೆ ಹೊಂದಿದವರಲ್ಲಿ ವಾ.ಬ. ಪಟವರ್ಧನ, ಕವಿ ವಸಂತರು ಕಾವ್ಯರಸಗ್ರಾಹಿಗಳಾದರು. ಅವರ ಕವಿತಾ ಸಂಗ್ರಹಕಾರರಾದ 'ದಿವಾಕರ' ಅವರು ಅದ್ವಿತೀಯರಾದ ನಾಟ್ಯಛ್ಛಟಾಕಾರರೆಂದು ಖ್ಯಾತರಾದರು. ಅವರ 'ಚೇಲಾ' ಎಂದು ಪಂಥದಿಂದ ಉದ್ಘೋಷಿಸಿದ ಗೋವಿಂದಾಗ್ರಜರು ಪ್ರತಿಭಾವಂತ ಕವಿಗಳೆಂದು ಕೀರ್ತಿವಂತರಾದರಲ್ಲದೆ, ಪ್ರೇಮ ದಶಾಹೀರರೆಂದೆನಿಸಿಕೊಂಡ ಅವರು ಉತ್ತಮ ನಾಟಕಕಾರರೆಂದೂ, ವಿಡಂಬಕ ವಿನೋದಲೇಖಕರೆಂದೂ ಹೆಸರಾದರು. ಅವರ 'ಏಕಚಪ್ಯಾಲಾ' ಎಂಬ ನಾಟಕವು ಕನ್ನಡದಲ್ಲಿ ಅನೇಕ ವಿಕಾರಗಳನ್ನೂ, ರೂಪಗಳನ್ನೂ ಹೊಂದಿ, ರಂಗಭೂಮಿಯಲ್ಲಿ ರಂಜನೆಗೊಳಿಸಿದೆ. ಬಳ್ಳಿಗುರುತರ ಭಜನೆ ಕೇಳಿ ಹೊಟ್ಟೆಯ ಏರ್ಪಾಟು ಮಾಡವ ಭಗವಂತ ಕಣ್ಣನ್ನೇ ಕೇಳಿದರೆ ಕೊಡಲಾರನೇ? ಆದರೆ ವೈಗಳ್ಳರಿಗೆ ಕಣ್ಣು ಬೇಕಾಗಿಲ್ಲ. ದುಡಿಯದೇ ಹೊಟ್ಟೆ ತುಂಬಿಸಿಕೊಳ್ಳಬೇಕಾಗಿದೆ—ಎಂದು ಅವರೊಂದು ವಿಡಂಬಕ ಗೀತದಲ್ಲಿ ಹೇಳುತ್ತಾರೆ. ನಾಟಕ ಕಂಪೆನಿಯಲ್ಲೇ ಹುಟ್ಟಿಬೆಳೆದ ಬಾಲಕನೊಬ್ಬನು ಮೊದಲಸಲ ಲಗ್ನ ಸಮಾರಂಭ ಕಂಡಾಗ, ಅದೊಂದು ಅಸಡ್ಡಾಳ ಕಂಟ್ರೀ (Country) ನಾಟಕದಂತೆ ಕಂಡಿತೆಂದು ಒಂದು ಹಾಸ್ಯಲೇಖನ ಬರೆದು ನಮ್ಮ ಪ್ರೇಮರಹಿತ ಶರೀರ ಸಂಬಂಧಗಳು ಹುಚ್ಚು ನಾಟಕಗಳಲ್ಲದೇ ಮತ್ತೇನು? ಎಂದು ವ್ಯಂಗ್ಯವಾಗಿ ಟೀಕಿಸಿದ್ದಾರೆ. ಗೋವಿಂದಾಗ್ರಜರು ಕೇಶವಸುತರನ್ನು ಕವಿತೆಯ ಗುರು ಎಂದು ಕಂಡಂತೆ, ನಾಟಕದಲ್ಲಿಯೂ ಹಾಸ್ಯ ವಿನೋದದಲ್ಲಿ ಕೋಲ್ಹಟಕರರನ್ನು ಗುರುಗಳೆಂದು ಗಣಿಸಿದ್ದಾರೆ. ಆದರೆ ಕೋಲ್ಹಟಕರರ ವಿಡಂಬಕ ಲೇಖನಗಳಷ್ಟು, ಅವರ ನಾಟಕಗಳು (ತಂತಮ್ಮ ಕಾಲಕ್ಕೇನೋ ಹೆಸರು ಪಡೆದರೂ) ಅಸಮಾನ್ಯತೆಯನ್ನು ಪಡೆದಿಲ್ಲ. ಅಣ್ಣಾಸಾಹೇಬ ಕಿರ್ಲೋಸ್ಕರ ಮತ್ತು ದೇವಲ ಅವರ ಅನಂತರದಲ್ಲಿ ಕೋಲ್ಹಟಕರರು ಗಣ್ಯರಾದ ನಾಟಕಕಾರರೆನಿಸಿಕೊಂಡರೂ, ಗೋವಿಂದಾಗ್ರಜ ಮತ್ತು ಖಾಡಿಲ್ಕರರಷ್ಟು ಅವರ ನಾಟಕಗಳು ಜನಪ್ರಿಯವಾಗಲಿಲ್ಲ.

ಮಹಾರಾಷ್ಟ್ರದ ಆದ್ಯನಾಟಕಕಾರರಾದ ವಿಷ್ಣುಪಂತ ಭಾವೆಯವರಂತೆ, ದೇವಲರಂತೆ ಸಾಂಗಲಿಪ್ರಾಂತದವರು. ಆದರೆ ಅವರ ಕರ್ಮಭೂಮಿ ಪುಣೆ-ಮುಂಬಯಿ ಪಟ್ಟಣಗಳೇ ಆಯಿತು. ಬಾಲಗಂಗಾಧರ ಟಿಳಕರವರ ಸಿದ್ಧಸೇನಾನಿಗಳೆಂದು ಅವರ

ಪತ್ರಿಕಾಪ್ರಪಂಚದಲ್ಲಿ ಕಾರ್ಯಮಾಡಿದ ನ. ಚಿಂ. ಕೇಳಕರ ಮತ್ತು ಕೃ.ಪ್ರ. ಖಾಡಿಲಕರ ಇವರಿಬ್ಬರೂ ಒಂದೊಂದು ಬಗೆಯಲ್ಲಿ ಮರಾಠಿ ಸಾಹಿತ್ಯದ ಯುಗಪುರುಷರಹುದು.

ಖಾಡಿಲ್ಕರರು ಪತ್ರಿಕಾಪ್ರಪಂಚದಲ್ಲಿ ಖ್ಯಾತನಾಮರಾಗಿದ್ದರು. ಅವರ ಚಿರಂಜೀವರು ತಂದೆ ಪ್ರಾರಂಭಿಸಿದ ಪತ್ರಿಕೆಯ ಸಂಚಾಲನೆಯನ್ನು ಇಂದಿಗೂ ಮಾಡುತ್ತಲೇ ಇದ್ದಾರೆ. ಖಾಡಿಲ್ಕರರ ಧರ್ಮಪ್ರವಚನಪರ ಗದ್ಯ ಲೇಖನಗಳೂ ಇವೆ. ಆದರೆ ಅವರ ಕೀರ್ತಿ ನಾಟಕಕಾರರೆಂದು. ಅವರ ಗದ್ಯನಾಟಕ, ಸಂಗೀತನಾಟಕಗಳು, ಅವರ ಬರೆವಣಿಗೆಯ ಚಾತುರ್ಯದಷ್ಟೇ ನಟರ ಮತ್ತು ನಾಟಕ ಕಂಪೆನಿಗಳ ದಕ್ಷತೆಯಿಂದ ಕಲಾಚಾತುರಿಯಿಂದ, ಅಭಿನಯಪಟುತ್ವದಿಂದ, ಅದ್ವಿತೀಯಗಳೆನಿಸಿಕೊಂಡವು. 'ಭಾವುಬಂದಕೀ' ಎಂಬ ಅವರ ಗದ್ಯನಾಟಕವು ಪೇಶವೆಯ ಇತಿಹಾಸಕ್ಕೆ ಸಂಬಂಧಿಸಿದುದು ಎಂಬ ಕಾರಣಮಾತ್ರದಿಂದ ಅಲ್ಲ, ಆದರೆ, ಅದರಲ್ಲಿ ಶೇಕ್ಸಪಿಯರನ, ಹ್ಯಾಮಲೆಟ್ ಮತ್ತು ಅಯಾಗೋ ಪಾತ್ರಗಳ ಪ್ರತಿಬಿಂಬಗಳು ನವೀನ ಕಲಾಪೂರ್ಣತೆಯಿಂದ ಬಂದುದರಿಂದ ನಟರ ಖ್ಯಾತಿಗೂ ಕಾರಣವಾಯಿತು. ಅವರ 'ಕೀಚಕವಧ' ಎಂಬ ಗದ್ಯನಾಟಕವು ಕರ್ಜನಶಾಹಿಯನ್ನು ವ್ಯಂಗ್ಯವಾಗಿ ಟೀಕಿಸುವದೆಂಬ ಸೂಚನೆ ಮೂಲಕ ಬ್ರಿಟೀಷ ಸರಕಾರದಿಂದ ಜಪ್ತಮಾಡಲಾಗಿತ್ತು. ಅವರ 'ಮಾನಾಪಮಾನ' 'ವಿದ್ಯಾಹರಣ' 'ರುಕ್ಮಿಣಿಸ್ವಯಂವರ' 'ದ್ರೌಪದಿ' ನಾಟಕಗಳು ಬಾಲಗಂಧರ್ವರ ಅಭಿನಯ ಸಾಮರ್ಥ್ಯದಿಂದಲೂ, ಗಾನಮಾಧುರಿಯಿಂದಲೂ ಮಹಾರಾಷ್ಟ್ರವನ್ನೇ ಏಕೆ ಉತ್ತರ ಕರ್ನಾಟಕವನ್ನೂ ಲೂಟಿ ಮಾಡಿದವು. ಖಾಡಿಲ್ಕರರು ನಾಟ್ಯತಂತ್ರಜ್ಞರು, ಆದರ್ಶವಾದಿಗಳು, ಕಥಾವಸ್ತುನಿರ್ವಹಣ ಕುಶಲರು. ಅವರ ವಿನೋದವು ಉಪಹಾಸ ಪ್ರಧಾನವಾದ್ದರಿಂದ, ಗೋವಿಂದಾಗ್ರಜ–ಗಡಕರಿಯವರಷ್ಟು ಎಂದೂ ರಸಿಕಪ್ರಿಯವಾಗಲಿಲ್ಲ. ಗಡಕರಿಯವರ ಹಾಸ್ಯಪ್ರಭಾವವೇ ಪ್ರ. ಕೇ. ಕೇಶವ ಇವರಿಗೆ ಹಾದಿ ತೋರಿಸಿತು, ಹಾದಿಗೆಡಿಸಿತು. ಅತ್ರೆಯವರು ಭಾವದಿಂದ ಕವಿಗಳು. ಆದರೆ ಅವರ ಬುದ್ಧಿಗೆ ವಿಡಂಬನೆಯ ವಿನೋದದ, ಅಪಹಾಸ್ಯ–ಉಪಹಾಸಗಳ ಚಟ ಹತ್ತಿ ಅವರಿಂದ ಅನೇಕ ಮನೋರಂಜಕ ನಾಟಕಗಳನ್ನೂ ವಿಡಂಬಕ ಕವಿತೆಗಳನ್ನೂ ಬರೆಯಿಸಿದೆ. ಅವರು ಪತ್ರಿಕಾಪ್ರಪಂಚದಲ್ಲಿಯೂ ಹೆಸರುವೆತ್ತರು. ಅವರ ಉಪಹಾಸಾತ್ಮಕ ಬರೆವಣಿಗೆಯು ಅನೇಕರನ್ನು ಜರ್ಜರರನ್ನಾಗಿ ಮಾಡಿರುವದಲ್ಲದೆ ತನ್ನ ಚಾಪಲ್ಯದಿಂದ ವಾಗ್ಮಿತೆಯ ಗಾಂಭೀರ್ಯವನ್ನೂ ಶ್ರೋತೃವೃಂದದ ಸಮಚಿತ್ತತೆಯನ್ನೂ ಭಂಗಗೊಳಿಸಿದೆ. ಈ ಅತ್ಯುದ್ದೀಪಕ ಉಪಹಾಸಮಾರ್ಗದಲ್ಲಿ ಅತ್ರೇಯವರ ಇನ್ನೊಬ್ಬ ಪ್ರವರ್ತಕರೆಂದರೆ ಅಚ್ಯುತ ಬಳವಂತ ಕೋಲ್ಹಟಕರ ಅವರು. ಟಿಳಕರ ಬರೆವಣಿಗೆ ಮತ್ತು ಚರಿತ್ರೆಯಿಂದ ಅತ್ಯುತ್ಸಾಹಿತರಾದ ಇವರು ಆದರ್ಶವಾದದಿಂದ ತಂದೆಯು ಕೂಡ ಜಗಳವಾಡಿ, ತನ್ನ ಹೆಸರಿನಿಂದ ತಂದೆಯ ಹೆಸರನ್ನೆ ತೊಡೆದು ಹಾಕಿ, ಅಲ್ಲಿ ಟಿಳಕರ ಹೆಸರು ಹಾಕಿದರೆಂದು ಹೇಳುತ್ತಾರೆ. ಬಳವಂತ ಎಂಬುದು ಟಿಳಕರ ಹೆಸರು; ಕೋಲ್ಹಟಕರರ ತಂದೆಯವರ ಹೆಸರಲ್ಲ. ಇಂಥ ನಿಷ್ಠೆ, ಇಂಥ ಛಲದವರಾದ ಇವರು ರಾಜಕೀಯದ ದುರ್ವಿಲಾಸ

ದಿಂದ ತಮ್ಮ ಕೊನೆಗಾಲದಲ್ಲಿ ವಿಡಂಬನೆಯಿಂದ ಟಿಳಕರನ್ನ ಪರಾಜಿತರನ್ನಾಗಿ ಮಾಡಲು ಹವಣಿಸಿ, ತಾವೇ ತೇಜೋಹೀನರಾದರು. ಉಪಹಾಸಗರ್ಭಿತ ವಿನೋದದಿಂದ ಅನ್ಯೋಕ್ತಿವಿಲಾಸದಿಂದ, ಉಪಮಾ ಉತ್ಪ್ರೇಕ್ಷೆಗಳ ಔಚಿತ್ಯದಿಂದ, ದೃಷ್ಟಾಂತ-ನಿದರ್ಶನಗಳ ಸಮೀಚೀನತೆಯಿಂದ, ಅರ್ಥಾಂತರನ್ಯಾಸ ಕೌಶಲದಿಂದ ಪ್ರಗಲ್ಭ ಪಾಂಡಿತ್ಯದ ಚಾತುರಿಯಿಂದ, ನರ್ಮಹಾಸ್ಯದ ರಸಿಕತೆಯಿಂದ, ಭಾವೋದ್ದೀಪಕ ಸಾಮರ್ಥ್ಯದಿಂದ ಬ್ಯಾರಿಸ್ಟರ ಸಾವಕರರಂಥ ಅಸಾಮಾನ್ಯವ್ಯಕ್ತಿಗೆ ಪ್ರೇರಕರಾದರೆಂಬ ಕೀರ್ತಿಯುಳ್ಳ ಲೇಖಕರೆಂದರೆ, ಶಿವರಾಮ ಮಹಾದೇವ ಪರಾಂಜಪೇಯವರು. ಬ್ರಿಟಿಷ ಸರಕಾರದ ಅವಕೃಪೆಗೆ ಪಾತ್ರವಾಗಿ ಅವರ ಲೇಖನ ಪ್ರಪಂಚವು ಬಹುದಿನ ಅಜ್ಞಾತವಾಸದಲ್ಲಿತ್ತು. ಈಗ ಅದು ಮತ್ತೆ ರಸಿಕವಾಚಕರ ಅವಗಾಹನಗೆ ದೊರೆಯುವಂತಾಗಿದೆ. ಪರಾಂಜಪೆಯವರು ಕೆಲಕಾಲ ಟಿಳಕರವರ ಬಲಗೈ ಎಡಗೈಯಂತಿದ್ದಾಗ ಉತ್ತರ ಕರ್ನಾಟಕದಲ್ಲಿ ಪ್ರಯಾಣಬೆಳೆಸಿದ್ದರು. ಅವರ ಮಾತಿನ ಚಾತುರಿಯ ರೀತಿ, ನಮ್ಮತ್ತಣ ಕವಿಗಳಾದ ಕಾವ್ಯಾನಂದ ಪೂಣೇಕರರಲ್ಲಿ ಮಿಂಚುತ್ತಿತ್ತು. ಆದರೆ ರಾಜಕೀಯ ಚಾರಿತ್ರದ ಆವರಣವಿಲ್ಲದೆ, ಬೇರೆ ಪರಿಸ್ಥಿತಿಯಿಲ್ಲದೆ ಅದು ಪರಿಸ್ಫುಟವಾಗದೆ ಹೋಯಿತು.

ರಾಜಕೀಯದ ಒಂದು ಧಾರೆಯನ್ನು ಹಿಡಿದು ಇದುವರೆಗು ನಾನು ಕೆಲವೊಂದು ಲೇಖಕರ ವ್ಯಕ್ತಿತ್ವವನ್ನು ಎತ್ತಿ ತೋರಿಸಿದೆನು. ಇನ್ನು ಸಾಹಿತ್ಯರೂಪ ಮುಖ್ಯವಾಗಿರಿಸಿ ಬೇರೆ ಕೆಲವು ಲೇಖಕರ ವಿಶೇಷಗಳನ್ನು ಹೇಳುತ್ತೇನೆ.

ನಾಟಕಕಾರರಲ್ಲಿ, ಕಿರ್ಲೋಸ್ಕರ, ದೇವಲ, ಕೋಲ್ಹಟಕರ ಖಾಡಿಲ್ಕರ ಗಡಕರಿ ಅತ್ರೇ, ಇವರ ಹೆಸರು ಉಲ್ಲೇಖಿಸಿದೆ. ಮಾಮಾ ವರೇರಕರ ಅವರು ಪ್ರಖ್ಯಾತ ನಾಟಕಕಾರರೆನಿಸಿಕೊಂಡಿದ್ದಾರೆ. ರಂಗಭೂಮಿಗೆ ಅವರ ಸೇವೆ ಅಖಂಡವಾಗಿ ಸುಮಾರು ೩೦ ವರ್ಷಗಳಿಂದ ಸಲ್ಲುತ್ತ ಬಂದಿದೆ. ವರೇರಕರ ಅವರು, ನಾವೀನ್ಯಪ್ರಿಯರು, ಚೇಷ್ಟೆಯಲ್ಲಿಯೂ ಪ್ರತಿಷ್ಠೆ ಬೆಳೆಸುವವರು ಆಗಿದ್ದು ಸ್ತ್ರೀಪಾತ್ರಗಳಿಗೆ ಮೇಲ್ಮೆಯನ್ನು ಕೊಡುವವರಲ್ಲಿ ಗಟ್ಟಿಗರಾಗಿದ್ದಾರೆ. ಅವರು ಕಾದಂಬರೀಕಾರರೂ ಆಗಿದ್ದಾರೆ. ಅವರ ಸಾಮಾಜಿಕ ಪಾತ್ರಗಳೇ ಆಗಲಿ, ಪೌರಾಣಿಕ ಪಾತ್ರಗಳೇ ಆಗಲಿ, ಭಾರತೋಪಾಖ್ಯಾಗಳ ಪಾತ್ರಗಳಂತೆ ಅವರ ಸ್ತ್ರೀನಾಯಿಕೆಯಲ್ಲಿ ಗಡಸು ಧ್ಯಾರ್ಷ್ಟ್ಯಹೆಚ್ಚು, 'ಭೂಮಿಕನ್ಯಾಸೀತಾ' ಎಂಬ ಅವರ ತೀರ ಹೊಸನಾಟಕದಲ್ಲಿ ಸೀತಾ ಮತ್ತು ಉರ್ಮಿಳೆಯರ ಪಾತ್ರದ ಮುಂದೆ ರಾಮಚಂದ್ರನೂ ಎಡವನಾಗಿ ಕಾಣುತ್ತಾನೆ. ಅವರ ವಾಲ್ಮೀಕಿ ಕೈಸಾಗದವನಂತೆ ಸುಧಾರಿಸಿಕೊಳ್ಳುತ್ತಾನೆ. ಪ್ರಚಾರಕನ ಪ್ರೇರಣೆಯು, ನವೀನಧರ್ಮ ಪ್ರತಿಪಾಲಕನ ಬಿಂಕವು ಅವರ ಪ್ರಮುಖಪಾತ್ರಗಳ ರೋಮರೋಮದಲ್ಲಿ ತುಳುಕುತ್ತದೆ. ರಾಂಗಣೇಕರರೆಂಬವರು ಮತ್ತೊಬ್ಬ ತಂತ್ರಸಿದ್ಧ ನಾಟಕಕಾರರು. ಒಂದು ಬಗೆಯ ಆಕರ್ಷಕ ಕಲಾತ್ಮಕತೆಯು ಅವರ ನಾಟ್ಯಪ್ರಯೋಗಗಳ ಜೀವಾಳವಾಗಿದೆ. ಪು. ಲ. ದೇಶಪಾಂಡೆಯವರು ಹಾಸ್ಯಪ್ರವೃತ್ತಿಯನ್ನೆ ಪ್ರಬಲವಾಗಿ ಉಪಯೋಗಿಸಿಕೊಳ್ಳುವ ತರುಣ ನಾಟಕಕಾರರು.

ಅವರು ಉತ್ತಮ ಹಾಸ್ಯವಿಡಂಬನಕಾರರು, ಗ್ರಾಮೀಣ 'ತಮಾಷಾ' ನಾಟ್ಯಗಳಿಗೆ ಹೊಸಜೀವ, ಹೊಸರೂಪ ಕೊಡುವವರೂ ಆಗಿದ್ದಾರೆ.

ಕಾದಂಬರಿಕಾರರಲ್ಲಿ ಆಪಟೇ, ವಾಮನ ಮಲ್ಹಾರ ಜೋಶಿಯವರನ್ನು ಈ ಮೊದಲೆ ಹೆಸರಿಸಿದ್ದಾಗಿದೆ. ಜೋಶಿಯವರ ರಾಗಿಣಿ ಕಾದಂಬರಿಯು ಸಂಗ್ರಹರೂಪವಾಗಿ ಕನ್ನಡದಲ್ಲಿಯೂ ಪ್ರಕಟವಾಗಿತ್ತು. ಕಲಾ ಮತ್ತು ನೀತಿಗಳ ತತ್ತ್ವವಿವೇಕವನ್ನು ಹೃದಯಗ್ರಾಹಿಯಾಗಿ ತಿಳಿಸಿಕೊಡಲು 'ಇಂದು ಕಾಳೆ ಸರಲಾ ಭೋಳೇ' ಎಂಬ ಕಾದಂಬರಿಯನ್ನು ಅವರು ಬರೆದರು. ತತ್ತ್ವಜಿಜ್ಞಾಸೆ, ವಿವೇಕ, ಆವಿಷ್ಕಾರಕ್ಕಾಗಿ ಜೋಶಿಯವರು ಕಾದಂಬರಿ ಬರೆದರೆ, ಸಾಮಾಜಿಕ ಜಾಗೃತಿ, ಸಾಮೂಹಿಕ ಪ್ರಜ್ಞೆಗಾಗಿ ಮರಾಠಿ ಜ್ಞಾನಕೋಶಕಾರರೆಂದ ಪ್ರಖ್ಯಾತರಾದ ಡಾ. ಕೇತಕರ ಅವರು ಕಾದಂಬರಿಗಳನ್ನು ಬರೆದರು, ಮಾಡಖೋಲಕರ ಅವರು ರಾಜಕಾರಣದ ಒಪ್ಪವನ್ನೂ, ದಾಂಡೇಕರ ಅವರು ಪ್ರಾದೇಶಿಕತೆಯ ಸೊಬಗನ್ನೂ, ಫಡಕೆಯವರು ತರುಣ ತರುಣಿಯರ (ಅದರಲ್ಲೂ ಕಾಲೇಜು ಜೀವನದವರ) ಮನರಂಜನೆಯ ರಸಪಾನೀಯವನ್ನು ಖಾಂಡೇಕರ ಅವರ ಲೇಖನ ಚಾತುರಿ ಕಲಾಕುಸುರಿಯನ್ನು ಕಾದಂಬರಿಗೆ ತೊಡಿಸಿ ವಿವಿಧ ಭಂಗಿಗಳಲ್ಲಿ ಕುಣಿಸಿದ್ದಾರೆ. ನಾಥ ಮಾಧವ ಮತ್ತು ಅವರ ಜಾಡಿನಲ್ಲಿ ಹೊರಟ ಹಡಪ ಅವರು ಜನರ ವಾಚನಾಭಿರುಚಿಯನ್ನು ಉಪಯೋಗಿಸಿಕೊಳ್ಳುವದಲ್ಲದೇ, ಒಂದು ರೀತಿಯಲ್ಲಿ ಐತಿಹಾಸಿಕವಾಗಿ ಕಾಣುವ ಕಾದಂಬರಿಗಳನ್ನು ಬರೆದು ಈ ಸಾಹಿತ್ಯವನ್ನು ಪುಷ್ಟಿಗೊಳಿಸಿದ್ದಾರೆ. ಫಡಕೆ, ಖಾಂಡೇಕರ, ಬೇಡೇಕರ, ಪು. ಯ. ದೇಶಪಾಂಡೆ, ಇವರೇ ಮೊದಲಾದವರ ಹಲವು ಕಾದಂಬರಿಗಳು ಕನ್ನಡಕ್ಕೆ ರೂಪಾಂತರಿತವಾಗಿವೆ.

ಕವಿಗಳಲ್ಲಿ ಕೇಶವಸುತ, ಟಿಳಕ, ವಿನಾಯಕ, ಗೋವಿಂದಾಗ್ರಜರಂತೆ ಬಾಲಕವಿ ಠೋಮರೆ, ತಾಂಬೇ, ಮಾಧವ ಜ್ಯೂಲಿಯನ, ಯಶವಂತ, ಕುಸುಮಾಗ್ರಜ, ಬೋರಕರ, ವಿಂದಾ ಕರಂದೀಕರ, ರೇಗೆ ವರ್ಧೇಕರ ಇವರುಗಳು ತಂತಮ್ಮ ವೈಶಿಷ್ಟ್ಯಗಳಿಂದ ಲೋಕಪ್ರಿಯರಾಗಿದ್ದಾರೆ. ತಾಂಬೇಯವರ ನಾದಮಾಧುರ್ಯದ ಜಾಡನ್ನು ಹಿಡಿದವರು ಬೋರಕರ ಅವರು. ಇವರು ಧಾರವಾಡ ಕಾಲೇಜನಲ್ಲಿಯೂ ಕಲಿತವರು. 'ಮಹಾತ್ಮಾಯನ' ಎಂಬ ಮಹಾಕಾವ್ಯವನ್ನು ಓವಿಯ ನವ್ಯಧಾಟಿಯಲ್ಲಿ ಬರೆಯುತ್ತಿದ್ದಾರೆ.

ಹಲವು ಕಾದಂಬರಿಕಾರರು ಲಘುಕತೆಗಳನ್ನೂ ಲಘುನಿಬಂಧಗಳನ್ನೂ ಬರೆದಿದ್ದಾರೆ. ಹೊಸ ತಂತ್ರದಿಂದ ಬರೆಯುವವರಲ್ಲಿ ಮಾಡಗೂಳಕರ, ಅರವಿಂದ ಗೋಖಲೇ, ದಿಘೇ, ಚೋರಘಡೇ ಭಾವೇ, ಗಾಡಗೀಳ ಇವರು ಪ್ರಮುಖರಾಗಿದ್ದಾರೆ. ಒಂದು ಬಗೆಯ ವಾಸ್ತವತೆಯ ಭೇದಕದೃಷ್ಟಿಯಿಂದ ಇವರು ಕತೆಗಳನ್ನು ಬರೆಯುತ್ತಾರೆ. ಸಲೀಲವಾದ ಲಘು ಬರೆವಣಿಗೆಗೆ 'ಕಿವಿಮಾತು' 'ಗುಜಗೋಷ್ಟೀ' ಎಂದು ಹೆಸರಿಸಿದ ಫಡಕೆಯವರೇ ಉತ್ತಮ ಲಘುನಿಬಂಧಗಳನ್ನು ಬರೆಯುತ್ತಾರೆ. ಸಾನೇ ಗುರುಜಿಯವರ

ಬರೆವಣಿಗೆಯು ಭಾವನಾಪ್ರಾಧಾನ್ಯದಿಂದ ಉತ್ಸಾಹಿ ತರುಣರಿಗೂ ಬೆಳೆಯುವ ಬಾಲಕರಿಗೂ ಪ್ರಿಯವಾಗಿರುತ್ತದೆ.

ನಾಟಕ, ಕಾದಂಬರಿ, ಕತೆ, ಕವಿತೆ, ನಿಬಂಧಗಳ ಕಥೆಯನ್ನು ತೀರ ಹಾರುನೋಟದಿಂದ ತೋರಿಸಿದ್ದಾಯಿತು. ಆದರೂ ಮಹಾರಾಷ್ಟ್ರದ ಸದ್ಯದ ಜೀವಾಳವು ಸಾಹಿತ್ಯಕ್ಕಿಂತ ಅವರ ಸಾಮಾಜಿಕ ಜೀವನದಲ್ಲಿದೆ. ಬಾಲಗಂಗಾಧರ ಟಿಳಕರವರ ಗೀತಾರಹಸ್ಯವು ಜ್ಞಾನೇಶ್ವರಿಯಷ್ಟೆ ಮಹತ್ತ್ವದ ಸಾಹಿತ್ಯಗ್ರಂಥವೆಂದು ಮರಾಠಿ ಸಾಹಿತ್ಯ ಸಂಮೇಲನದ ಪೀಠದಿಂದ ನಾಟಕಕಾರ ಖಾಡಿಲ್ಕರರು ಸಾರಿದ್ದು ನನಗೆ ನೆನಪಿದೆ. ಇನ್ನೊಬ್ಬ ಸಾಹಿತ್ಯಸಂಮೇಲನಾಧ್ಯಕ್ಷರು ಮರಾಠಿ ಕಾವ್ಯಕ್ಕೆ ಮಹಾತ್ಮತೆಯು ಇನ್ನೂ ಬಂದಿಲ್ಲ, ಬರಲಿದೆ ಎಂದು ಹೇಳಿದ್ದಾರೆ. ನಾಟಕೀಯತೆಯು ಮರಾಠಿಗರಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದ್ದರೂ ಸದ್ಯಕ್ಕಂತೂ ನಾಟಕವು ಹಠಯೋಗದಿಂದಲೇ ಬದುಕಬೇಕಾಗಿದೆ. ಶಿಕ್ಷಣ ಮತ್ತು ವಾಚನಪ್ರೀತಿ ಬೆಳೆದಿರುವದರಿಂದ ಎಂಥ ಬರೆವಣಿಗೆಗೂ ತಕ್ಕಷ್ಟು ಗಿರಾಕಿ ಇದೆ. ಆದರೂ ಮರಾಠಿ ಜನತೆಗೆ ತನ್ನ ಸಾಹಿತ್ಯದಿಂದ ಸಮಾಧಾನ ಬಂದಿಲ್ಲ. 'ಅಸಂತೋಷಃ ಶ್ರಿಯೋಮೂಲಂ' ಎಂಬುದು ನಿಜವಿದ್ದರೆ ಮಹಾರಾಷ್ಟ್ರಕ್ಕೆ ಇನ್ನುಮುಂದೆ ಸಾಹಿತ್ಯಶ್ರೀಯು ಒದಗಲಿದೆ ಎಂದು ಹೇಳಬಹುದು. ಟಿಳಕ, ಸಾವರಕರ, ಸಾನೇ ಗುರೂಜೀ, ಕೇಶವಸುತ, ವಿನೋಬಾಜಿ ಕೂಡ ಮರಾಠಿಗರಲ್ಲಿ ಅಸಮಾಧಾನ ಬಿತ್ತುತ್ತಿದ್ದಾರೆ.

ಬಿತ್ತಿರಿ ಬಿತ್ತಿರಿ ನವ ಬೀಜಗಳಾ
ಬಿತ್ತುವಿರಾಗಿರಿ ನವ ಆಸೆಗಳಾ ||

ಎಂದು 'ಅನಿಲ' ಕವಿ ಕೂಗಿದರೆ,

ಎಲ್ಲಿರುವೆಯೋ ಏಪೆದ್ದ ಭೈರವಾ
ತೆರೆತೆರೆ ನಿನ್ನಾ ಮೂರು ಕಣ್ಣುಗಳಾ
ಬೂದಿಮಾಡು ಇನ್ನಾದರು ನೀನು
ಬಿಮ್ಮಗೆ ನಿಂತಿಹ ಅಸ್ಥಿಪಂಜರ ||

ಎಂದು ಮರ್ಢೇಕರ ಆಜ್ಞಾಪಿಸುತ್ತಿದ್ದಾರೆ 'ಕಾಲಭೈರವನಿಗೆ'

ಪ್ರೇಮದ ಪಲ್ಲವಿಯಲ್ಲಿಯೂ
ಕೊಳಬೇಡ ನಿನ್ನಾಲಿಂಗನಾ
ಕೊಡಬೇಡ ನಿನ್ನಾ ಚುಂಬನಾ ||

ಎಂದು ಬಂದರೆ, ಮುಂದಿನ ಕಾಡಿನ ನುಡಿನುಡಿಯು ಗತಿಯೇನು

ಎಲ್ಲವು ಮೋಹಕ ಸುಂದರವೆಲ್ಲಾ
ಖಿನ್ನತೆ ಕಳೆಯದು ಸುಖವೇ ಇಲ್ಲಾ
ಜೀವವು ತಕಪಕ ಕುಣಿಯುತಿದೆ
ಏಕೋ ತಿಳಿಯದಿದೆ?

ಒಬ್ಬ ಕವಿ ಎನ್ನುತ್ತಾನೆ.

ಆತ್ಮಜ್ಯೋತಿಯ ಪುರೋಗತಿ
ಅದಕ್ಕೆ ಎನ್ನುವರೈ ಪ್ರೀತಿ
ವಿಶ್ವಾತ್ಮನದೋ ಮಧುಹಾಸ
ಜಗದೊಳಗದು ದಿವ್ಯದವಾಸ||

ಎಂದೂ ಕವಿಗಳು ಕಾಣದೆ ಇಲ್ಲ.